ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಸೆಪ್ಟೆಂಬರ್ 16, 2009 ರೂ. 12/-


ಹೊಳೆಗೆ ಹೊಸನೀರು
ಚಿದಾನಂದ ಸಾಲಿ



ರಕ್ತಸಿಕ್ತ ಬದುಕು ಸಾವು



420 ಸಚಿವ ಸುಧಾಕರ್



ಗುಲ್ಬರ್ಗ: ಮುಠ್ಠಾಳ ಡಿಸಿ

ಬುಲೆಟ್ ರವಿ ಕೊಲೆ: ಸುನಿಲನಿಗೆ MLA ವಿಶ್ವನಾಥ್ ಸುಪಾರಿ



ಬಿಜೆಪಿಗಳು ಆರೆಸ್ಸೆಸ್ ಆಳುಗಳು



ಗೋಳ್ವಾಲ್ಕರ್....

ಸದ್ಯ ರಾಜ್ಯದಲ್ಲಿ ಸರ್ಕಾರ ಬಿಜೆಪಿಯದ್ದಾದರೂ, ತೆರೆಮರೆಯಲ್ಲಿ ರಿಮೋಟ್ ಕಂಟ್ರೋಲ್ ಇರುವುದು ಆರೆಸ್ಸೆಸ್ ಕೈಯಲ್ಲಿ. ಈ ಸರ್ಕಾರ ಬಂದಾಗಿನಿಂದ ಅದು ತನ್ನ ಕಾಲಾಳುಗಳನ್ನು ಆಡಳಿತದ ಆಯಕಟ್ಟಿನ ಸ್ಥಾನಗಳಲ್ಲಿ ಕೂಡ್ರಿಸುತ್ತ ಬಂದಿದೆ. ಆ ಮೂಲಕ ತನ್ನ ಕುಟೀಲ ಹಿಂದೂತ್ವವಾದಿ ಅಜೆಂಡಾವನ್ನು ಸೈಲೆಂಟಾಗಿ ಜಾರಿಗೊಳಿಸುತ್ತಿದೆ. ಅದರ ಭಾಗವಾಗಿಯೇ ಸಂಸ್ಕೃತ ವೇದ ವಿ.ವಿ. ಸ್ಥಾಪಿಸಲು ಚಾಲನೆ ನೀಡಿದೆ. ಶಿಕ್ಷಕರಿಗೆ ಕೋಮುವಾದಿ ಸಂಸ್ಥೆಗಳಿಂದ ತರಬೇತಿ ಕೊಡಿಸುತ್ತಿದೆ. ತನ್ನ ಕೋಮುವೈಷಮ್ಯದ ಪುಸ್ತಕಗಳನ್ನು ಸರ್ಕಾರ ಖರೀದಿ ಮಾಡುವಂತೆ ಮಾಡಿದೆ. ಸಾವಯವ ಕೃಷಿ ಸಂಘಗಳಿಗೆ ಸಹಾಯಧನದ ಯೋಜನೆಯ ಮೂಲಕ ತನ್ನ ಕಟ್ಟಾ ಕಾರ್ಯಕರ್ತರಿಗೆ ನೆರವಾಗುತ್ತಿದೆ. ರಾಜ್ಯ ಜ್ಞಾನ ಆಯೋಗದಲ್ಲೂ ತನ್ನ ನಾಲ್ವರು ಕಾಲಾಳುಗಳನ್ನು ತುರುಕಿದೆ.



ಎಸ್.ಆರ್.ಲೀಲಾ

ಆರಂಭದಲ್ಲೇ ಅದು ಪಕ್ಕಾ ಹಿಂದೂತ್ವವಾದಿಗಳಾದ ನಿವೃತ್ತ ನ್ಯಾಯಮೂರ್ತಿ ರಾಮಾಜೋಯಿಸರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಿತು. ಸಂಘಪರಿವಾರದ ಧ್ಯೇಯಗಳನ್ನೇ ಭಗವದ್ಗೀತೆ ಅಂದುಕೊಂಡಿರುವ ಸಂಸ್ಕೃತ ಪ್ರವೀಣೆ ಡಾ.ಎಸ್.ಆರ್.ಲೀಲಾರನ್ನು ಎಂ.ಎಲ್.ಸಿ. ಮಾಡಿತು. ಇದು ಸಂಸ್ಕೃತ ವೇದ ವಿ.ವಿ.ಸ್ಥಾಪನೆಗೆ ಅಡಿಪಾಯ ಹಾಕಿದಂತಿತ್ತು.

ವಿದೇಶಿ ಕನ್ನಡಿಗರಿಂದ ರಾಜ್ಯಕ್ಕೆ ಬಂಡವಾಳ ಹರಿದುಬರುವಂತೆ ಮಾಡಲು ಒಂದು ಘಟಕ ಸ್ಥಾಪಿಸಬೇಕು ಎಂದು ವಿಶ್ವೇಶ್ವರ ಭಟ್ಟರ ಕೈಯಿಂದ ಬರೆಸಿತು ಆರೆಸ್ಸೆಸ್. ಮರುದಿನ ಮುಖಪುಟದಲ್ಲಿ 'ಇದು ಗುಡ್ ಐಡಿಯಾ' ಎಂದು ಯಡಿಯೂರಪ್ಪನಿಂದ ಹೇಳಿಕೆ ಬರುವಂತೆ ನೋಡಿಕೊಂಡಿತು. ವಾರೊಪ್ಪೊತ್ತಿನಲ್ಲಿ ಆ ಘಟಕ ರೆಡಿಯಾಯ್ತು. ಅದಕ್ಕೆ ಚೆಡ್ಡಿ ಎಂ.ಎಲ್.ಸಿ. ಗಣೇಶ್ ಕಾರ್ನಿಕ್‌ನನ್ನು ಮುಖ್ಯಸ್ಥನನ್ನಾಗಿ ಮಾಡಲಾಯ್ತು.




ಗಣೇಶ್ ಕಾರ್ನಿಕ್

ಮಂಗಳೂರು, ಮೈಸೂರುಗಳಲ್ಲಿ ಕೋಮುಗಲಭೆಗೆ ಕಾರಣವಾದ ಪರಿವಾರ ತನ್ನ ಸದಸ್ಯರನ್ನು ರಕ್ಷಿಸಲು ಗೃಹ ಇಲಾಖೆಯನ್ನೇ ಹಿಡಿತದಲ್ಲಿಟ್ಟುಕೊಂಡಿತು. ಇಷ್ಟೆಲ್ಲ ಆದರೂ ತಾನೊಂದು ಸಾಂಸ್ಕೃತಿಕ ಸಂಘಟನೆ, ಬಿಜೆಪಿಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ರೀಲು ಬಿಡುತ್ತಲೇ ಇರುತ್ತದೆ. ಆಗಾಗ ಪರಿಶುದ್ಧನಂತೆ ಪೋಸು ಕೊಟ್ಟು ಬಿಜೆಪಿಗೆ ನೈತಿಕ ಪಾಠವನ್ನು ಹೇಳುತ್ತಿರುತ್ತದೆ. ಗಣಿಗಳ್ಳರ ದುಡ್ಡಿಗಾಗಿ ಇಡೀ ಬಿಜೆಪಿಯನ್ನೇ ಅಡ ಇಟ್ಟರೂ ಆರೆಸ್ಸೆಸ್ ಸುಮ್ಮನಿರುತ್ತದೆ. ಆಪರೇಷನ್ ಕಮಲ ಎಂಬ ಹೊಲಸು ದಂಧೆಗೂ ಅದರ ಸಮ್ಮತಿಯಿದೆ. ಒಟ್ಟಿನಲ್ಲಿ ಅದಕ್ಕೆ ಬಿಜೆಪಿ ಅಧಿಕಾರದಲ್ಲಿರಬೇಕು. ರಿಮೋಟ್ ಕಂಟ್ರೋಲ್ ತನ್ನಲ್ಲಿರಬೇಕು.

ಈಗ ರಾಷ್ಟ್ರಮಟ್ಟದಲ್ಲಿ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತನೂ ಇಂಥದ್ದನ್ನೇ ಮಾಡುತ್ತಿದ್ದಾನೆ. ಜನರಿಂದ ಆಯ್ಕೆಯಾದ ಅಧ್ವಾನಿ, ಅನಂತಕುಮಾರ್‌ಗಳೆಲ್ಲ ಕೋಮು ವೈರಸ್ ಭಾಗವತನ ಪಾದಕ್ಕೆ ಬಿದ್ದು ಪಾವನವಾಗುತ್ತಿವೆ. ಕಳೆದ ಚುನಾವಣೆ ವೇಳೆ ಬೀದರಿನಲ್ಲಿ ಸೋನಿಯಾ ಗಾಂಧಿ 'ಅಧ್ವಾನಿ ಆರೆಸ್ಸೆಸ್ ಗುಲಾಮ' ಎಂದಿದ್ದು ಅಕ್ಷರಶಃ ಸತ್ಯ.

ಗಾಂಧಿಹತ್ಯೆಯ ನಂತರ ತನಗೊಂದು ರಾಜಕೀಯ ಮುಖ ಬೇಕು ಎಂದು ಯೋಚಿಸಿದ ಆರೆಸ್ಸೆಸ್ ಅದಕ್ಕಾಗಿ ಭಾರತೀಯ ಜನಸಂಘ ಸ್ಥಾಪಿಸಿತು. ತನ್ನ ಮೂವರು ಪ್ರಮುಖ ಪ್ರಚಾರಕ್‌ಗಳಾದ ಅಧ್ವಾನಿ, ವಾಜಪೇಯಿ, ದೀನದಯಾಳ್ ಉಪಾಧ್ಯರನ್ನು ಜನಸಂಘದಲ್ಲಿ ನಾಯಕರ ಸ್ಥಾನದಲ್ಲಿ ಕೂಡ್ರಿಸಿತು.

ಮಹಾರಾಷ್ಟ್ರದ ಸಿಂದಿ ಎಂಬಲ್ಲಿ 1954ರ ಮಾರ್ಚ್ 9ರಿಂದ 16ರವರೆಗೆ ತನ್ನ ಕಾರ್ಯಕರ್ತರಿಗೆ ರಾಜಕೀಯ ತರಬೇತಿ ಕಾರ್ಯಾಗಾರವನ್ನು ಆರೆಸ್ಸೆಸ್ ಏರ್ಪಡಿಸಿತು. ಮಾರ್ಚ್ 16ರಂದು ಭಾಷಣ ಮಾಡಿದ ಎಂ.ಎಸ್. ಗೋಳ್ವಾಲ್ಕರ್ "ಆರೆಸ್ಸೆಸ್‌ನಿಂದ ಆಯ್ದ ಹಲವರನ್ನು ನಾವು ರಾಜಕೀಯಕ್ಕೆ ಕಳಿಸುತ್ತೇವೆ. ಆದರೆ ಅವರು ನಾವು ಹೇಳಿದಂತೆ ನಡೆಯಬೇಕು. ನಾವು ಕಬಡ್ಡಿ ಆಡು ಅಂದರೆ ಕಬಡ್ಡಿ ಆಡಬೇಕು... ನಾವು ಕೂಡು ಅಂದರೆ ಕೂಡ್ರಬೇಕು. ನಿಲ್ಲು ಅಂದರೆ ನಿಲ್ಲಬೇಕು..." ಎಂದು ಆಜ್ಞೆ ಹೊರಡಿಸಿದ.



ಯಡ್ಡಿ

(ಗೋಲ್ವಾಳ್ಕರ್ ಎಂ.ಎಸ್. ಶ್ರೀ ಗುರೂಜಿ ಸಮಾಗರ್ ದರ್ಶನ್-Volume3)


ಅಂದಿನಿಂದ ಇಂದಿನವರೆಗ ಬಿಜೆಪಿಗಳು ಆರೆಸ್ಸೆಸ್‌ನ ಆಳುಗಳಂತೆ ಕೆಲಸ ಮಾಡುತ್ತಾ ಬಂದಿದ್ದಾರೆ. ಆ ಮೂಲಕ ಈ ದೇಶದ ಜನರನ್ನು ವಂಚಿಸುತ್ತಾ ಬಂದಿದ್ದಾರೆ.

ಇದಕ್ಕೆ ಯಡ್ಡಿಯೂ ಹೊರತಲ್ಲ. ಮೈ.ಚ.ಜಯದೇವ ಎಂಬ ಮುಖರಹಿತ ಮನೆಹಾಳನ ಮುಂದೆ ಸಿ.ಎಂ.ಸಾಹೇಬರು ನಾಯಿಕುನ್ನಿಯಂತೆ ತಲೆಯಾಡಿಸಿ ಬರುತ್ತಿದ್ದಾರೆ.

ಕರ್ನಾಟಕದ ಜನತೆಗೆ ಇದಕ್ಕಿಂತ ಅವಮಾನ ಬೇಕೆ?

ಚಂದ್ರನ ಮ್ಯಾಲ ಝೇಂಡಾ.... ಸಕ್ಸಸ್ ಆಯ್ತು ಅಜೆಂಡಾ!

'ಎಮ್ಮೆ ಕಳೆದಿದೆ, ಹುಡುಕಿಕೊಡಿ' ತರಹದ ಜಾಹೀರಾತಿನಂತೆ 'ಚಂದ್ರ ನೌಕೆ ಕಳೆದಿದೆ, ಹುಡುಕಿಕೊಡಿ' ಎಂದು ಅಮೆರಿಕ, ರಷ್ಯಾಗಳ ಕಡೆ ಮುಖ ಮಾಡಿದ್ದಾರೆ ಇಸ್ರೋ ಬಾಹ್ಯಾಕಾಶ ಪರಿಣತರು. 386 ಕೋಟಿ ರೂ.ಗಳ ಚಂದ್ರಯಾನ-1 ನಿಗದಿತ ಅವಧಿಗೆ ಮೊದಲೇ ಅಂತ್ಯಗೊಂಡಿದೆ. ಚಂದ್ರನಲ್ಲಿ ಹಾರುತ್ತಿರುವ ತ್ರೀ-ಕಲರ್ ಝೇಂಡಾವನ್ನು ನೆನೆಸಿಕೊಂಡು ಹೆಮ್ಮೆಪಡಲು ನಾನೂರು ಕೋಟಿ ಸುರಿದ ದೇಶ ಚಂದ್ರಯಾನ-2ರ ತಯಾರಿಯಲ್ಲಿದೆ. ಮಂಗಳ ಟ್ರಿಪ್‌ಗೆ ಯೋಜನೆಯೊಂದನ್ನು ರೂಪಿಸುತ್ತಿದೆ.



ನಿಜಕ್ಕೂ ಚಂದ್ರಯಾನ ಭಾರತಕ್ಕೆ ಅಗತ್ಯವಿತ್ತೆ? ನಿತ್ಯ ಕೋಟ್ಯಾಂತರ ಜನ ಹಸಿವಿನಿಂದ ಬಳಲುವ ದೇಶವೊಂದರ ಆದ್ಯತೆಗಳೇನಿರಬೇಕು? ಚಂದ್ರಯಾನಗಳಿಂದ ನಾವು ಸಾಧಿಸುವುದಾದರೂ ಏನನ್ನು?

ಇಸ್ರೋ ಸಂಪರ್ಕ, ಹವಾಮಾನ ಉಪಗ್ರಹಗಳ ಮೂಲಕ ಈ ದೇಶದ ಜನಸಾಮಾನ್ಯನಿಗೂ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿ ಅತ್ಯುತ್ತಮ ಹೆಸರು ಪಡೆದಿದೆ. ಆದರೆ ಈಗ ಚಂದ್ರಯಾನ ವೈಫಲ್ಯದಿಂದ ಅದೀಗ ವಿಲನ್ ಸ್ಥಾನದಲ್ಲಿ ನಿಲ್ಲಬೇಕಾಗಿದೆ.

ಭಾರತೀಯರು ಚಂದ್ರಯಾನ, ಪೋಖ್ರಾನ್ ಪರೀಕ್ಷೆಗಳನ್ನು ಭಾವನಾತ್ಮಕ ನೆಲೆಯಲ್ಲಿ ಸ್ವೀಕರಿಸಿ ಹೆಮ್ಮೆಪಡುವುದರಿಂದ ಇಂತಹ ಯೋಜನೆಗಳನ್ನು ವಿರೋಧಿಸುವುದು ದೇಶದ್ರೋಹದಂತೆ ಕಾಣತೊಡಗುತ್ತದೆ. ಅಷ್ಟಕ್ಕೂ ಚಂದ್ರಯಾನ ಆರಂಭದಿಂದಲೇ ಅವಘಡಗಳಿಗೆ ತುತ್ತಾಗುತ್ತಾ ಬಂದಿರುವುದನ್ನು ಮುಚ್ಚಿಡುತ್ತಲೇ ಬಂದ ಇಸ್ರೋ ನೌಕೆ ಕಣ್ಮರೆಯಾಗುವ ತಿಂಗಳು ಮೊದಲು ಯಾನದಲ್ಲಾದ ದೋಷಗಳನ್ನು ಒಪ್ಪಿಕೊಂಡಿತ್ತು, ಅಂದರೆ ಈ ಯಾನ ಪ್ರತಿಷ್ಠೆಗಾಗಿ ನಡೆದದ್ದೇ ಹೊರತು ಅದರಿಂದ ಅಂತಹ ಉಪಯೋಗಗಳಿಲ್ಲ.

ಅಕ್ಟೋಬರ್ 22, 2008ರಂದು ಪ್ರಯಾಣ ಆರಂಭಿಸಿದ ನೌಕೆಯಲ್ಲಿ ನವೆಂಬರ್‌ನಲ್ಲೇ ಸಮಸ್ಯೆಗಳು ಆರಂಭವಾಗಿದ್ದವು! ಆದರೆ ಆಗ ಅದನ್ನು ಮುಚ್ಚಿಟ್ಟ ಇಸ್ರೋ ವಿಜ್ಞಾನಿಗಳು ನವೆಂಬರ್ 14ರಂದು ಚಂದ್ರನ ಮೇಲೆ ಭಾರತದ ತ್ರಿವರ್ಣ ಧ್ವಜ ಹಾರಿಸಿದ್ದನ್ನೇ ದೊಡ್ಡದು ಮಾಡಿ ದೇಶದ ಮಧ್ಯಮವರ್ಗದವರಲ್ಲಿ ಪುಳಕವನ್ನುಂಟುಮಾಡುತ್ತಾ ಬಂದರು. ಪ್ರಯಾಣ ಆರಂಭಿಸಿದ ಒಂದು ತಿಂಗಳಲ್ಲೇ ನೌಕೆಯ ವಿದ್ಯುತ್ ಉಪವ್ಯವಸ್ಥೆಗಳು ಒಂದರ ಹಿಂದೆ ಒಂದರಂತೆ ಕೈಕೊಟ್ಟವು. 2009ರ ಏಪ್ರಿಲ್‌ನಲ್ಲಿ ಪ್ರಮುಖ ಸ್ಟಾರ್ ಸೆನ್ಸಾರ್ ಕಾರ್ಯ ನಿಲ್ಲಿಸಿತು. ಸ್ವಲ್ಪ ದಿನಗಳಲ್ಲಿ ಬ್ಯಾಕ್‌ಅಪ್ ಸೆನ್ಸಾರ್ ಕೂಡಾ ವಿಶ್ರಾಂತಿಗೆ ಜಾರಿತು. ಚಂದ್ರನ ಸುತ್ತಲಿನ ಶಾಖ ಮತ್ತು ವಿಕಿರಣಶೀಲತೆಯಿಂದಾಗಿ ನೌಕೆಯ ಅನೇಕ ಉಪಕರಣಗಳು ಸುಟ್ಟುಹೋದವು. 2009ರ ಮೇನಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಇಸ್ರೋ ಅಧಿಕಾರಿಗಳು ಮೇಲಿನ ವೈಫಲ್ಯಗಳನ್ನು ಮುಚ್ಚಿಟ್ಟು ಎಲ್ಲವೂ ಯೋಜನೆಯಂತೆ ಸರಾಗವಾಗಿ ನಡೆದಿದೆ ಎಂದು ಸುಳ್ಳು ಹೇಳಿದರು. ಶಾಖ ಮತ್ತು ವಿಕಿರಣಶೀಲತೆಯ ಕಾರಣಕ್ಕಾಗಿ ನೌಕೆಯನ್ನು ಚಂದ್ರನಿಂದ ಇನ್ನಷ್ಟು ದೂರ ಸರಿಸುವ ಪ್ರಯತ್ನವನ್ನು ಮೇನಲ್ಲಿ ಇಸ್ರೋ ಮಾಡಿತ್ತು. ಅದರಲ್ಲೂ ವಿಫಲವಾಗಿತ್ತು. ಇದನ್ನು ಅದು ಒಪ್ಪಿಕೊಂಡಿದ್ದು ಜುಲೈನಲ್ಲಿ. ಜನರಿಂದ ಅಪಾರ ಗೌರವ ಪಡೆದಿರುವ ಇಸ್ರೋ ಯಾಕ್ಹೀಗೆ ತನ್ನ ವೈಫಲ್ಯಗಳನ್ನು ಮುಚ್ಚಿಡುತ್ತ ಬಂತು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಗಡಿರಕ್ಷಣೆ, ಉಪಗ್ರಹ ಉಡಾವಣೆ ಇಂತಹ ವಿಷಯಗಳಲ್ಲಿ ಪ್ರಶ್ನೆ ಎತ್ತುವುದೇ ಅಪರಾಧವೆಂಬಂತೆ ರಾಜಕೀಯ ಪಕ್ಷಗಳು ವರ್ತಿಸುತ್ತಿರುವುದು, ಮಾಧ್ಯಮಗಳು ಕೂಡಾ 'ವೈಜ್ಞಾನಿಕ ಪ್ರಯೋಗಗಳಲ್ಲಿ ಇಂತಹ ಏರಿಳಿತ ಸಹಜ' ಎಂಬ ಅಭಿಪ್ರಾಯ ರೂಪಿಸುವುದರಿಂದಾಗಿ ಇಸ್ರೋನಂತಹ ಸಂಸ್ಥೆಗಳು ಯಾರಿಗೂ ಉತ್ತರದಾಯಿಗಳಾಗಿ ಉಳಿಯುವುದಿಲ್ಲ. ಇತ್ತೀಚಿಗೆ ರಷ್ಯಾ, ಅಮೆರಿಕಾಗಳೂ ಕೂಡ ಹೊಸ ಚಂದ್ರಯಾತ್ರೆಗಳಿಗೆ ಹಿಂದೇಟು ಹಾಕುತ್ತಿವೆ. ಏಕೆಂದರೆ ಅಲ್ಲೀಗ ಸಂಶೋಧನೆ ನಡೆಸುವುದು ವ್ಯರ್ಥವೆಂದೇ ಬಹುತೇಕ ವಿಜ್ಞಾನಿಗಳೂ ಅಭಿಪ್ರಾಯಪಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಇಸ್ರೋಗೆ ಈ ಹನಿ'ಮೂನ್' ಬೇಕಿತ್ತೇ? ಜೊತೆಗೆ ಚಂದ್ರಯಾನ-2 ಯಾವ ಪುರುಷಾರ್ಥಕ್ಕಾಗಿ?

1998ರ ಪೋಖ್ರಾನ್ ಪರೀಕ್ಷೆಯು ಉದ್ದೇಶಿತ ಫಲಿತಾಂಶ ನೀಡಿರಲಿಲ್ಲ ಎಂಬ ಸತ್ಯವೂ ಈಗ ಬಯಲಾಗಿದೆ. 1 ಲಕ್ಷ 50 ಸಾವಿರ ಕೋಟಿ ವೆಚ್ಚದ ವಿಶಿಷ್ಟ ಗುರುತಿನ ಸಂಖ್ಯೆ ನೀಡುವ ಯೋಜನೆಯೂ ಮತ್ತೊಂದು ಚಂದ್ರಯಾನವೇ ಸರಿ....

'ಚಂದ್ರಯಾನ ನೌಕೆ ಈಗ ಕಕ್ಷೆಯಲ್ಲಿದೆಯೇ?' ಎಂಬ ಪ್ರಶ್ನೆಗೆ ಇಸ್ರೋ ಅಧಿಕಾರಿಯೊಬ್ಬರು 'ಖಂಡಿತ ಖಂಡಿತ... ಅದು ಕಕ್ಷೆಯಲ್ಲಿ ಸುತ್ತುತ್ತಿದೆ" ಎಂದು ಗಿಣಿಶಾಸ್ತ್ರದವರಂತೆ ಮಾತಾಡಿದ್ದಾರೆ.

ಚಂದ್ರಯಾನದ ಈ ಪ್ರಹಸನ ನೋಡಿದಾಗ 'ನೀಲು' ಕವನವೊಂದು ನೆನಪಾಗುತ್ತಿದೆ:

ಮೊನ್ನೆ ಚಿತ್ರಕಾರನೊಬ್ಬ
ಕಾಮನಬಿಲ್ಲ ನೋಡಲು ಪರ್ವತ ಹತ್ತಿ
ಕಾಲು ಮುರಿದುಕೊಂಡದ್ದು
ತಮಾಷೆ...

● ಪಿ.ಕೆ.ಮಲ್ಲನಗೌಡರ್

"ಇಸ್ರೋ, ಡಿಆರ್‌ಡಿಒಗಳಂತಹ ಸಂಸ್ಥೆಗಳು ಜನರಿಗೆ ಉತ್ತರದಾಯಿಗಳಾಗುವಂತೆ ಮಾಡಬೇಕಿದೆ.

ಜನರಿಗೆ ಉತ್ತರದಾಯಿಯಾಗಲಿ


ಅಂದರೆ ಇಂತಹ ವೈಜ್ಞಾನಿಕ ಸಂಸ್ಥೆಗಳು ಕೈಗೊಳ್ಳುವ ಯೋಜನೆಗಳು ಮೊದಲು ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುವಂತಾಗಬೇಕು. ಆ ಮೂಲಕ ವಿಜ್ಞಾನವನ್ನು ಜನ ಮುನ್ನಡೆಸುವಂತಾಗಬೇಕು. ಈಗಿನಂತೆ ವಿಜ್ಞಾನಿಗಳ ಪ್ರತಿಷ್ಠೆ ಮೆರೆಯಲು ನೂರಾರು ಕೋಟಿಗಳು ವ್ಯಯವಾಗಬಾರದು.

ಬಹುತೇಕ ಔಷಧಿಗಳ ಮೇಲೆ ನಮಗೆ ಸ್ವಾಯತ್ತತೆಯಿಲ್ಲ, ಅದಕ್ಕಾಗಿ ನಾವು ಪಶ್ಚಿಮದ ಕಡೆ ಮುಖ ಮಾಡಬೇಕಿದೆ. ಮೊದಲು ಅಂತಹ ಅತಿ ಅಗತ್ಯವಾದ ಸ್ವಾಯತ್ತತೆಗಳನ್ನು ಹೊಂದುವತ್ತ ಸರ್ಕಾರ ಚಿಂತಿಸಬೇಕು. ಅದು ಬಿಟ್ಟು ಚಂದ್ರನ ವಿವರಗಳ ಮೇಲೆ ಸ್ವಾಯತ್ತತೆ ಸಾಧಿಸಲು ತಿಣುಕಾಡುವುದನ್ನು ನಿಲ್ಲಿಸಬೇಕು. ಏಕೆಂದರೆ ಭಾರತದಂತಹ ದೇಶಕ್ಕೆ ಅದು ಆದ್ಯತೆಯ ವಿಷಯವೇ ಅಲ್ಲ...

ವಾಯ್-ಕುಗಳ

ಸಿ.ಎಂ. ಕುರ್ಚಿಯ
ಧೂಳು ಹೊಡೆದರೆ
ಬಳ್ಳಾರಿ ಅದಿರಿನ ವಾಸನೆ
* * *
ಅಧ್ವಾನಿಗೆ ಆಸನ ಬರುಕ
ಭಾಗವತನ ಕೈಯಲ್ಲಿ
ಸೂಜಿದಾರ
* * *
ಚಂದ್ರನೌಕೆ ಕಣ್ಮರೆ
ಇಸ್ರೋದಲ್ಲಿ
ನಿತ್ಯ ಅಮಾವಾಸ್ಯೆ
* * *
ಕರಂದ್ಲಾಜೆ ಕಂಡ
ಕನ್ನಿಮೋಳಿ 'ಚಿಕ್ಕಮ್ಮ'
ಎಂದು ಅಪ್ಪಿದಳಂತೆ

-ಮು



ಅಲ್ಲಿ ಇಲ್ಲಿ ಓದಿದ್ದು....



ಕಂಡಹಾಗೆ

■ ಗೌರಿ ಲಂಕೇಶ್

ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ...ಲಾಂರವರನ್ನು ನಮ್ಮ ರಾಜಕಾರಣಿಗಳು ಮತ್ತು ...ಾಧ್ಯಮಗಳು ಎಷ್ಟು ಕೊಂಡಾಡಿ ...ಟ್ಟಕ್ಕೇರಿಸಿದ್ದಾರೆಂದರೆ ಕಲಾಂರನ್ನು ಟೀಕಿಸಿದರೇನೇ ...ಶಕ್ಕೇ ದ್ರೋಹ ಬಗೆದಂತೆ ಎಂದು ಜನ ...ವಿಸುತ್ತಾರೆ. ಆದರೂ ಮೊನ್ನೆ ಚುರುಮುರಿ ...ಗ್‌ನಲ್ಲಿ ಚೆನ್ನೈ ಮೂಲದ ಅರವಿಂದ ...ಮಿನಾಥನ್ ಎಂಬುವವರು ಕಲಾಂರ ಅಸಲಿ ...ುಖವನ್ನು ತೆರೆದಿಟ್ಟಿದ್ದಾರೆ. ಅರವಿಂದರ ಪ್ರಕಾರ ...ಲಾಂರವರು ನಿರಂತರ ಸ್ವ-ಪ್ರಚಾರ, ...ವಕಾಶವಾದಿ ರಾಜಕಾರಣ ಮತ್ತು ಹುಸಿ ...ಶಪ್ರೇಮವನ್ನು ಮೆರೆಯುವ ಮೂಲಕವೇ ...ನ್ನ ಇಮೇಜ್ ಅನ್ನು ವೃದ್ಧಿಸಿಕೊಂಡರು. ಅದಕ್ಕೆ ...ಯಾಗಿ ನಮ್ಮ ಟೀಕಾರಹಿತ ಮಾಧ್ಯಮಗಳು ...ಡ ಪ್ರೋತ್ಸಾಹ ನೀಡಿದವು."

ಉದಾಹರಣೆ 1: ಕಲಾಂ ಅವರು ಮಿಸೈಲ್ ...ತ್ರಜ್ಞರಾಗಿದ್ದರೂ ಅವರನ್ನು ಮಾಧ್ಯಮಗಳು ...ಪರಮಾಣು ವಿಜ್ಞಾನಿ' ಎಂದೇ ಬಣ್ಣಿಸುತ್ತವೆ.

ಉದಾಹರಣೆ 2: ಕಲಾಂ ಅವರು ...ಕೃತವಾಗಿ ಪಿಎಚ್‌ಡಿ ಪಡೆಯದಿದ್ದರೂ ...ವರನ್ನು 'ಡಾ' ಎಂದೇ ಸಂಬೋಧಿಸಲಾಗುತ್ತದೆ.

ಉದಾಹರಣೆ 3: ಮಿಸೈಲ್ ಅಭಿವೃದ್ಧಿ ...ೋಜನೆಯ ನೇತೃತ್ವವನ್ನು ಕಲಾಂ ವಹಿಸಿದ್ದಾಗ ...ಲವಾರು ಪ್ರಯೋಗಗಳು ವಿಫಲಗೊಂಡಿದ್ದವು. ...ದರೂ ಅವರನ್ನು 'ಮಿಸೈಲ್ ಮ್ಯಾನ್' ಎಂದು ...ಾಧ್ಯಮಗಳು ಕರೆಯುತ್ತವೆ.

ಆತನ ಶುಷ್ಕವೀಯ ಭಾಷಣಗಳನ್ನು ...ಸ್ಫೂರ್ತಿದಾಯಕ' ಎಂದೂ, ಆತನ ಸಾಮಾನ್ಯವಾದ ...ಚಾರಗಳನ್ನು 'ಪ್ರೇರಣದಾಯಕ' ಎಂದೂ ...ಾಧ್ಯಮಗಳು ಬಣ್ಣಿಸುತ್ತವೆ.

ಅದೃಷ್ಟವಶಾತ್ ಕಲಾಂ ಸುತ್ತ ಹಬ್ಬಿರುವ ...ಂತಹ ಕಲ್ಪಿತ ವರ್ಚಸ್ಸುಗಳನ್ನು ಕೆಡವಲು ...ವರಾದರೂ ಕಳೆದ ವಾರ ಯತ್ನಿಸಿದ್ದಾರೆ. ...ಡಿಆರ್‌ಡಿಓ ಸಂಸ್ಥೆಯಲ್ಲಿ ಕಲಾಂರೊಂದಿಗೆ ಕೆಲಸ ...ಡಿದ್ದ ವಿಜ್ಞಾನಿ ಕೆ. ಸಂಥಾನಂ ಅವರು ...ಖ್ರಾನ್ 2 ಯಶಸ್ವಿಯಾಗಿರದಿದ್ದರೂ ಕಲಾಂ ...ು ಯಶಸ್ವಿ ಪ್ರಯೋಗ ಎಂದು ಘೋಷಿಸಿದ್ದು ...” ಎಂದಿದ್ದಾರೆ. ಹಾಗೆಯೇ ಆಟೋಮಿಕ್ ...ರ್ಜಿ ಕಮೀಷನ್ನಿನ ಮಾಜಿ ಮುಖ್ಯಸ್ಥ ...ಎನ್. ಸೇತ್ನಾ ಅವರೂ 'ಸ್ಫೋಟಕ ಶಕ್ತಿಯುಳ್ಳ ...ರೇನಿಯಂ ಬಗ್ಗೆ ಕಲಾಂಗೆ ಏನೇನೂ ಗೊತ್ತಿಲ್ಲ" ...ಿದ್ದಾರೆ. ಅರವಿಂದರ ಪ್ರಕಾರ ಇವರಿಬ್ಬರೂ ...ಂರ ಮುಖವಾಡವನ್ನು ಬಿಚ್ಚಿ ದೇಶಕ್ಕೆ ದೊಡ್ಡ ...ಿ ಸಲ್ಲಿಸಿದ್ದಾರೆ.

ನಿಮಗೇನನ್ನಿಸುತ್ತೆ?

* * * * *

ನಮ್ಮ ದೇಶದ ಬಹಳಷ್ಟು ಜನರ ಪ್ರತಿನಿತ್ಯದ ...ಕಿನಲ್ಲಿ 'ಜಾತಿ' ಎಂಬುದು ಒಂದಲ್ಲೊಂದು ...ಪದಲ್ಲಿ ಪಾತ್ರ ವಹಿಸಿರುತ್ತದೆ. ಇನ್ನು ಅವರ ...ಸಾಮಾಜಿಕ-ಆರ್ಥಿಕ-ರಾಜಕೀಯ ಬದುಕಂತೂ ...ಯಿಂದ ಬೇರ್ಪಡಿಸದಷ್ಟು ...ಸುಕೊಂಡಿರುತ್ತದೆ. ಹೀಗಿರುವಾಗಲೂ 2011 ...ನಡೆಯಲಿರುವ ಜನಗಣತಿ ಪ್ರಕ್ರಿಯೆಯಲ್ಲಿ ...ಯನ್ನೂ ಸೇರಿಸಬೇಕೆಂಬ ಮನವಿಯನ್ನು ...ನ್ನೆ ನಮ್ಮ ಸುಪ್ರೀಂಕೋರ್ಟ್ ತಿರಸ್ಕರಿಸಿದೆ. ಈ ...ೆ CII ಮತ್ತು FICCI ಎಂಬ ಬೃಹತ್ ...ಮಿಗಳ ಸಂಘಟನೆಗಳು ಖಾಸಗಿ ವಲಯದಲ್ಲಿ ...ಸಲಾತಿ ನೀತಿಯನ್ನು ಜಾರಿಗೊಳಿಸಬಾರದೆಂದು ...್ಟು ಹಿಡಿದಿವೆ.

ಒಂದು ಸಮುದಾಯದ ಏಳಿಗೆಗೆ ಜಾತಿ ...ಬುದು ನಿಜವಾಗಲೂ ನಗಣ್ಯವಾಗಿದ್ದರೆ ...ು ಹೇಗೆ ನಮ್ಮ ದೇಶದ ಒಟ್ಟು ...ಸಂಖ್ಯೆಯಲ್ಲಿ ಕೇವಲ 6% ಇರುವ ...ಹ್ಮಣ-ಬನಿಯಾ- ಜೈನ್ ...ಮುದಾಯಗಳು ಇಲ್ಲಿನ ಆರ್ಥಿಕ ...್ತು ಸಾಮಾಜಿಕ ವ್ಯವಸ್ಥೆಗಳ ಮೇಲೆ ...0% ಹಿಡಿತ ಸಾಧಿಸಿವೆ? ಯಾಕೆ ...ಡ ಜನಸಂಖ್ಯೆಯಲ್ಲಿ ಶೇ. 50% ...ರುವ ಶೂದ್ರರಾಗಲಿ, ಸುಮಾರು 40% ...ಷ ಹಿಂದುಳಿದ ಮತ್ತು ಪರಿಶಿಷ್ಟ ಜಾತಿ/ ವರ್ಗಗಳಾಗಲಿ ಈ ಶ್ರೀಮಂತರ, ಪ್ರಭಾವಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ? ಇತ್ತೀಚೆಗೆ ಆಕಾರ್ ಪಟೇಲ್ ಎಂಬುವವರು ಒಂದು ಪಟ್ಟಿ ತಯಾರಿಸಿದ್ದಾರೆ. ಅದರಲ್ಲಿ ಹೇಗೆ ಬ್ರಾಹ್ಮಣ-ಬನಿಯಾ-ಜೈನ್ ಸಮುದಾಯಗಳು ಇಡೀ ದೇಶದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿವೆ. ಎಂಬುದನ್ನು ಕುರಿತು ಒಂದು ಪಕ್ಷಿನೋಟ ನೀಡಿದ್ದಾರೆ. ಅದರ ಮುಖ್ಯ ಅಂಶಗಳು ಹೀಗಿವೆ:

* ಅಧಿಕಾರದ ರೇಖೆ: ಜವಾಹರಲಾಲ್ ನೆಹರೂ ಎಂಬ ಬ್ರಾಹ್ಮಣ ಮಹಾತ್ಮ ಗಾಂಧಿ (ಬನಿಯಾ ಜಾತಿಯಲ್ಲಿ ಜನಿಸಿದ್ದವರು)ಯವರ ಆಶೀರ್ವಾದದಿಂದಲೇ ಈ ದೇಶದ ಪ್ರಥಮ ಪ್ರಧಾನಿಯಾಗಿ ಹೊರಹೊಮ್ಮಿದರು.

* ದೇಶಕ್ಕೆ ಸ್ವಾತಂತ್ರ ಬಂದನಂತರ ಉತ್ತರ ಪ್ರದೇಶ (ಗೋವಿಂದ್ ವಲ್ಲಭ್ ಪಂತ್), ಮಧ್ಯಪ್ರದೇಶ (ರವಿಶಂಕರ್ ಶುಕ್ಲ), ರಾಜಸ್ಥಾನ (ಎಚ್.ಎಲ್. ಶಾಸ್ತ್ರಿ), ಕೇರಳ (ಇ.ಎಂ.ಎಸ್. ನಂಬೂದರಿಪಾದ್), ಪಂಜಾಬ್ (ಜಿ.ಸಿ. ಭಾರ್ಗವ್) ಮತ್ತು ಅಸ್ಸಾಮ್ (ಜಿ.ಎನ್. ಬೋರ್ದಲೇ) ರಾಜ್ಯಗಳ ಮುಖ್ಯಮಂತ್ರಿಗಳಾದವರೆಲ್ಲ ಬ್ರಾಹ್ಮಣರು. ಆಗ ಗುಜರಾತಿನ ಪ್ರಥಮ ಮುಖ್ಯಮಂತ್ರಿಯಾದ ಜೀವರಾಜ್ ಮೆಹ್ತಾ ಬನಿಯಾ ಜಾತಿಗೆ ಸೇರಿದವರಾಗಿದ್ದರು.

* ಅದೆಲ್ಲ ಹಳೇ ಕತೆ. ಇವತ್ತಿನ ಪರಿಸ್ಥಿತಿಯತ್ತ ನೋಡೋಣ. ಸಾರ್ವಜನಿಕ ಕಂಪನಿಗಳಾದ ಬಿಎಚ್‌ಇಎಲ್ (ರವಿಕುಮಾರ್ ಕೃಷ್ಣ ಸ್ವಾಮಿ), ಎನ್‌ಟಿಪಿಸಿ (ಆರ್.ಎಸ್. ಶರ್ಮಾ), ಓಎನ್‌ಜಿಸಿ (ಮತ್ತೋರ್ವ ಆರ್.ಎಸ್. ಶರ್ಮಾ)ಗಳನ್ನು ನಡೆಸುತ್ತಿರುವವರೆಲ್ಲ ಬ್ರಾಹ್ಮಣರೇ. ಹಾಗೆಯೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಓ.ಪಿ. ಭಟ್), ಪಂಜಾಬ್ ನ್ಯಾಷನಲ್ ಬ್ಯಾಂಕ್ (ಕೆ.ಸಿ. ಚಕ್ರಬೊರ್ತಿ) ಮತ್ತು ಬ್ಯಾಂಕ್ ಆಫ್ ಬರೋಡಾ (ಎಂ.ಡಿ. ಮಲ್ಯ) ಎಂಬ ರಾಷ್ಟ್ರೀಕೃತ ಬ್ಯಾಂಕುಗಳ ಮುಖ್ಯಸ್ಥರಾಗಿ ಬ್ರಾಹ್ಮಣರೇ ಇದ್ದರೆ ಕೆನರಾ ಬ್ಯಾಂಕ್ ಎಂಬ ಮತ್ತೊಂದು ರಾಷ್ಟ್ರೀಕೃತ ಬ್ಯಾಂಕಿನ ಮುಖ್ಯಾಧಿಕಾರಿ (ಎ.ಸಿ. ಮಹಾಜನ್) ಬನಿಯಾ.

ಹಾಗೆಯೇ ಎಸಿಸಿ (ಸುಮೀತ್ ಬ್ಯಾನರ್ಜಿ), ಹಿಂದೂಸ್ತಾನ್ ಲಿವರ್ (ನಿತಿನ್ ಪರಾಂಜಪೆ), ಎಲ್& ಟಿ (ಎ.ಎಂ. ನಾಯ್ಕ್) ಮತ್ತು ಟಾಟಾ ಸ್ಟೀಲ್ (ಬಿ. ಮುಥರಾಮನ್) ಎಂಬ ಕಂಪನಿಗಳ ಮುಖ್ಯಸ್ಥರು ಬ್ರಾಹ್ಮಣರಾಗಿದ್ದರೆ, ರಿಲಯನ್ಸ್ ಕಂಪನಿಯ ಮುಖೇಶ್ ಮತ್ತು ಅನಿಲ್ ಅಂಬಾನಿ ಎಂಬ ಸಹೋದರರಿಂದ ಹಿಡಿದು ಭಾರತಿ ಏರ್‌ಟೆಲ್ (ಸುನಿಲ್ ಮಿತ್ತಲ್), ಗ್ರಾಸಿಮ್ ಮತ್ತು ಹಿಂಡಾಲ್ಕೊ (ಕುಮಾರ ಮಂಗಳಂ ಬಿರ್ಲಾ), ಸ್ಟೆರ್ಲೈಟ್ ಗ್ರೂಪ್ (ಅನಿಲ್ ಅಗರ್‌ವಾಲ್) ಹಾಗೂ ಸನ್ ಫಾರ್ಮಾ (ದಿಲೀಪ್ ಸಾಂಘವಿ) ಎಂಬ ಕಂಪನಿಗಳ ಮಾಲೀಕತ್ವವನ್ನು ಹೊಂದಿರುವವರೆಲ್ಲ ಬನಿಯಾಗಳೆ.

ಇನ್ನು ಭಾರತದ ಸಾಫ್ಟ್‌ವೇರ್ ಕಂಪನಿಗಳಲ್ಲಿ ಪ್ರತಿಷ್ಠಿತವಾದ ಇನ್‌ಫೋಸಿಸ್ ಕಂಪನಿಯ ಈಗಿನ ಮುಖ್ಯಸ್ಥ ಕ್ರಿಸ್ ಗೋಪಾಲಕೃಷ್ಣನ್, ಹಿಂದಿನ ಮುಖ್ಯಸ್ಥರಾದ ನಾರಾಯಣಮೂರ್ತಿ ಮತ್ತು ನಂದನ್ ನಿಲೇಕಣಿ.... ಎಲ್ಲರೂ ಬ್ರಾಹ್ಮಣರೇ. ಸಾಫ್ಟ್‌ವೇರ್ ಕಂಪನಿಗಳಲ್ಲಿ ಖ್ಯಾತವಾಗಿರುವ ಟಿಸಿಎಸ್ ಅನ್ನು ಸುಬ್ರಮಣಿಯನ್ ರಾಮದೊರೈ ಎಂಬ ಬ್ರಾಹ್ಮಣ ನಡೆಸುತ್ತಿದ್ದರೆ ವಿಪ್ರೋದ ಮಾಲೀಕ ಅಜೀಂ ಪ್ರೇಮ್‌ಜಿ ಎಂಬ ಮುಸಲ್ಮಾನ. ಇವರು ಶಿಯಾ ಪಂಗಡಕ್ಕೆ ಸೇರಿದ ಖೋಜಾ ಸಮುದಾಯದವರಾಗಿದ್ದು ಹಿಂದಿನ ಕಾಲದಲ್ಲಿ (ಎಲ್.ಕೆ. ಅಡ್ವಾಣಿ ಮತ್ತು ಎಂ.ಎ. ಜಿನ್ನಾರಂತೆಯೇ) ಲುಹಾನಾ ಎಂಬ ವ್ಯಾಪಾರಿ ಸಮುದಾಯದಿಂದ ಮತಾಂತರಗೊಂಡವರು.

ಭಾರತದ ವಿಮಾನಯಾನ ಕ್ಷೇತ್ರದಲ್ಲಿ ಅತಿದೊಡ್ಡ ಖಾಸಗಿ ಕಂಪನಿಗಳಲ್ಲಿ ಒಂದಾದ ಕಿಂಗ್‌ಫಿಷರ್‌ನ ಮಾಲೀಕ ವಿಜಯ ಮಲ್ಯ (ಬ್ರಾಹ್ಮಣ) ಆಗಿದ್ದರೆ, ಮತ್ತೊಂದಾದ ಜೆಟ್ ಏರ್‌ವೇಸ್‌ನ ಮಾಲೀಕ ನರೇಶ್ ಗೋಯಲ್ (ಬನಿಯಾ).

ಮೊಬೈಲ್ ಫೋನ್ ಕ್ಷೇತ್ರದಲ್ಲೂ ಈ ಬ್ರಾಹ್ಮಣ-ಬನಿಯಾ ಪ್ರಾಮುಖ್ಯತೆ ಕಾಣಿಸುತ್ತದೆ. ರಿಲೈಯನ್ಸ್ (ಅಂಬಾನಿ), ಏರ್‌ಟೆಲ್ (ಮಿತ್ತಲ್), ವೊಡಾಫೋನ್ (ರೂಯಾ), ಐಡಿಯಾ (ಬಿರ್ಲಾ), ಸ್ಪೈಸ್ (ಮೋದಿ)ನ ಮಾಲೀಕತ್ವಗಳು ಬನಿಯಾಗಳ ಹಿಡಿತದಲ್ಲಿದ್ದರೆ, ಟಾಟಾ ಕಂಪನಿಯ ಟಿಟಿಎಂಎಲ್ ಕಂಪನಿಯನ್ನು ಕೆ.ಎ. ಚಾಕರ್ ಎಂಬ ಬ್ರಾಹ್ಮಣ ನಡೆಸುತ್ತಿದ್ದು, ಸಾರ್ವಜನಿಕ ವಲಯದ ಬಿಎಸ್‌ಎನ್‌ಎಲ್‌ನ ಮುಖ್ಯಸ್ಥ ಕುಲ್‌ದೀಪ್ ಗೋಯಲ್ ಎಂಬ ಬನಿಯಾ!

ಕ್ರಿಕೆಟ್ ಕೂಡ ಈ ಜಾತಿ ಹಿಡಿತದಿಂದ ಹೊರತಾಗಿಲ್ಲ. ಇವತ್ತು ನಮ್ಮ ದೇಶದ ಗಲ್ಲಿಗಲ್ಲಿಗಳಲ್ಲಿ ಅಭಿಮಾನದ ಹುಚ್ಚೆಬ್ಬಿಸುವ ಕ್ರಿಕೆಟ್ ಎಂಬ ವ್ಯವಹಾರದ ನೇತೃತ್ವ ಲಲಿತ್ ಮೋದಿ ಎಂಬ ಬನಿಯಾನ ಕೈಯಲ್ಲಿರುವುದು ನಿಜವಾದರೂ ಈ ಹಿಂದೆಯೂ ಜಗಮೋಹನ ದಾಲ್ಮಿಯಾ ಎಂಬ ಮತ್ತೋರ್ವ ಬನಿಯಾನ ಹಿಡಿತದಲ್ಲಿತ್ತು. ಕ್ರಿಕೆಟ್ ಎಂಬುದು ಇವತ್ತು ಒಂದು ಕ್ರೀಡೆಯಾಗಿರದೆ ಕೋಟ್ಯಂತರ ರೂಪಾಯಿಗಳ ಮನರಂಜನೆ ಆಗಿರುವುದರ ಹಿಂದಿನ ಗುಟ್ಟು ಇದರಲ್ಲಿ ಅಡಗಿರಬಹುದೇ?

ಮಾಧ್ಯಮಗಳು ಕೂಡ ಕೆಲಜಾತಿಗಳ ಹಿಡಿತದಲ್ಲಿವೆ. ದೇಶದ ಅತಿಹೆಚ್ಚು ಪ್ರಸಾರ ಸಂಖ್ಯೆಯುಳ್ಳ ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಒಂದಾದ ಟೈಮ್ಸ್ ಆಫ್ ಇಂಡಿಯಾ ಜೈನರ ಹಿಡಿತದಲ್ಲಿದ್ದರೆ, ಹಿಂದೂಸ್ತಾನ್ ಟೈಮ್ಸ್ ಬನಿಯಾ ಬಿರ್ಲಾಗಳ ಹಿಡಿತದಲ್ಲಿದೆ. ಹಾಗೆಯೇ ಇಂಡಿಯನ್ ಎಕ್ಸ್‌ಪ್ರೆಸ್‌ನ ಮಾಲೀಕರ ಗೋಯಂಕಾ ಬನಿಯಾ ವಂಶದವರಾಗಿದ್ದರೆ, ದಿ ಹಿಂದೂ ಬ್ರಾಹ್ಮಣ ಕೃಷ್ಣ ಅಯ್ಯಂಗಾರ್ ಫ್ಯಾಮಿಲಿಯ ಹಿಡಿತದಲ್ಲಿದೆ. ಕನ್ನಡದ ಸುವರ್ಣ ಚಾನೆಲ್ ಸೇರಿದಂತೆ ಹಲವಾರು ಭಾಷೆಗಳ ಚಾನೆಲ್‌ಗಳ ಮೇಲೆ ಹಿಡಿತ ಹೊಂದಿರುವ ಝೀ ಚಾನೆಲ್‌ನ ಮಾಲೀಕ ಸುಭಾಷ್ ಚಂದ್ರ ಗೋಯಲ್ ಓರ್ವ ಬನಿಯಾ.


ಕನ್ನಡದ ನಂಬರ್ ಒನ್ ದಿನಪತ್ರಿಕೆ ಎಂದು ಹೇಳಿಕೊಳ್ಳುವ ವಿಜಯ ಕರ್ನಾಟಕ ಸೇರಿದಂತೆ, ಗುಜರಾತ್ ಸಮಾಚಾರ್ ಎಂಬ ಗುಜರಾತಿ ಪತ್ರಿಕೆ ಹಾಗೂ ಲೋಕ್‌ಮತ್ ಎಂಬ ಮರಾಠಿ ಪತ್ರಿಕೆಯ ಮಾಲೀಕರೂ ಟೈಮ್ಸ್‌ನ ಧಣಿಗಳಾದ ಜೈನರೆ. ಹಾಗೆಯೇ ದೈನಿಕ್ ಜಾಗರಣ್ ಎಂಬ ಹಿಂದಿ ಪತ್ರಿಕೆ, ದೈನಿಕ್ ಭಾಸ್ಕರ್ ಎಂಬ ಗುಜರಾತಿ ಪತ್ರಿಕೆಗಳ ಮಾಲೀಕರು ಅಗರ್‌ವಾಲ್ ಎಂಬ ಬನಿಯಾ ಕುಟುಂಬ.

ನಮ್ಮ ದೇಶದ ಸ್ಟೀಲ್ ಕಂಪನಿಗಳ ಮೇಲಂತೂ ಬನಿಯಾಗಳದ್ದೇ ಪರಮಾಧಿಪತ್ಯ. ಎಸ್ಸಾರ್ (ರೂಯಾ), ಆರ್ಸೆಲಾರ್ ಮಿತ್ತಲ್ (ಲಕ್ಷ್ಮಿ ಮಿತ್ತಲ್), ಇಸ್ಪಾಟ್ (ಮಿತ್ತಲ್), ಜಿಂದಾಲ್ ಹಾಗೂ ಭೂಷಣ್ ಸ್ಟೀಲ್ (ಸಿಂಘಾಲ್)ಗಳನ್ನು ಬನಿಯಾ ವಂಶಗಳೇ ಹೊಂದಿದ್ದರೆ, ಸರ್ಕಾರಿ ಮಾಲೀಕತ್ವದ SAIL ನ ಮುಖ್ಯಸ್ಥ (ಎಸ್.ಕೆ. ರೂಂಗ್ಟಾ) ಕೂಡ ಓರ್ವ ಬನಿಯಾ.

ಅಂಬುಜಾ (ನಿಯೋಟಿಯಾ ಮತ್ತು ಸೇಖ್‌ಸಾರಿಯ), ದಾಲ್ಮಿಯಾ, ಅಲ್ಟ್ರಾಟೆಕ್ ಮತ್ತು ವಿಕ್ರಮ್ ಎಂಬ ಸಿಮೆಂಟ್ ಕಂಪನಿಗಳ ಮಾಲೀಕರೆಲ್ಲರೂ ಬನಿಯಾಗಳೇ. ಹಾಗೆಯೇ ಹಿಂದೂಸ್ತಾನ್ ಮೋಟರ್ಸ್‌ನ ಬಿರ್ಲಾಗಳು ಮತ್ತು ಬಜಾಜ್ ಆಟೋದ ಬಜಾಜ್‌ಗಳು ಕೂಡ ಅದೇ ಬನಿಯಾ ಸಮುದಾಯದವರು. ಹಳೆಯ ಪರ್ಮಿಟ್ ರಾಜ್ ವ್ಯವಸ್ಥೆಯಾಗಿರಲಿ, ಇಂದಿನ ಖಾಸಗೀಕರಣ ನೀತಿಯಾಗಿರಲಿ ಆರ್ಥಿಕ ವ್ಯವಸ್ಥೆಯ ಮೇಲೆ ಈ ಬ್ರಾಹ್ಮಣ-ಬನಿಯಾ-ಮೇಲುಜಾತಿಯ ಹಿಡಿತವನ್ನು ಯಾರಿಂದಲೂ ಸಡಿಲಗೊಳಿಸಲಾಗಿಲ್ಲ.

ಈ ಮಧ್ಯೆ ರಾಜಕೀಯ ರಂಗದಲ್ಲಿ ಒಂದು ಬದಲಾವಣೆಯಂತೂ ಕಂಡಿದೆ. ದೇಶದ ಜನಸಂಖ್ಯೆಯ ಶೇಖಡ 50 ಕ್ಕಿಂತಲೂ ಹೆಚ್ಚಿನವರಾದ ಶೂದ್ರ ಸಮುದಾಯದ ನಾಯಕರು ಹಲವಾರು ರಾಜ್ಯಗಳ ಮುಖ್ಯಮಂತ್ರಿಗಳಾಗಿದ್ದಾರೆ. ಆಂಧ್ರ ಪ್ರದೇಶದಲ್ಲಿ ಶೂದ್ರ-ಕ್ರಿಶ್ಚಿಯನ್ ವೈ.ಎಸ್.ಆರ್. ರೆಡ್ಡಿ (ನಿನ್ನೆಯ ದುರ್ಘಟನೆಯ ತವಕ), ಬಿಹಾರದಲ್ಲಿ ಕುರ್ಮಿ ನಿತೀಶ್ ಕುಮಾರ್, ಹರಿಯಾಣದಲ್ಲಿ ಜಾಟ್ ಭುಪಿಂದರ್ ಹೂಡಾ, ಕರ್ನಾಟಕದಲ್ಲಿ ಲಿಂಗಾಯತ ಯಡಿಯೂರಪ್ಪ, ಕೇರಳದಲ್ಲಿ ಎಜಾವ ವಿ.ಎಸ್. ಅಚ್ಯುತಾನಂದನ್, ಮಧ್ಯಪ್ರದೇಶದಲ್ಲಿ ಇತರೆ ಹಿಂದುಳಿದ ವರ್ಗಗಳ ಶಿವರಾಜ್ ಚೌಹ್ಹಾಣ್, ಮಹಾರಾಷ್ಟ್ರದಲ್ಲಿ ಮರಾಠ ಅಶೋಕ್ ಚೌಹ್ಹಾಣ್, ರಾಜಸ್ಥಾನದಲ್ಲಿ ಮಾಲಿ ಜಾತಿಯ ಅಶೋಕ್ ಗೆಹ್ಲಾಟ್, ಪಂಜಾಬಿನಲ್ಲಿ ಜಾಟ್ ಪ್ರಕಾಶ್ ಬಾದಲ್, ತಮಿಳುನಾಡಿನಲ್ಲಿ ವೆಲ್ಲಲಾರ್ ಜಾತಿಯ ಎಂ. ಕರುಣಾನಿಧಿ ಎಂಬ ಶೂದ್ರರು ಮುಖ್ಯಮಂತ್ರಿಗಳಾಗಿದ್ದರೆ ಉತ್ತರ ಪ್ರದೇಶದಲ್ಲಿ ಮಾಯಾವತಿ ಎಂಬ ದಲಿತ ಮಹಿಳೆ ಮುಖ್ಯಮಂತ್ರಿಯಾಗಿದ್ದಾರೆ. ಪ್ರಸ್ತುತ ಭಾರತದಲ್ಲಿ ಓರ್ವ ಬ್ರಾಹ್ಮಣ ಮಾತ್ರ ದೊಡ್ಡ ರಾಜ್ಯವೊಂದರ ಮುಖ್ಯಮಂತ್ರಿಯಾಗಿದ್ದಾರೆ. ಆತ ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ.

ಆಕಾರ್ ಪಟೇಲ್ ಪ್ರಕಾರ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಶೂದ್ರರ ಕೈಯಲ್ಲಿ ರಾಜಕೀಯ ಶಕ್ತಿಯೂ ಇರಲಿಲ್ಲ, ಆರ್ಥಿಕ ಬಲವೂ ಇರಲಿಲ್ಲ. ಆದರೆ ಚುನಾವಣಾ ಪ್ರಜಾಪ್ರಭುತ್ವದಿಂದಾಗಿ ಈಗ ಶೂದ್ರನಿಗೆ ರಾಜಕೀಯ ಶಕ್ತಿ ಬಂದಿದೆ. ಆದರೂ ಆರ್ಥಿಕ ಕ್ಷೇತ್ರಗಳ ಮೇಲೆ ಬ್ರಾಹ್ಮಣ ಮತ್ತು ಬನಿಯಾಗಳು ಬಿಗಿಮುಷ್ಟಿಯನ್ನು ಇಂದಿಗೂ ಹೊಂದಿರುವುದರಿಂದ, ಖಾಸಗಿ ವಲಯದಲ್ಲಿ ಮೀಸಲಾತಿ ಪದ್ಧತಿ ಜಾರಿಗೆ ಬರುವವರೆಗೂ ಆ ಕ್ಷೇತ್ರ ಶೂದ್ರನಿಗೆ ಮತ್ತು ಇತರೆ ಹಿಂದುಳಿದವರಿಗೆ ದುರ್ಬಲಕೆಯಾಗಿಯೇ ಉಳಿಯಲಿದೆ. ●



ಕಳ್ಳನಲ್ಲದಿದ್ದರೆ ಮನಸ್ಸೇಕೆ ಹುಳ್ಳುಹುಳ್ಳಗೆ?

ಇತ್ತೀಚಿಗೆ ನ್ಯಾಯಾಧೀಶರ ಆಸ್ತಿ ಬಹಿರಂಗಗೊಳಿಸುವ ವಿಚಾರ ದೇಶಾದ್ಯಂತ ಚರ್ಚೆಗೆ ಗ್ರಾಸವಾಗಿದೆ.

ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಕರ್ನಾಟಕದ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಕೇಂದ್ರ ಕಾನೂನು ಸಚಿವರಾಗಿ ಅಧಿಕಾರ ವಹಿಸಿಕೊಂಡ ಮೇಲೆ ನ್ಯಾಯಾಂಗ ವ್ಯವಸ್ಥೆಯನ್ನು ಇನ್ನಷ್ಟು ಪಾರದರ್ಶಕ ಮಾಡು ವುದಕ್ಕೆ ಕೈ ಹಾಕಿದರು. ನ್ಯಾಯಾಧೀಶರಿಗೂ ಉತ್ತರದಾಯಿತ್ವ ಇರಬೇಕು ಎಂದು ಪ್ರತಿಪಾದಿಸ ತೊಡಗಿದರು. ಅದಕ್ಕಾಗಿ ಸೂಕ್ತ ಕಾನೂನು ಜಾರಿಗೆ ತರಲು ಪ್ರಯತ್ನಿಸಿದರು. ಅದರಲ್ಲಿ ಪ್ರಮುಖ ವಾದುದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟುಗಳ ನ್ಯಾಯಮೂರ್ತಿಗಳನ್ನೂ ಒಳಗೊಂಡಂತೆ ಎಲ್ಲಾ ನ್ಯಾಯಾಧೀಶರು ತಮ್ಮ ಆಸ್ತಿ ಪಾಸ್ತಿಗಳನ್ನು ಬಹಿರಂಗಪಡಿಸಬೇಕು ಎಂಬುದು.

ಆದರೆ ಇಂಥ ಒಂದು ಪ್ರಸ್ತಾವ ಬರುತ್ತಿದ್ದಂತೆಯೇ ಹಲವಾರು ನ್ಯಾಯಾಧೀಶರು ಹೌಹಾರಿದರು. ಸೀದಾಸಾದಾ ಇರುವ ನ್ಯಾಯಾಧೀಶರು ಇದನ್ನು ಬೆಂಬಲಿಸಿದರೆ ಮನಸ್ಸು ಹುಳ್ಳುಹುಳ್ಳಗೆ ಇರುವವರು ವಿರೋಧಿಸತೊಡಗಿದರು. ನ್ಯಾಯಾಂಗದಲ್ಲಿ ಒಮ್ಮತವಿಲ್ಲ ಎಂಬ ಕಾರಣ ಕೊಟ್ಟು ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ಕೂಡ ಅಪಸ್ವರ ತೆಗೆದರು. ಕೊನೆಗೂ ವಾದವಿವಾದ, ಚರ್ಚೆ ನಡೆದು ಈಗ ಅವರೂ ಒಪ್ಪಿಕೊಂಡಿದ್ದಾರೆ. ಇಲ್ಲಿ ಪ್ರಶ್ನೆ ಏಳುವುದು ನ್ಯಾಯಾಧೀಶರುಗಳು ಅಷ್ಟೊಂದು ಕಳ್ಳರಾಗಿಲ್ಲದಿದ್ದರೆ ಅವರ ಮನಸ್ಸೇಕೆ ಹುಳ್ಳುಹುಳ್ಳಗೆ ಇದೆ ಎಂಬುದು.


ನಿಜ ಹೇಳಬೇಕೆಂದರೆ ಸಾರ್ವಜನಿಕ ವಲಯದ ಎಲ್ಲಾ ವಿಭಾಗಗಳೂ ಭ್ರಷ್ಟಗೊಂಡಿರುವಂತೆ ನ್ಯಾಯಾಂಗ ವ್ಯವಸ್ಥೆಯೂ ಭ್ರಷ್ಟಾಚಾರದಲ್ಲಿ ಮುಳುಗಿದೆ. '2006ರ ಅಂತಾರಾಷ್ಟ್ರೀಯ ಪಾರದರ್ಶಕತೆ ವರದಿ'ಯ ಪ್ರಕಾರ ನಮ್ಮ ದೇಶದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬಿಟ್ಟರೆ ಅತ್ಯಂತ ಭ್ರಷ್ಟಾಚಾರ ನಡೆಯುವುದು ನ್ಯಾಯಾಂಗ ವ್ಯವಸ್ಥೆಯಲ್ಲೆ. ಸುಪ್ರೀಂ ಕೋರ್ಟಿನ ಸುಪ್ರಸಿದ್ಧ ವಕೀಲ ಪ್ರಶಾಂತ್ ಭೂಷಣ್ ಅವರ ಮಾತುಗಳಲ್ಲೇ ಹೇಳುವುದಾದರೆ ಇಲ್ಲಿಯತನಕ ಬಂದ 16-17 ಮುಖ್ಯ ನ್ಯಾಯಮೂರ್ತಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಭ್ರಷ್ಟರೇ ಆಗಿದ್ದಾರೆ. ಅದಕ್ಕವರು ಜ್ವಲಂತ ಉದಾಹರಣೆಗಳನ್ನೂ ಕೊಡುತ್ತಾರೆ. ಕೆಲವು ಉದಾಹರಣೆಗಳನ್ನೇ ನೋಡಿ.

ಈ ಹಿಂದೆ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿದ್ದ ವೈ.ಎಸ್.ಸಬರ್‌ವಾಲ್ ಅವರು ತಮ್ಮ ಮಗನ ಮಾಲ್ ದಂಧೆಗೆ ಅನುಕೂಲವಾಗಲೆಂಬ ಕಾರಣಕ್ಕೆ ದೆಹಲಿಯ ಜನವಸತಿ ಪ್ರದೇಶದಲ್ಲಿದ್ದ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಮುಚ್ಚುವ ಆದೇಶ ಹೊರಡಿಸಿದ್ದರು. ಆ ಮೂಲಕ ತನ್ನ ಮಗ ಇನ್ನಿತರ ರಿಯಲ್ ಎಸ್ಟೇಟ್ ಕುಳಗಳ ಜೊತೆ ಸೇರಿ ನಡೆಸುತ್ತಿದ್ದ ವ್ಯಾಪಾರದಲ್ಲಿ ನೂರಾರು ಕೋಟಿ ಗಳಿಸುವಂತೆ ನೋಡಿಕೊಂಡರು.



ನ್ಯಾಯಮೂರ್ತಿ ಭಲ್ಲಾ ಅವರು ದೆಹಲಿಗೆ ಹೊಂದಿಕೊಂಡಂತಿರುವ ನೊಯಿಡಾದಲ್ಲಿ ನಾಲ್ಕು ಕೋಟಿ ಬೆಲೆಬಾಳುವ ಜಮೀನನ್ನು ಕೇವಲ ನಾಲ್ಕು ಲಕ್ಷಕ್ಕೆ ಖರೀದಿಸಿದರು. ರಿಯಲ್ ಎಸ್ಟೇಟ್ ಕುಳಗಳ ಈ ಸೇವೆಗೆ ಪ್ರತಿಯಾಗಿ ನ್ಯಾಯಮೂರ್ತಿ ಭಲ್ಲಾ ಅವರು ತಮಗೆ ಉಪಕಾರ ಮಾಡಿದ ಎಲ್ಲಾ ರಿಯಲ್ ಎಸ್ಟೇಟ್ ಧಣಿಗಳ ಕೇಸುಗಳನ್ನೆಲ್ಲಾ ಖುದ್ದಾಗಿ ತಾವೇ ವಿಚಾರಣೆ ನಡೆಸಿ ಅವರ ಪರವಾಗಿ ತೀರ್ಪು ಕೊಟ್ಟರು.

ಇದೇ ಭಲ್ಲಾ ಅವರು ಲಕ್ನೋ ಹೈಕೋರ್ಟಿನ ನ್ಯಾಯಮೂರ್ತಿಯಾಗಿದ್ದಾಗ ಇಂತಹುದೇ ಇನ್ನೊಂದು ಕೆಲಸ ಮಾಡಿದ್ದರು. ಆಗ ರಿಲಯನ್ಸ್ ಪವರ್ ಕಂಪೆನಿಗೆ ಸಂಬಂಧಿಸಿದ ವ್ಯಾಜ್ಯವೊಂದನ್ನು ತಾವೇ ಖುದ್ದಾಗಿ ವಿಚಾರಣೆ ನಡೆಸಿ ಕಂಪೆನಿಯ ಪರವಾಗಿ ತೀರ್ಪಿತ್ತರು. ಅದೂ ರಾತ್ರಿ ಹನ್ನೊಂದು ಗಂಟೆಗೆ ತಮ್ಮ ಮನೆಯಲ್ಲೇ ತುರ್ತಾಗಿ ವಿಚಾರಣೆ ಮಾಡಿ ತೀರ್ಪು ಕೊಟ್ಟರು. ಹಕೀಕತ್ತೇನೆಂದರೆ ರಿಲಯನ್ಸ್ ಕಂಪೆನಿಯ ಪರವಾಗಿ ವಾದಿಸುತ್ತಿದ್ದವರು ಬೇರಾರೂ ಅಲ್ಲ, ಭಲ್ಲಾ ಅವರ ಪುತ್ರ! ಪುತ್ರನ ಪರವಾಗಿ, ಅದೂ ಹೊತ್ತಲ್ಲದ ಹೊತ್ತಿನಲ್ಲಿ ತೀರ್ಪಿತ್ತ ಅವರ ಕ್ರಮವನ್ನು ವಿರೋಧಿಸಿ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ವೈ.ಎಸ್.ಸಬರ್‌ವಾಲ್ ಅವರನ್ನು ಹಲವರು ಬೇಡಿಕೊಂಡರೂ ಸಬರ್‌ವಾಲ್ ಅದಕ್ಕೆ ಕವಡೆ ಕಾಸಿನ ಕಿಮ್ಮತ್ತು ಕೊಡಲಿಲ್ಲ.



ಜಸ್ಟೀಸ್ ಸಬರ್‌ವಾಲ್


ಇನ್ನೊಂದು ಪ್ರಕರಣದಲ್ಲಿ ನ್ಯಾಯಮೂರ್ತಿ ವಿಜೇಂದರ್ ಜೈನ್ ಅವರು ತಮ್ಮ ಸ್ನೇಹಿತ ಮತ್ತು ಸಂಬಂಧಿಯೊಬ್ಬರ ಕೇಸನ್ನು ವಿಚಾರಣೆ ನಡೆಸಿ ಅವರ ಪರವಾಗಿಯೇ ತೀರ್ಪಿತ್ತರು. ಹತ್ತಿರದ ಸಂಬಂಧಿಗಳ ಕೇಸುಗಳನ್ನು ವಿಚಾರಣೆ ನಡೆಸುವುದು ನೈತಿಕವಾಗಿ ಸಲ್ಲದು. ಆದರೂ ಜೈನ್ ಆ ಕೆಲಸ ಮಾಡಿದರು. ನ್ಯಾಯಮೂರ್ತಿ ಭಲ್ಲಾ ಅವರು ಇಂದಿಗೂ ರಾಜಸ್ಥಾನ್ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿ ಮುಂದುವರೆಯುತ್ತಿದ್ದರೆ ವಿಜೇಂದರ್ ಜೈನ್ ಪಂಜಾಬ್-ಹರಿಯಾಣ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಿದರು.

ನ್ಯಾಯಮೂರ್ತಿಗಳು ಹೀಗೆ ಸ್ವಜನಪಕ್ಷಪಾತ ಪ್ರದರ್ಶಿಸಿರುವ, ಹಣಕ್ಕಾಗಿ ನ್ಯಾಯವನ್ನು ಬಲಿಕೊಟ್ಟಿರುವ ಅದೆಷ್ಟೋ ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು. ಆದರೆ ಅಂಥ ಭ್ರಷ್ಟ ನ್ಯಾಯಾಧೀಶರನ್ನು ಪ್ರಶ್ನಿಸುವ ಅಥವಾ ಅವರನ್ನು ಕೆಲಸದಿಂದ ವಜಾ ಮಾಡುವುದಕ್ಕೆ ನಮ್ಮಲ್ಲಿ ಸರಿಯಾದ ಕಾನೂನುಗಳೇ ಇಲ್ಲ. ಹೀಗಾಗಿ ಅವರಾಡಿದ್ದೇ ಆಟ ಎಂಬಂತಾಗಿಬಿಟ್ಟಿದೆ. ನಮ್ಮಲ್ಲಿ ಒಬ್ಬ ನ್ಯಾಯಾಧೀಶನ ವಿರುದ್ಧ ದೋಷಾರೋಪಣೆ ಮಾಡುವುದಕ್ಕಾಗಿ ಕನಿಷ್ಠ 100 ಸಂಸದರ ಸಹಿ ಬೇಕಾಗುತ್ತದೆ. ಆದರೆ ಯಾವ ಸಂಸದರೂ ಇದಕ್ಕೆ ಸಹಿ ಹಾಕುವುದಿಲ್ಲ. ಏಕೆಂದರೆ ಅವರದ್ದೇ ಅಥವಾ ಅವರ ಪಕ್ಷದ್ದೇ ಹಲವಾರು ಕೇಸುಗಳು ನ್ಯಾಯಾಧೀಶರ ಮುಂದಿರುತ್ತವೆ. ತಾವು ದೋಷಾರೋಪಣೆಗೆ ಸಹಿ ಹಾಕಿದರೆ ತಮ್ಮ ವಿರುದ್ಧ ತೀರ್ಪು ನೀಡುತ್ತಾರೆಂಬ ಭಯ ಅವರಿಗಿರುತ್ತದೆ. ಉದಾಹರಣೆ ಹೇಳಬೇಕೆಂದರೆ, ನ್ಯಾಯಮೂರ್ತಿ ಭಲ್ಲಾ ವಿರುದ್ಧದ ದೋಷಾರೋಪಣೆಗೆ ಸಹಿ ಹಾಕುವುದಕ್ಕೆ ಬಿಜೆಪಿ ನಿರಾಕರಿಸಿತು. ಏಕೆಂದರೆ ಇ[...] ನ್ಯಾಯಮೂರ್ತಿ ಭಲ್ಲಾ ಅವರೆ ಬಿಜೆಪಿಯ ಎಲ್.ಕೆ.ಅಡ್ವಾಣಿಯವರನ್ನು ಬಾಬ್ರಿ ಮಸೀದಿ ಧ್ವಂ[...] ಪ್ರಕರಣದಲ್ಲಿ ಖುಲಾಸೆ ಮಾಡಿದ್ದರು. ಹಾಗಾಗಿ, ಬಿಜೆಪಿ ಭಲ್ಲಾ ವಿರುದ್ಧದ ದೋಷಾರೋಪಣೆಗೆ ಸಹಿ ಹಾಕಲು ನಿರಾಕರಿಸುವ ಮೂಲಕ ಅವರಿಗೆ ಕೃತಜ್ಞ[...] ಸಲ್ಲಿಸಿತು.

ಅಲ್ಲದೇ ನ್ಯಾಯಾಧೀಶರ ವಿರುದ್ಧದ ದೂರುಗಳನ್ನು ವಿಚಾರಣೆ ನಡೆಸುವುದಕ್ಕೆ ಸರ್ಕಾರ ಮತ್ತು ನ್ಯಾಯಾಂಗವನ್ನು ಹೊರತುಪಡಿಸಿದ ಸ್ವತಂತ್ರವಾಗಿರುವ ಒಂದು ಅಂಗವೇ ನಮ್ಮಲ್ಲಿಲ್ಲ. ಅಲ್ಲದೇ ಮುಖ್ಯ ನ್ಯಾಯಮೂರ್ತಿ ವೀರಸ್ವಾಮಿಯವರು "ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಿಂದ ಪೂರ್ವಾನುಮತಿ ಪಡೆಯದೇ ಯಾವ ನ್ಯಾಯಾಧೀಶರ ವಿರುದ್ಧವೂ ಕ್ರಿಮಿನಲ್ ವಿಚಾರಣೆ ನಡೆಸುವಂತಿಲ್ಲ" ಎಂಬ ಆದೇಶವನ್ನು ನೀಡಿದ್ದಾರೆ. ಇದರಿಂದ ಒಂದು ವೇಳೆ ನ್ಯಾಯಾಧೀಶರು ಅಪರಾಧ ಮಾಡಿದ್ದರೂ ಅವರ ಮೇಲೆ ಕೇಸು ದಾಖಲಿಸುವಂತಿಲ್ಲ.



ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ನೋಡುವುದಾದ[...] ಭಾರತದಲ್ಲಿ ನ್ಯಾಯಾಧೀಶರು ಪ್ರಶ್ನಾತೀತರು ಎಂಬ ಭಾವನೆ ದಟ್ಟವಾಗಿ ಬೆಳೆದುಬಿಟ್ಟಿದೆ. ಸ್ವ[...] ಸಮಾಜವೊಂದು ನಿರ್ಮಾಣವಾಗಬೇಕಾದರೆ ಈ[...] ಪರದೆಯನ್ನು ಹರಿಯುವ ಕೆ[...] ಆಗಬೇಕಿದೆ. ನ್ಯಾಯಾಧೀಶರ ಆಸ್ತಿಪಾಸ್ತಿಗಳನ್ನು ಬಹಿರಂಗಗೊಳಿಸುವ ಮಸೂದೆಗೆ ಚಾಲನೆ ದೊರೆತಿರುವುದು ಇಂಥ ಪ್ರಕ್ರಿಯೆಯ ಮೊದಲ ಸ್ವಾಗತಾರ್ಹ ಹೆಜ್ಜೆಯಾಗಿದೆ. ಆದರೆ ಸಾಗಬೇಕಾದ ದಾರಿಯಿನ್ನೂ ಬಹಳವಿದೆ.




▶ಕುಮಾರ್ ಬುರಡಿಕಟ್ಟಿ

ನೇಪಾಳದಲ್ಲಿ 'ಹಿಂದಿ ಜ್ವರ'

ನಮ್ಮ ದೇಶವನ್ನೂ ಒಳಗೊಂಡಂತೆ ವಿಶ್ವದ ಹತ್ತಾರು ದೇಶಗಳು ಹಂದಿ ಜ್ವರದಿಂದ ಬಳಲುತ್ತಿದ್ದರೆ ನಮ್ಮ ಪಕ್ಕದ ಹಿಮಾಲಯನ್ ದೇಶ ನೇಪಾಳದಲ್ಲಿ 'ಹಿಂದಿ ಜ್ವರ' ಪ್ರಾರಂಭವಾಗಿದೆ. ನೇಪಾಳದ ಉಪಾಧ್ಯಕ್ಷ ಪರಮಾನಂದ ಜಾ ಅವರು ದೇಶದ ಕಾನೂನನ್ನು ಉಲ್ಲಂಘಿಸಿ ಹಿಂದಿ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು ಎಂಬುದೇ ಈ ವಿವಾದ ಏಳಲು ಕಾರಣವಾಗಿದೆ. ಪ್ರೇಮದಾಸ ಜಾ ಅವರು ಮೂಲತಃ ತೆರಾಯಿ ಪ್ರದೇಶದವರು. ಭಾರತಕ್ಕೆ ಹೊಂದಿಕೊಂಡಂತಿರುವ ಈ ಪ್ರದೇಶದಲ್ಲಿ ಜನ ಹಿಂದಿ ಭಾಷೆಯನ್ನು ವ್ಯಾಪಕವಾಗಿ ಮಾತನಾಡುತ್ತಾರೆ. ಜಾ ಅವರು ಈ ಪ್ರದೇಶದಿಂದ ಬಂದಿದ್ದಾರಾದರೂ ಅವರ ಮಾತೃ ಭಾಷೆ ಹಿಂದಿಯಲ್ಲ, ಬದಲಿಗೆ ಮೈಥಿಲಿ. ನೇಪಾಳದ ಸಂವಿಧಾನದ ಪ್ರಕಾರ ಜನಪ್ರತಿನಿಧಿಗಳು ಕಡ್ಡಾಯವಾಗಿ ನೇಪಾಳಿ ಭಾಷೆಯಲ್ಲೇ ಪ್ರಮಾಣವಚನ ಸ್ವೀಕರಿಸಬೇಕು. ಜಾ ಅವರಿಗೆ ನೇಪಾಳಿ ಬರುವುದಿಲ್ಲವೆಂದೇನಲ್ಲ, ಅವರು ತಮ್ಮ ಮಾತೃ ಭಾಷೆಯಾದ ಮೈಥಿಲಿ ಮತ್ತು ನೇಪಾಳಿ ಎರಡೂ ಭಾಷೆಯನ್ನು ಚೆನ್ನಾಗಿ ಬಲ್ಲವರು. ಆದರೂ ಅವೆರಡನ್ನೂ ಬಿಟ್ಟು ಹಿಂದಿಯಲ್ಲಿ ಪ್ರಮಾಣವಚನ ಸ್ವೀಕರಿಸಿದ್ದು ಸಹಜವಾಗಿ ನೇಪಾಳದಲ್ಲಿ ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಹಾಗೆ ನೋಡಿದರೆ ಇದು ಕೇವಲ ಒಂದು ಭಾಷೆಯ ಪ್ರಶ್ನೆಯಷ್ಟೇ ಅಲ್ಲ, ನೇಪಾಳದೊಂದಿಗೆ ಭಾರತ ಇಲ್ಲಿಯತನಕ ಎಂಥ ಸಂಬಂಧವನ್ನು ಕಾಯ್ದುಕೊಂಡು ಬಂದಿದೆ ಎಂಬ ಮೂಲಭೂತ ಪ್ರಶ್ನೆಯೊಂದಿಗೆ ನೇರವಾಗಿ ಹೆಣೆದುಕೊಂಡಿರುವ ವಿಚಾರ. ದಕ್ಷಿಣ ಏಶಿಯಾದಲ್ಲಿ ಭಾರತ ಮೊದಲಿನಿಂದಲೂ ದೊಡ್ಡಣ್ಣನಂತೆಯೇ ವರ್ತಿಸುತ್ತಾ ಬಂದಿದ್ದು ಅಕ್ಕಪಕ್ಕದ ಚಿಕ್ಕಪುಟ್ಟ ದೇಶಗಳು ತನ್ನ ಅಣತಿಯಂತೆ ವರ್ತಿಸಬೇಕೆಂದು ಬಯಸುತ್ತದೆ. ಅದು ಮ್ಯಾನ್ಮಾರ್ ಇರಲಿ, ಬಾಂಗ್ಲಾದೇಶವಿರಲಿ, ಶ್ರೀಲಂಕಾವಿರಲಿ ಅಥವ ನೇಪಾಳವಿರಲಿ. ನೇಪಾಳದೊಂದಿಗಂತೂ ಭಾರತ ಬಹಳ ಅನ್ಯಾಯಯುತವಾಗಿ ವರ್ತಿಸಿದೆ. ಅದರೊಂದಿಗೆ ಅನ್ಯಾಯಯುತವಾದ ಅನೇಕ ಒಪ್ಪಂದಗಳನ್ನೂ ಮಾಡಿಕೊಂಡಿದೆ.



ಪ್ರಚಂಡ

AFP

ಒಂದು ಉದಾಹರಣೆ ಕೊಡುವುದಾದರೆ ಮಹಾಕಾಳಿ ನದಿ ಒಪ್ಪಂದ. ಈ ನದಿ ಭಾರತ-ನೇಪಾಳ ಗಡಿಯಲ್ಲಿ ಹರಿಯುತ್ತದೆ. ಅಣೆಕಟ್ಟನ್ನು ಕಟ್ಟಿರುವುದು ನೇಪಾಳಿ ನೆಲದಲ್ಲಿ, ವಿಸ್ತಾರವಾದ ನೆಲ ಮುಳುಗಡೆಯಾಗಿರುವುದು ನೇಪಾಳಿ ನೆಲ. ಆದರೆ, ಅದರ ನೀರಿನ ಬಳಕೆ, ವಿದ್ಯುತ್ ಉತ್ಪಾದನೆಯಲ್ಲಾ ಸೇರುತ್ತಿರುವುದು ಭಾರತಕ್ಕೆ. ಅಂತೆಯೇ ನೇಪಾಳದ ಪಶುಪತಿ ದೇವಾಲಯದಲ್ಲಿ ಇಂದಿಗೂ ನಮ್ಮ ಉಡುಪಿಯ ಬ್ರಾಹ್ಮಣರೇ ಅರ್ಚಕರಾಗಿದ್ದಾರೆ. ನೇಪಾಳಿಯವರಿಗೆ ಕನಿಷ್ಠ ಅರ್ಚಕರಾಗುವ ಹಕ್ಕೂ ಇಲ್ಲದಂತೆ ಮಾಡಲಾಗಿದೆ.

ನೇಪಾಳದ ಒಟ್ಟು ವ್ಯಾಪಾರ - ವಹಿವಾಟಿನ ಶೇ.95ರಷ್ಟನ್ನು ನಿಯಂತ್ರಿಸುತ್ತಿರುವುದು ಭಾರತದ ಉದ್ಯಮಪತಿಗಳು. ಇವರೆಲ್ಲಾ ಸೇರಿಕೊಂಡು ನೇಪಾಳವನ್ನು ಅದೆಷ್ಟು ಹಿಂಡಿ ಹಿಪ್ಪೆ ಮಾಡಿದ್ದಾರೆಂದರೆ ಅಲ್ಲಿನ ಜನ ಅನ್ನ ಬಟ್ಟೆ ಅರಸಿಕೊಂಡು ಭಾರತಕ್ಕೆ ಬರುತ್ತಾರೆ. ಮೂರು ಕೋಟಿಯಷ್ಟಿರುವ ನೇಪಾಳ ಜನಸಂಖ್ಯೆಯಲ್ಲಿ ಎಂಭತ್ತು ಲಕ್ಷ ಜನ ಭಾರತದಲ್ಲೇ ಇದ್ದಾರೆ. ಇಲ್ಲೂ ಅವರ ಪರಿಸ್ಥಿತಿ ಎಷ್ಟೊಂದು ಹೀನಾಯವಾಗಿದೆ ಎಂದರೆ ದೇಶದಲ್ಲಿ ಹೊಟ್ಟೆಪಾಡಿಗಾಗಿ ವೇಶ್ಯಾವಾಟಿಕೆಯಲ್ಲಿ ತೊಡಗಿರುವವರಲ್ಲಿ ಶೇ. 40ರಷ್ಟು ನೇಪಾಳಿ ಮಹಿಳೆಯರೇ ಆಗಿದ್ದಾರೆ. ಶೇ. 60ರಷ್ಟು ಸೆಕ್ಯೂರಿಟಿ ಗಾರ್ಡ್‌ಗಳು ನೇಪಾಳಿ ಗೂರ್ಖಾಗಳೇ ಆಗಿದ್ದಾರೆ. ಅಂದರೆ, ತಮ್ಮ ದೇಶದ ಸಂಪತ್ತನ್ನು ಲೂಟಿ ಹೊಡೆಯುವುದಕ್ಕೆ ಭಾರತದ ಉದ್ಯಮಪತಿಗಳಿಗೆ ಬಿಟ್ಟುಕೊಟ್ಟು ಇಲ್ಲಿಗೆ ಬಂದು ದಾರುಣ ಬದುಕನ್ನು ಸವೆಸಬೇಕಾದ ಹೀನ ಪರಿಸ್ಥಿತಿ ಅವರದ್ದು.


ನೇಪಾಳದಲ್ಲಿ ಮಾವೋವಾದಿಗಳು ಅಧಿಕಾರಕ್ಕೆ ಬರುವ ತನಕವೂ ಆ ದೇಶವನ್ನಾಳಿದ ಎಲ್ಲಾ ರಾಜಕೀಯ ಪಕ್ಷಗಳು, ದೊರೆ ಎಲ್ಲರೂ ದೊಡ್ಡಣ್ಣ ಭಾರತದ ಅಡಿಯಾಳಾಗಿಯೇ ಕಾರ್ಯನಿರ್ವಹಿಸಿದ್ದ[...] ಫಲಿತಾಂಶ ಇದು. ಮಾವೋವಾದಿ ಸರ್ಕಾರವಿದ್ದಾ[...] ಭಾರತದೊಂದಿಗಿನ ಎಲ್ಲಾ ಅಸಮಾನ ಒಪ್ಪಂದಗಳನ್ನು ರದ್ದುಗೊಳಿಸಿ ಸಮಾನತೆಯ ಆಧಾರದಲ್ಲಿ ಹೊಸ ಒಪ್ಪಂದ, ಹೊಸ ಬಾಂಧವ್ಯ ಪುನರಾರಂಭಿಸುವುದಕ್ಕೆ ಪ್ರಯತ್ನಿಸಿದ್ದರು. ಈಗ ಮಾವೋವಾದಿ ನಾಯಕ ಪ್ರಚಂಡ ಪ್ರಧಾನಿ ಸ್ಥಾನದಿಂದ ಕೆಳಗಿಳಿಯುವ ಮೂಲಕ ಆ ಪ್ರಕ್ರಿಯೆ ಅಲ್ಲಿಗೇ ನಿಂತುಹೋಗಿದೆ.

ಈಗ ಉಪಾಧ್ಯಕ್ಷ ಪ್ರೇಮದಾಸ ಜಾ ಅವರು ಹಿಂದಿಯಲ್ಲಿ ಪ್ರಮಾಣವಚನ ಸ್ವೀಕರಿಸಿದ್ದನ್ನು ಈ ಹಿನ್ನೆಲೆಯಲ್ಲಿ ನೋಡಿದರೆ ಅದು ಕೇವಲ ಒಂದು ಭಾಷೆಯ ವಿಚಾರ ಮಾತ್ರವಲ್ಲ, ನೇಪಾಳಿ ಭಾಷೆಯ ಮೇಲಿನ ಹಿಂದಿಯ ದಾಳಿ ಕೂಡ ಆಗಿರುವುದು ಕಾಣಿಸುತ್ತದೆ. ಸಹಜವಾಗಿ ಈ ಸಾಂಸ್ಕೃತಿಕ ದಾಳಿಯ ವಿರುದ್ಧ ಅಲ್ಲಿನ ಪ್ರಜ್ಞಾವಂತರು ದನಿಯೆತ್ತಿದ್ದಾರೆ. ಆದರೆ ಸರ್ಕಾರ ಮಾತ್ರ ಜನರ ಭಾವನೆಗಳಿಗೆ ಸ್ಪಂದಿಸುವುದನ್ನು ಬಿಟ್ಟು ಸಂವಿಧಾನಕ್ಕೇ ತಿದ್ದುಪಡಿ ತರುವ ಮೂಲಕ ಹಿಂದಿ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸುವುದನ್ನು ಸಂವಿಧಾನಬದ್ಧಗೊಳಿಸಲು ಹೊರಟಿದೆ. ಈಗಾಗಲೇ ಭಾರತದ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿ[...] ದಾಳಿಯಿಂದ ಬೇಸತ್ತಿರುವ ಜನ ಇವರ ವಿರುದ್ಧ ದೊಡ್ಡ ಬಂಡಾಯವೆದ್ದರೂ ಆಶ್ಚರ್ಯವಿಲ್ಲ.

'ನನ್ನ ತಮ್ಮನನ್ನು ಕೊಲ್ಲಿಸಿದ್ದು ಯಲಹಂಕ ಎಮ್ಮೆಲ್ಲೇ...!

ಯಲಹಂಕದ ಶಾಸಕ ವಿಶ್ವನಾಥ್ 25 ಲಕ್ಷ ಸುಪಾರಿ ಕೊಟ್ಟು ನನ್ನ ತಮ್ಮನನ್ನು ಕೊಲ್ಲಿಸಿದ್ದಾರೆ!

ಇದು ಹತ ಬುಲೆಟ್ ರವಿಯ ರಾಜಾ ಅಣ್ಣ ಟಿ. ರಾಜು ನಡುಗುತ್ತಲೇ ಹೇಳುವ ಮಾತು.


ಬುಲೆಟ್‌ರವಿ

ನನ್ನ ತಮ್ಮ ರವಿ ಕೊಲೆಯಾಗುವುದಕ್ಕೂ 23 ದಿನಗಳ ಮೊದಲೇ ನಡೆದ ಯಲಹಂಕ ಶಾಸಕ ವಿಶ್ವನಾಥ್ ಹುಟ್ಟುಹಬ್ಬಕ್ಕೆ ರೌಡಿಗಳಾದ ಸೈಲೆಂಟ್ ಸುನೀಲ, ಒಂಟೆ ಮತ್ತು ಗೆಡ್ಡಾ ನಾಗರಾಜ ಎಲ್ಲರೂ ಬಂದಿದ್ದರು. ವಿಶ್ವನಾಥ್ ಮನೆಯಲ್ಲೇ ನಡೆದ ಬರ್ತ್‌ಡೇ ಪಾರ್ಟಿಯಲ್ಲೇ ನನ್ನ ತಮ್ಮನ ವಿರುದ್ಧ ಎಮ್ಮೆಲ್ಲೇ ಸುಪಾರಿ ಕೊಟ್ಟಿದ್ದಾರೆ!

ಹೀಗೆಂದು ಯಲಹಂಕ ಶಾಸಕ ವಿಶ್ವನಾಥ್ ವಿರುದ್ಧ ನೇರನೇರವಾಗಿ ತನ್ನ ತಮ್ಮ ಬುಲೆಟ್ ರವಿಯ ಹತ್ಯೆಯ ಆರೋಪ ಮಾಡುವ ರವಿ ಅಣ್ಣ ಟಿ. ರಾಜು ಅದಕ್ಕೆ ಕೊಡುವ ಕಾರಣಗಳು ಒಂದೆರಡಲ್ಲ. ಸದ್ಯ ಸಿಸಿಬಿ ಪೊಲೀಸರು ಬುಲೆಟ್ ರವಿ ಮತ್ತು ಸೀನರ ಕೊಲೆ ಕೇಸಿನಲ್ಲಿ ಗೆಡ್ಡಾನಾಗನನ್ನು ಬಂಧಿಸಿದ್ದಾರೆ. ಕೊರಂಗು ಕೂಡ ಅರೆಸ್ಟಾಗಿದ್ದಾನೆ. ಸೈಲೆಂಟ್ ಸುನೀಲನಿಗಾಗಿ ಪೊಲೀಸ್ ಬೇಟೆ ಮುಂದುವರಿದಿದೆ. ಪ್ರಶ್ನೆಯೆಂದರೆ ಈ ಮೂರು ಮಂದಿ ಘಟಾನುಘಟಿ ರೌಡಿಗಳಿಗೆ ಬುಲೆಟ್ ರವಿಯ ವಿರುದ್ಧ ಇದ್ದ ಸಮಾನ ದುಷ್ಮನಿ ಯಾವುದು?

ಅದು ಮಚ್ಚನ ಕೊಲೆ ಎಂದೇ ಇಟ್ಟುಕೊಂಡರೂ ಬುಲೆಟ್ ರವಿಗಿಂತಲೂ ಮಚ್ಚನ ಹತ್ಯೆಗೆ ಕಾರಣರಾದ ದೊಡ್ಡ ಕೈಗಳನ್ನು ಹಾಗೇ ಬಿಟ್ಟು ಕೇವಲ ರವಿಯನ್ನೇ ಏಕೆ ಟಾರ್ಗೆಟ್ ಮಾಡುತ್ತಿದ್ದರು? ಕೊನೇತನಕ ಕೊರಂಗು ಜೊತೆ ರವಿಗೆ ಮಾತುಕತೆಯಿತ್ತು. ಗೆಡ್ಡಾನಾಗ ಆಗಾಗ ಬಂದು ದುಡ್ಡು ಈಸಿಕೊಂಡು ಹೋಗುತ್ತಿದ್ದ. ಇನ್ನುಸುನೀಲನ ವಿಷಯಕ್ಕೆ ಬಂದರೆ ರವಿಗೂ ಸುನೀಲನಿಗೂ ಮಾತುಕತೆಯಿರಲಿ, ಯಾವತ್ತೂ ಒಬ್ಬರ ಮುಖವನ್ನೊಬ್ಬರು ನೋಡಿದ್ದೂ ಇಲ್ಲ. ಮಚ್ಚನ ಕೊಲೆಗೂ ನನ್ನ ತಮ್ಮನ ಹತ್ಯೆಗೂ ಸಂಬಂಧವಿದ್ದಿದ್ದರೆ ಇಷ್ಟೊಂದು ದಿನ ಬೇಕಿತ್ತಾ?

ಕಾರಣ ಅದಲ್ಲ. ನನ್ನನ್ನು ಕೊಲ್ಲೋದಕ್ಕೆ ಎಮ್ಮೆಲ್ಲೇ ವಿಶ್ವನಾಥ್ ಸೈಲೆಂಟ್ ಸುನೀಲನಿಗೆ ಸುಪಾರಿ ಕೊಟ್ಟಿದ್ದಾರೆಂದು ಕೊಲೆಯಾಗುವುದಕ್ಕೂ ಹದಿನೈದು ದಿನಗಳ ಮೊದಲೇ ರವಿ ನನ್ನಲ್ಲಿ ಹೇಳಿಕೊಂಡಿದ್ದ. ಅದೊಂದು ದೊಡ್ಡ ಲ್ಯಾಂಡ್ ಡೀಲು. ಡಾಲರ್ಸ್ ಕಾಲೋನಿ ಸಮೀಪ ಎಂ.ಎಸ್. ರಾಮಯ್ಯನವರ ಮಕ್ಕಳಿಗೆ ಸೇರಿದ ಹದಿನಾರು ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಎಮ್ಮೆಲ್ಲೇ ವಿಶ್ವನಾಥ್ ಮತ್ತು ನನ್ನ ತಮ್ಮನ ಮಧ್ಯೆ ಘರ್ಷಣೆಯಿತ್ತು.

ವಿಶ್ವನಾಥ್ ಅದನ್ನು ತೀ ಾ ಕಮ್ಮಿ ರೇಟಿಗೆ ಕೇಳಿದ್ದರಂತೆ. ಆ ರೇಟಿಗಿಂತಲೂ ಹೆಚ್ಚಿನ ದರಕ್ಕೆ ಮಾರಿಕೊಡುತ್ತೇನೆಂದು ರವಿ ಎಂ.ಎಸ್. ರಾಮಯ್ಯನವರ ಮಕ್ಕಳಿಗೆ ಮಾತು ಕೊಟ್ಟಿದ್ದ. ರಾಮಯ್ಯನವರ ಮಕ್ಕಳ ಬಳಿ ರವಿ ಒಬ್ಬ ರೌಡಿ, ಕ್ರಿಮಿನಲ್ ಎಂದೆಲ್ಲಾ ವಿಶ್ವನಾಥ್ ಹಾಡಿ ಚುಚ್ಚಿದ್ದರು. ನನ್ನ ವಿರುದ್ಧ ಯಾವುದೇ ಕ್ರಿಮಿನಲ್ ಕೇಸಿಲ್ಲ, ಯಾವುದೋ ಕಾಲಕ್ಕೆ ಇದ್ದ ಕೊಲೆ ಕೇಸು ಕೂಡ ರಾಜಿಯಾಗೈತೆ ಎಂದೇ ರವಿ ರಾಮಯ್ಯನವರ ಮಕ್ಕಳಿಗೆ ಹೇಳಿದ್ದ. ಡಾಲರ್ಸ್ ಕಾಲೋನಿ ಸಮೀಪದ ಹದಿನಾರು ಎಕರೆ ಎಂದರೆ ಅದು ಸಣ್ಣ ಮೊತ್ತವಾ? ಬೇರೆ ಯಾರೂ ಅದನ್ನು ಖರೀದಿಸದ ಹಾಗೇ ಮಾಡಿ ತಾನು ಕಮ್ಮಿ ರೇಟಿಗೆ ಕೊಂಡುಕೊಳ್ಳುವ ಎಮ್ಮೆಲ್ಲೇ ವಿಶ್ವನಾಥ್ ಕುತಂತ್ರಕ್ಕೆ ಬುಲೆಟ್ ರವಿ ದೊಡ್ಡ ತಲೆನೋವಾಗಿದ್ದ.

ಜೊತೆಗೆ ಅನೇಕ ದಿನಗಳಿಂದಲೂ ರವಿಯ ವಿರುದ್ಧ ಕತ್ತಿ ಮಸೆಯುತ್ತಿದ್ದ ಗೆಡ್ಡಾನಾಗನ ಶಿಷ್ಯ ಅಳ್ಳಾಲಸಂದ್ರ ಶೇಖ್ರಿ ಕೂಡ ಎಮ್ಮೆಲ್ಲೇ ಜೊತೆ ಕೈ ಜೋಡಿಸಿದ. ರವಿ ವಿರುದ್ಧ ಜಿದ್ದಿಗೆ ಬಿದ್ದೇ ಶೇಖ್ರಿಯನ್ನು ಯಲಹಂಕ ಬಿಜೆಪಿಯ ಸ್ಲಂ ಮೋರ್ಛಾ ಅಧ್ಯಕ್ಷನನ್ನಾಗಿ ನೇಮಿಸಿದ ವಿಶ್ವನಾಥ್‌ಗೆ ಈ ಒಂದೇ ಕಾರಣಕ್ಕೆ ನನ್ನ ತಮ್ಮನ ವಿರುದ್ಧ ಜಿದ್ದಿರಲಿಲ್ಲ. ಇವತ್ತಲ್ಲ ನಾಳೆ ಯಲಹಂಕದ ಎಮ್ಮೆಲ್ಲೇ ಆಗುವ ಮಟ್ಟಕ್ಕೆ ರವಿ ಬೆಳೆಯುತ್ತಾನೆ ಎಂಬ ಹೊಟ್ಟೆಕಿಚ್ಚು ಹಿಂದಿನಿಂದಲೂ ಇತ್ತು. ಕಾಂಗ್ರೆಸ್ಸಿನ ಕೃಷ್ಣ ಭೈರೇಗೌಡರು ಮತ್ತೊಬ್ಬ ಕಾಂಗ್ರೆಸ್ ನಾಯಕರಾದ ಡೀಕೆ ಜೊತೆ ನನ್ನ ತಮ್ಮನಿಗೆ ಆತ್ಮೀಯತೆಯಿತ್ತು, ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಗೆದ್ದು ಕೌನ್ಸಿಲರ್ ಆಗುವ ತಾಕತ್ತಿತ್ತು.

ಬುಲೆಟ್ ರವಿ ಅಣ್ಣ ರಾಜು ಆರೋಪ


ಒಂದು ಕಡೆ ರಾಜಕೀಯವಾಗಿ ದಿನೇದಿನೇ ಬೆಳೆಯುತ್ತಿರುವ ರವಿ ಎಮ್ಮೆಲ್ಲೇ ಕೈಹಾಕಿದ್ದ 14 ಎಕರೆ ಆಸ್ತಿಗೆ ಎಂಟ್ರಿಯಾಗಿದ್ದು ವಿಶ್ವನಾಥ್ ಸಿಟ್ಟಿಗೆ ಕಾರಣವಾಗಿತ್ತು. ಅದಕ್ಕೆಂದೇ ಸಂಪಿಗೆಹಳ್ಳಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರತ್ನಾಕರ್ ಶೆಟ್ಟರನ್ನು ಛೂಬಿಟ್ಟು ಸುಳ್ಳುಸುಳ್ಳೇ ಕಾರಣಗಳನ್ನು ಕಿತ್ತುಕೊಂಡಿದ್ದಾರೆಂದು ಹೇಳಿ ಬಂಧಿಸಿ ಜೈಲಿಗೆ ಹಾಕಿಸಿದ್ದರು. ಇದು ರವಿ ಜೊತೆಗಿಟ್ಟುಕೊಂಡಿದ್ದ ರಿವಾಲ್ವರನ್ನು ಪೊಲೀಸರ ಮೂಲಕ ಕಿತ್ತುಕೊಳ್ಳುವ ವಿಶ್ವನಾಥ್ ತಂತ್ರವಾಗಿತ್ತು.


ರಾಜು

ಇದಾಗಿ ಎರಡು ತಿಂಗಳಿಗೇ ನನ್ನ ತಮ್ಮನ ಕೊಲೆಯಾಗಿದೆ. ಯಲಹಂಕದ ಎಸಿಪಿ ಸಿರಿಗೌರಿ, ಇನ್ಸ್‌ಪೆಕ್ಟರ್‌ಗಳಾದ ಕೆಂಚೇಗೌಡ, ರತ್ನಾಕರ್ ಶೆಟ್ಟಿ ಮತ್ತು ರಾಮಚಂದ್ರಪ್ಪ ಎಲ್ಲರೂ ಎಮ್ಮೆಲ್ಲೇ ವಿಶ್ವನಾಥ್ ಮೂಲಕವೇ ನೇಮಕಗೊಂಡ ಪೊಲೀಸ್ ಅಧಿಕಾರಿಗಳು. ಈ ಎಲ್ಲ ಅಧಿಕಾರಿಗಳೂ ಪದೇಪದೇ ನನ್ನ ತಮ್ಮನನ್ನು ಠಾಣೆಗೆ ಕರೆಸಿ ಪೀಡಿಸುತ್ತಲೇ ಇದ್ದರು.

ನನ್ನ ತಮ್ಮನನ್ನು ಕೊಲ್ಲೋದಕ್ಕೆ ಅಂತಲೇ ವಿಶ್ವನಾಥ್ ಮೊದಲು ಶಿಷ್ಯಪಟ್ಟದ ಮೋಹನ ಎಂಬ ರೌಡಿಯನ್ನು ಛೂಬಿಟ್ಟರು. ಕೊಲೆಗೂ ತಿಂಗಳ ಮೊದಲೇ ಮೋಹನ ಇಪ್ಪತ್ತು ಮಂದಿ ರೌಡಿಗಳನ್ನು ಕಟ್ಟಿಕೊಂಡು ಯಲಹಂಕದ ಪೊಲೀಸ್ ಠಾಣೆ ಬಳಿಯೇ ದಾಳಿ ನಡೆಸಿದ್ದ. ಆವತ್ತು ಆಚಾನಕ್ಕಾಗಿ ಬಚಾವಾದ ರವಿ ಈ ಬಗ್ಗೆ ಸಂಬಂಧಪಟ್ಟ ಎಲ್ಲಾ ಪೊಲೀಸ್ ಅಧಿಕಾರಿಗಳಿಗೂ ದೂರು ಕೊಟ್ಟರೂ ಪೊಲೀಸರು ಮೋಹನನನ್ನು ಮುಟ್ಟಲಿಲ್ಲ-

ಏಕೆಂದರೆ ಅವನು ಎಮ್ಮೆಲ್ಲೇ ವಿಶ್ವನಾಥ್ ಶಿಷ್ಯ. ಕೊಲೆಯಾಗುವುದಕ್ಕೂ ಒಂದು ವಾರದ ಹಿಂದೆಯೇ ಯಲಹಂಕದಲ್ಲಿ ರೌಡಿಗಳ ಓಡಾಟವಿತ್ತು. ಸುಮೋ, ಕ್ವಾಲೀಸ್ ಗಾಡಿಗಳಲ್ಲಿ ಎಮ್ಮೆಲ್ಲೇ ಶಿಷ್ಯರಾದ ಶೇಖ್ರಿ, ಶಿಷ್ಯಪಟ್ಟ ಮೋಹನನ ಹುಡುಗರು ರೌಂಡಿಂಗ್ ಮಾಡ್ತಾನೇ ಇದ್ರು. ಇನ್ಸ್‌ಪೆಕ್ಟರ್ ಕೆಂಚೇಗೌಡ, ಎಸಿಪಿ ಸಿರಿಗೌರಿಗೆ ಇದನ್ನು ನನ್ನ ತಮ್ಮ ಗಮನಕ್ಕೆ ತಂದಿದ್ದ. ಕೊಲೆ ನಡೀತಲ್ಲ ಆ ಜಿಮ್ಮಿಗೆ ಕೋಚರ್ ಆಗಿದ್ದ ಮಧು ಅನ್ನೋನು ಕೂಡ ಯಲಹಂಕ ಎಮ್ಮೆಲ್ಲೇ ವಿಶ್ವನಾಥ್‌ಗೆ ಬೇಕಾಗಿದ್ದವನೇ.


ಎಮ್ಮೆಲ್ಲೆ ವಿಶ್ವನಾಥ್

ಯಾವತ್ತೂ 'ಅಣ್ಣಾ ಜಿಮ್ಮು ಓಪನ್ನಾಗ್ಯೈತೆ ಬಂದ್ಬಿಡು' ಎಂದು ಆತ ಫೋನ್ ಮಾಡೇ ಇರ್‍ಲಿಲ್ಲ, ಅಂಥವನು ಜುಲೈ 27 ರ ಬೆಳಿಗ್ಗೆಯೇ ಫೋನ್ ಮಾಡಿ ಏಕ ಕರೆದ? ಹಾಗೇ ಜಿಮ್ಮಿಗೆ ಕರೆಸಿಕೊಂಡವನು ರವಿ ಬಳಿ ಇದ್ದ ರಿವಾಲ್ವರನ್ನು ತೆಗೆಸಿ ಕಪಾಟಿನಲ್ಲಿ ಇರಿಸಿ ಲಾಕ್ ಮಾಡಿದ್ದು ಏಕೆ? ಕೊಲೆ ನಡೆಯುವಾಗ ಕೋಚ್ ಮಧು ನನ್ನ ತಮ್ಮನನ್ನು ಬೆಂಚಿನ ಮೇಲೆ ಮಲಗಿಸಿ ಎತ್ತಲು ಸಾಧ್ಯವಾಗದಷ್ಟು ಭಾರವನ್ನು ಹೊರಿಸಿ ವ್ಯಾಯಾಮ ಮಾಡುವಂತೆ ಹೇಳಿದ್ದ. ಆತ ಭಾರ ಹೊರಿಸುತ್ತಿದ್ದಂತೆಯೇ ಮೇಕೆ ಹರೀಶ, ಬಾಲ, ಪುನೀತ, ಪ್ರಕಾಶ ಮುಂತಾದವರು ಅಟ್ಯಾಕ್ ಮಾಡಿದ್ದಾರೆ.

ಈಗ ಪೊಲೀಸರು ಗೆಡ್ಡಾ ನಾಗ, ಹರೀಶ, ಪುನೀತ, ಬಾಲ, ಪ್ರಕಾಶ ಮುಂತಾದವರನ್ನು ಅರೆಸ್ಟ್ ಮಾಡಿದ್ದಾರಾದರೂ ಕೋಚ್ ಮಧುವನ್ನು ಮಾತ್ರ ಏಕೆ ಬಿಟ್ಟಿದ್ದಾರೆ?

ನನಗೆ ಬಂದಿರೋ ಮಾಹಿತಿ ಪ್ರಕಾರ ತಮ್ಮ ಬರ್ತ್‌ಡೇ ದಿನ ಸುನೀಲ, ಒಂಟೆ ಮತ್ತು ಗೆಡ್ಡಾನಾಗನನ್ನು ಶೇಖ್ರಿಯ ಮೂಲಕ ಪಾರ್ಟಿಗೆ ಕರೆಸಿಕೊಂಡ ಎಮ್ಮೆಲ್ಲೇ ವಿಶ್ವನಾಥ್ 25 ಲಕ್ಷದ ಸುಪಾರಿ ಕೊಟ್ಟಿದ್ದಾರೆ. ಇದರಲ್ಲಿ ಸುನೀಲ ತಾನು ಹತ್ತು ಲಕ್ಷ ಇಟ್ಟುಕೊಂಡು ಉಳಿಕೆ ಹದಿನೈದು ಲಕ್ಷವನ್ನು ಗೆಡ್ಡನಿಗೆ ಕೊಟ್ಟಿದ್ದಾನೆ. ಗೆಡ್ಡಾ ಹತ್ತು ಲಕ್ಷವನ್ನು ತಾನು ಇಟ್ಟುಕೊಂಡು ಮಿಕ್ಕ ಐದು ಲಕ್ಷವನ್ನು ಮೇಕೆ ಹರೀಶ, ಬಾಲ, ಶೇಖ್ರಿ ಮುಂತಾದವರಿಗೆ ಹಂಚಿದ್ದಾನೆ. ಜಿಮ್ಮಿನ ಕೋಚ್ ಮಧುಗೆ ಇದರಲ್ಲಿ 25 ಸಾವಿರ ರೂಪಾಯಿ ಬಟವಾಡೆಯಾದ ಬಗ್ಗೆ ನನಗೆ ಸ್ಪಷ್ಟ ಮಾಹಿತಿಯಿದೆ. ಈಗ ನೋಡಿ ಸಿಕ್ಕಿಬಿದ್ದ ಗೆಡ್ಡಾ ನಾಗನೇ 'ಎಮ್ಮೆಲ್ಲೇ ವಿಶ್ವನಾಥ್ ನನಗೆ ಸುಪಾರಿ ಕೊಟ್ಟಿದ್ದಕ್ಕೇ ಸ್ಕೆಚ್ ಹಾಕ್ದೆ...' ಎಂದು ಪೊಲೀಸರ ಮುಂದೆ ಬಾಯಿ ಬಿಟ್ಟಿದ್ದಾನೆ?

ಗೆಡ್ಡಾನಾಗ ಸುಮ್‌ಸುಮ್ನೆ ಎಮ್ಮೆಲ್ಲೇ ಹೆಸರು ಹೇಳ್ತಾನಾ? ಕೊಲೆ ನಡೆದದ್ದು ಡಾಲರ್ಸ್ ಕಾಲೋನಿಯ ಲ್ಯಾಂಡ್ ವಿಷಯಕ್ಕೇ ಹೊರತು ಮಚ್ಚನ ಕೊಲೆಯ ಸೇಡಿಗಾಗಿ ಅಲ್ಲ. ನನ್ನ ತಮ್ಮನ ಕೊಲೆಗೆ ಕಾರಣರಾದ ಶಾಸಕ ವಿಶ್ವನಾಥ್‌ರನ್ನೂ ಬಂಧಿಸಲೇಬೇಕು. ಈ ಬಗ್ಗೆ ನಾನು ಮುಖ್ಯಮಂತ್ರಿಗೂ ಮನವಿ ಕೊಡ್ತೀನಿ. ಮಾನವ ಹಕ್ಕು ಆಯೋಗಕ್ಕೂ ಖಂಡಿತ ದೂರು ಕೊಡ್ತೀನಿ. ಬಿಜೆಪಿ ಸರ್ಕಾರ ಇದೆ ಎಂದಮಾತ್ರಕ್ಕೆ ಎಮ್ಮೆಲ್ಲೇ ಒಬ್ಬ ಕೊಲೆ ಮಾಡಿಸಬಹುದಾ? ಜನರಿಗೊಂದು ಕಾನೂನು ಬಿಜೆಪಿ ಎಮ್ಮೆಲ್ಲೇಗೆ ಇನ್ನೊಂದು ಕಾನೂನಾ?


ಇಷ್ಟರಲ್ಲೇ ಎಮ್ಮೆಲ್ಲೇ ವಿಶ್ವನಾಥ್ ಕೈವಾಡ ವಿರುದ್ಧ ನಾನೇ ಪತ್ರಿಕಾಗೋಷ್ಠಿ ಕರೆದು ದಾಖಲೆಗಳನ್ನು ಬಯಲುಗೊಳಿಸುತ್ತೇನೆ....

ಇದು ಹತ ಬುಲೆಟ್ ರವಿಯ ಅಣ್ಣ ಟಿ. ರಾಜುವಿನ ವಾದಸರಣಿ. ಪೂರ್ತಿ ಸತ್ಯವಲ್ಲದಿರಬಹುದು ಆದರೆ ಸತ್ಯವಿಲ್ಲದೇ ಇಲ್ಲ ಎಂಬುದಂತೂ ವಾಸ್ತವ. ಬಿಜೆಪಿಯದೇ ಸರ್ಕಾರವಿರುವಾಗ ಮುಖ್ಯಮಂತ್ರಿಗೆ ಪರಮಾಪ್ತನಾದ ಎಮ್ಮೆಲ್ಲೇ ವಿಶ್ವನಾಥ್ ವಿರುದ್ಧ ತನಿಖೆ ಮಾಡುವವರ್‍ಯಾರು?

ಪಾಪಿ ಪತ್ನಿ ಘಾತುಕ ಶಿಷ್ಯ

ಬದುಕಿದ್ದಾಗ ರವಿ ಗಳಿಸಿದ್ದ ಕೋಟಿಗಟ್ಟಲೇ ಆಸ್ತಿ ಹೇಗೆ ಮನುಷ್ಯ ಸಂಬಂಧವನ್ನೇ ಹಾಳುಗೆಡುವುತ್ತದೆ ಎಂಬುದಕ್ಕೆ ಹತ ರವಿಯ ಪತ್ನಿ ಲಕ್ಷ್ಮಿಯೇ ಸಾಕ್ಷಿ!

ಬೇರೆ ಯಾರೇ ಹೆಂಡತಿಯಾಗಿದ್ದರೆ ಗಂಡ ಕೊಲೆಯಾಗಿದ್ದಕ್ಕೆ ಕನಿಷ್ಠ ಕಣ್ಣೀರಿಡುತ್ತಿದ್ದರು. ಶಾಸ್ತ್ರಕ್ಕಾದರೂ ಪೊಲೀಸ್ ಠಾಣೆಗೆ ಬಂದು ದೂರು ಕೊಡುತ್ತಿದ್ದರು. ಆದರೆ ಲಕ್ಷ್ಮಿ ಗಂಡ ಸತ್ತ ಸುದ್ದಿ ಕೇಳಿದ ಮರುಗಳಿಗೆಯಿಂದಲೇ ಎಲ್ಲೆಲ್ಲಿ ಆಸ್ತಿಯಿತ್ತು? ಒಡವೆ ಎಲ್ಲಿಟ್ಟಿದ್ದ? ಯಾರ್‍ಯಾರು ದುಡ್ಡು ಕೊಡಬೇಕಿತ್ತು? ಇತ್ಯಾದಿ ವಸೂಲಿಗಿಳಿದವಳು ಇವತ್ತಿಗೂ ಅದರಲ್ಲೇ ಬಿಜಿಯಾಗಿಬಿಟ್ಟಿದ್ದಾಳೆ.


ನಿರಂಜನ್

ಕೋಗಿಲು ರಸ್ತೆಯ ಬಂಗಲೆ, ದೇವನಹಳ್ಳಿಯಲ್ಲಿ ಎಕರೆಗಟ್ಟಲೆ ಜಮೀನು, ಬಂಡಿಕೊಡಿಗೇಹಳ್ಳಿಯ ಲ್ಯಾಂಡು, ಐದು ಐಷಾರಾಮಿ ಕಾರುಗಳು, ಹದಿನೈದು ಬೈಕ್‌ಗಳು, ಯಲಹಂಕ ಸುತ್ತಮುತ್ತ ಹದಿನೆಂಟಕ್ಕೂ ಹೆಚ್ಚು ಸೈಟುಗಳು ಮತ್ತು ಎಲ್ಲೆಂದರಲ್ಲಿ ಜಿಪಿಎ ಮಾಡಿಕೊಂಡಿದ್ದ ಸೈಟುಗಳನ್ನೆಲ್ಲ ಲೆಕ್ಕ ಹಾಕಿದರೆ ಬುಲೆಟ್ ರವಿಯ ಆಸ್ತಿ ಕಮ್ಮಿಯೆಂದರೂ ನೂರು ಕೋಟಿಯಷ್ಟಿದೆ. ಬದುಕಿದ್ದಾಗ ರವಿಯ ಭೂವ್ಯವಹಾರ, ಬ್ಯಾಂಕ್ ಅಕೌಂಟುಗಳು, ಹಣಕಾಸು ಸಂಬಂಧಿ ಲೆಕ್ಕಾಚಾರಗಳನ್ನೆಲ್ಲ ನಿಭಾಯಿಸುತ್ತಿದ್ದವನು ಆತನ ರೈಟ್ ಹ್ಯಾಂಡ್ ನಿರಿ ಅಲಿಯಾಸ್ ನಿರಂಜನ್. ಈಗ ರವಿಯ ಹೆಂಡತಿ ಲಕ್ಷ್ಮಿ ಮತ್ತು ರೈಟ್ ಹ್ಯಾಂಡ್ ನಿರಂಜನ್ ಪಾಲಿಗೆ ಕೊಲೆ ನಡೆದಿದ್ದೇ ಬಂಪರ್ ಲಾಟರಿ ಹೊಡೆದಂತಾಗಿದೆ. ಎಲ್ಲೆಲ್ಲಿ ಆಸ್ತಿಯಿತ್ತೋ ಅದನ್ನೆಲ್ಲ ಪಟ್ಟಿ ಮಾಡಿ ಕಂಡ ರೇಟಿಗೆ ಮಾರಿ ತನ್ನ ಹುಟ್ಟೂರು ಬಳ್ಳಾರಿ ಸೇರಿಕೊಳ್ಳುವುದು ಪತ್ನಿ ಲಕ್ಷ್ಮಿಯ ದುರಾಶೆಯಾದರೆ ಇದರಲ್ಲಿ ಬಂದಷ್ಟು ಗುಂಜಿಕೊಂಡು ಎಸ್ಕೇಪಾಗುವುದು ಬಂಟ ನಿರಂಜನನ ಹುನ್ನಾರ.

ಪ್ರಾಣ ಕಾಯಲು ಬಂದು ಕೊಲೆಯಾದ ಸೀನನ ಮನೆಗೆ ಯಾರು ದಿಕ್ಕು? ಕೊನೆ ತನಕ ಜೊತೆಗಿದ್ದು ಬಡಿದಾಡಿ ಕೋಮಾಸ್ಥಿತಿಯಲ್ಲಿರುವ ವಾಸುವಿನ ಆಸ್ಪತ್ರೆಯ ಬಿಲ್ಲು ಕಟ್ಟುವವರ್‍ಯಾರು? ರವಿಯನ್ನೇ ನಂಬಿದ್ದ ಸಂಬಂಧಿಕರು, ಕೆಲಸಗಾರರು, ಸಾಕಿಕೊಂಡಿದ್ದ ಹುಡುಗರ ಗತಿಯೇನು? ಏನೂ ಇಲ್ಲದೇ ಇದ್ದಿದ್ದರೆ ಆ ಮಾತು ಬೇರೆ. ಜೊತೆಗಿದ್ದು ಪ್ರಾಣ ಕೊಟ್ಟವರನ್ನೂ ಲೆಕ್ಕಿಸದೇ ಬಂದಷ್ಟು ಗುಂಜಿಕೊಂಡು ಪರಾರಿಯಾಗಲು ಹವಣಿಸುವ ಪತ್ನಿ ಮತ್ತು ಬಂಟನಿರುವಾಗ ಕೊಂದವರಿಗೆಲ್ಲಿ ಶಿಕ್ಷೆ? ಇನ್ನೂ ವಿಕಟವೆಂದರೆ ರವಿ ಹತ್ಯೆಯ ವಿವರ ಕೇಳಿ ಯಾರೇ ಬಂದರೂ ಹೆಂಡತಿ ಲಕ್ಷ್ಮಿ ಮತ್ತು ಆಕೆಯ ಘಟವಾಣಿ ತಾಯಿ ಬಂದವರನ್ನು ವಾಚಾಮಗೋಚರ ಬೈದು ಓಡಿಸುತ್ತಾರೆ. ಬಂಟ ನಿರಂಜನ್ ಉರ್ಫ್ ನೀರಿ ಅಮ್ಮಾ ಅಕ್ಕಾ ಅಂತಲೇ ಬಯ್ದು ಓಡಿಸುತ್ತಾನೆ.

ಪಾಪಿಯ ಆಸ್ತಿ ಪರಾಯಿ ಪಾಲು?

ಶಾಲಾ ಮಕ್ಕಳಿಗೆ ಕೋಮುವಾದಿ ಪುಸ್ತಕ - ಆರೆಸ್ಸೆಸ್‌ನಿಂದ 75 ಕೋಟಿ ಲೂಟಿ

ಕರ್ನಾಟಕದ ಪುಟ್ಟ ಶಾಲಾ ಮಕ್ಕಳಿಗೆ ಇನ್ನು ಮುಂದೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಹಿಂದೂ ಕೋಮುವಾದಿ ಚಿಂತನೆಗಳನ್ನು ಬೆರೆಸಿಕೊಂಡು ತಿನ್ನುವ ದೌರ್ಭಾಗ್ಯ ಒದಗಿಬರುತ್ತಿದೆ.


ಆರೆಸ್ಸೆಸ್‌ನ ಅಂಗಸಂಸ್ಥೆಯಾದ ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತಿನವರು ಪ್ರಕಟಿಸಿರುವ ಸುಮಾರು ಐವತ್ತೊಂದು ಕೋಮುವಾದಿ ಪುಸ್ತಕಗಳನ್ನು ರಾಜ್ಯದ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳೂ ಖರೀದಿಸುವಂತೆ ಯಡಿಯೂರಪ್ಪನವರ ಸರ್ಕಾರ ಆಗಸ್ಟ್ 14ರಂದು ಒಂದು ಆದೇಶ ಹೊರಡಿಸಿದೆ. ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಧೀನ ಕಾರ್ಯದರ್ಶಿ ಬಿ.ಚಿಕ್ಕರಾಜು ಎಂಬಾತನ ಹೆಸರಿನಲ್ಲಿ ಹೊರಡಿಸಲಾದ ಈ ಆದೇಶದಲ್ಲಿ (ಸಂಖ್ಯೆ ಯೋಇ.94.ಸಿಎಸ್‌ಎಸ್.2009, ದಿನಾಂಕ 14 ಆಗಸ್ಟ್ 2009) ಶಾಲಾ ಮಕ್ಕಳಿಗೆ ಯಾವ್ಯಾವ ಪುಸ್ತಕ ಖರೀದಿಸಬೇಕೆಂಬ ಒಂದು ಪಟ್ಟಿಯನ್ನು ನೀಡಲಾಗಿದೆ. ಅದರಲ್ಲಿ ಶಂಕರಾಚಾರ್ಯ, ರಾಮಾನುಜಾಚಾರ್ಯ, ಪ್ರತಾಪ ಸಿಂಹ, ರಾಘವೇಂದ್ರ ಸ್ವಾಮಿ, ಮಧ್ವಾಚಾರ್ಯ, ವಿನಾಯಕ ಸಾವರ್ಕರ್, ದೀನ್ ದಯಾಳ್ ಉಪಾಧ್ಯ, ಗೋಳ್ವಾಲ್ಕರ್, ಹೆಡ್ಗೆವಾರ್, ವ್ಯಾಸರಾಜ, ವಾದಿರಾಜ, ಶ್ಯಾಮಪ್ರಸಾದ್ ಮುಖರ್ಜಿ, ನಾರಾಯಣಾಚಾರ್ಯ ಮುಂತಾದವರ ಜೀವನ ಚರಿತ್ರೆಗಳಿವೆ. ಇವರೆಲ್ಲಾ ಒಂದೋ ಹಿಂದೂ ಕೋಮುವಾದಿಗಳು, ಇಲ್ಲ ಬ್ರಾಹ್ಮಣಶಾಹಿ ಪ್ರವರ್ತಕರುಗಳಾಗಿದ್ದಾರೆ. ಬಹಳ ಮುಖ್ಯವಾಗಿ ಭಾರತದ ಸಂವಿಧಾನವು ಪ್ರತಿಪಾದಿಸುವ ಜಾತ್ಯತೀತ, ಸಮಾನತೆಯ



ಆಶಯಗಳಿಗೆ ವಿರುದ್ಧವಾಗಿರುವ ಜನ ಇವರು. ಇಂಥವರ ಜೀವನ ಚರಿತ್ರೆಗಳನ್ನು ಪುಟ್ಟ ಮಕ್ಕಳ ತಲೆಗೆ ತುಂಬಿ ಅವರ ಮೆದುಳಿಗೆ ವಿಷವುಣಿಸುವ ಪಿತೂರಿಯಂತೆ ಇದು ಕಾಣಿಸುತ್ತದೆ.

75 ಕೋಟಿ ಲೂಟಿ

ಎಲ್ಲರಿಗೂ ಕಾಣುತ್ತಿರುವಂತೆ ಕರ್ನಾಟಕದಲ್ಲೀಗ 84 ತಾಲ್ಲೂಕುಗಳಲ್ಲಿ ಬರಗಾಲವಿದೆ. ಬೆಳೆ ಕಳೆದುಕೊಂಡಿರುವ ರೈತರಿಗಾಗಲೀ, ಮೇವಿಲ್ಲದ ದನಗಳಿಗಾಗಲೀ ನಯಾಪೈಸೆ ನೀಡದ ಬಿಜೆಪಿ ಸರ್ಕಾರ ಖಜಾನೆ ದುಡ್ಡನ್ನು ಆರೆಸ್ಸೆಸ್‌ನವರು ಲೂಟಿ



ಹೊಡೆಯಲು ಅವಕಾಶ ಮಾಡಿಕೊಡುತ್ತಿದೆ.

ರಾಷ್ಟ್ರೋತ್ಥಾನ ಪರಿಷತ್ತಿನವರ ಪುಸ್ತಕ ಖರೀದಿಗಾಗಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ನಿಧಿ ಬಳಸುವಂತೆಯೂ ಯಡ್ಡಿ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ. ಇದರ ಒಟ್ಟು

▶▶▶ 12


ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ

ಬಿಜೆಪಿ ಸೋಲಿಸಲು ಕಾಂಗ್ರೆಸ್-ಜೆಡಿಎಸ್ ಒಪ್ಪಂದ?

ಲೋಕಸಭಾ ಚುನಾವಣೆ ಮತ್ತು ಐದು ಅಸೆಂಬ್ಲಿ ಕ್ಷೇತ್ರಗಳ ಉಪಚುನಾವಣೆ ಮುಗಿದ ನಂತರ ಈಗ ಎಲ್ಲರ ಕಣ್ಣು ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯ ಕಡೆಗೆ ಹೊರಳಿವೆ. ಬೆಂಗಳೂರಿನ ಗದ್ದುಗೆಯನ್ನು ಏರುವ ಉತ್ಸಾಹದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ತೆರೆಮರೆಯಲ್ಲಿ ತಾಲೀಮನ್ನು ಪ್ರಾರಂಭಿಸಿವೆ.

ಸೋಮಣ್ಣನ ಸೋಲು-ಸೊರಗಿದ ಯಡ್ಡಿ


ಗೋವಿಂದರಾಜನಗರ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣನನ್ನು ಪರಾಭವಗೊಳಿಸಿದ ನಂತರ ಕಾಂಗ್ರೆ ಮತ್ತು ಜೆಡಿಎಸ್ ನಾಯಕರು ಯುದ್ಧ ಗೆದ್ದ ಹುಮ್ಮಸ್ಸಿನಲ್ಲಿದ್ದಾರೆ. ಆದೇ ಹೊತ್ತಿಗೆ, ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿಗೆ ಕನಿಷ್ಠ ಐವತ್ತು ಕಾರ್ಪೊರೇಟರುಗಳನ್ನು ಜಯಿಸಿಕೊಡುವುದಾಗಿ ಪ್ರಮಾಣ ಮಾಡಿದ್ದ ಸೋಮಣ್ಣನ ಸೋಲಿನಿಂದಾಗಿ ಮುಖ್ಯಮಂತ್ರಿ ಯಡಿಯೂರಪ್ಪನ ಜಂಘಾಬಲವೇ ಕುಸಿದಂತಾಗಿದೆ. ಹೀಗಾಗಿ ಸದ್ಯಕ್ಕೆ ಕಾಂಗ್ರೆಸ್-ಜನತಾ ದಳದವರು ಕಾರ್ಮೋಡದಲ್ಲೂ ಬೆಳ್ಳಿಮಿಂಚನ್ನು ಕಾಣುತ್ತಿದ್ದರೆ ಬಿಜೆಪಿ ವಲಯವನ್ನು ಕಾರ್ಮೋಡ ಮುಸುಕಿದೆ.


ಯಡಿಯೂರಪ್ಪ

ಅಂದಿನ ಪರಿಸ್ಥಿತಿ ಹೀಗಿತ್ತು...

ಕಳೆದ ಬಾರಿ ಮಹಾನಗರ ಪಾಲಿಕೆಯಲ್ಲಿ ಒಟ್ಟು ನೂರು ವಾರ್ಡುಗಳಿದ್ದವು. ಆದರೆ ಈ ಬಾರಿ ಅವುಗಳ ಸಂಖ್ಯೆ ನೂರ ತೊಂಭತ್ತೆಂಟಕ್ಕೆ ಏರಿದೆ. ಹೋದ ಸಲ ಕಾಂಗ್ರೆಸ್ ನಲವತ್ತೆಂಟು ಸ್ಥಾನಗಳನ್ನು ಗೆದ್ದು ಸುಮಾರು ಹದಿನೈದು ಪಕ್ಷೇತರರ ಬೆಂಬಲದಿಂದ ಅಧಿಕಾರದ ಗದ್ದುಗೆಯನ್ನೇ ರಿತ್ತು. ಏಕಾಂಗಿಯಾಗಿ ಚುನಾವಣೆ ಎದುರಿಸಿದ್ದ ಜಾತ್ಯತೀತ ಜನತಾ ದಳ ಹದಿನೈದು ಸ್ಥಾನಗಳನ್ನು ಪಡೆದಿದ್ದರೆ ಸಂಯುಕ್ತ ಜನತಾದಳ ಆರು ಸದಸ್ಯರನ್ನು ಹೊಂದಿತ್ತು. ಅಂದರೆ ಜನತಾ 'ಪರಿವಾರ'ದಿಂದ ಒಟ್ಟು 21 ಜನ ಆಯ್ಕೆಯಾಗಿದ್ದರು. ಇದಕ್ಕಿಂತಲೂ ಕಡಿಮೆ 18 ಸ್ಥಾನಗಳನ್ನು ಪಡೆದಿದ್ದ ಬಿಜೆಪಿ ಹಲವು ಪಕ್ಷೇತರರ ಬೆಂಬಲ ಪಡೆದು ವಿರೋಧ ಪಕ್ಷವಾಗಿತ್ತು.

ಆದರೆ ಪ್ರಸ್ತುತ ರಾಜಕೀಯ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಅಧಿಕಾರದಲ್ಲಿರುವ ಯಡ್ಡಿ ನೇತೃತ್ವದ ಬಿಜೆಪಿ ಪಕ್ಷ ಹೇಗಾದರೂ ಮಾಡಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಧ್ವಜವನ್ನು ಹಾರಿಸಬೇಕೆಂದು ಪಣ ತೊಟ್ಟಿದೆ. ಪ್ರತಿಷ್ಠೆಯ ಬೆಂಗಳೂರು ಮೇಯರ್ ಸ್ಥಾನದಲ್ಲಿ ಚೆಡ್ಡಿಯೊಬ್ಬನನ್ನು ಕೂರಿಸಬೇಕೆಂಬುದೇ ಸದ್ಯಕ್ಕೆ ಯಡ್ಡಿ ಮುಂದಿರುವ ಏಕೈಕ ಗುರಿ. ಈ ಕಾರಣಕ್ಕಾಗಿಯೇ ಕಾರ್ಪೊರೇಷನ್ ಚುನಾವಣೆಗಳಲ್ಲಿ ಮಹಾ ಪ್ರಚಂಡರೆನಿಸಿದ ಸೋಮಣ್ಣರನ್ನು ಆಪರೇಷನ್ ಕಮಲದ ಮುಖಾಂತರ ಯಡ್ಡಿ ಪಕ್ಷಕ್ಕೆ ಸೇರಿಸಿಕೊಂಡಿದ್ದು ಮತ್ತು ಅನೇಕರ ವಿರೋಧದ ನಡುವೆಯೂ ಆತನನ್ನು ಮಂತ್ರಿ ಮಾಡಿದ್ದು. ಆದರೆ, ಸೋಮಣ್ಣನ ಸೋಲು ಸಹಜವಾಗಿ ಬೆಂಗಳೂರು ಮೇಯರ್ ಸ್ಥಾನವನ್ನು ಕಸಿಯುವ ಯಡ್ಡಿಯ ಮಹತ್ವಾಕಾಂಕ್ಷೆ ಮೇಲೆ ಕಲ್ಲು ಹಾಕಿದೆ.


ದೇವೇಗೌಡ

ಪರ್ಯಾಯ ಶಕ್ತಿಕೇಂದ್ರ


ಸುಮಾರು ಇಪ್ಪತ್ತು ಸಾವಿರ ಕೋಟಿ ರೂಪಾಯಿ ಬಜೆಟ್ ಹೊಂದಿರುವ ಬೆಂಗಳೂರು ಪಾಲಿಕೆಯನ್ನು ಪ್ರತಿಪಕ್ಷದವರು ಗೆದ್ದರೆ ಅದೊಂದು ಪರ್ಯಾಯ ಶಕ್ತಿಕೇಂದ್ರವಾಗುತ್ತದೆ ಎಂಬ ಅರಿವು ಯಡ್ಡಿಗಿದೆ. ಮಾತ್ರವಲ್ಲ, ಬೆಂಗಳೂರು ಮೇಯರ್ ಸ್ಥಾನವು ವಿರೋಧ ಪಕ್ಷದ ಹಿಡಿತಕ್ಕೆ ಸಿಕ್ಕರೆ ಅದು ಯಡ್ಡಿ ಸಾಮ್ರಾಜ್ಯದ ಪತನದ ಆರಂಭ ಎಂಬುದೂ ಎಲ್ಲರಿಗೆ ಗೊತ್ತಿರುವ ವಿಚಾರ.

ದಿಕ್ಸೂಚಿಯಾದ ಗೋವಿಂದರಾಜನಗರ

ಈ ಕಾರಣಕ್ಕಾಗಿ ಕಳೆದ ಮೂರು ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷ ಎನಿಸಿಕೊಂಡಿರುವ ಕಾಂಗ್ರೆಸ್ ಪ್ರಾದೇಶಿಕ ಪಕ್ಷದ ಮಟ್ಟಕ್ಕಿಳಿಯುತ್ತಿರುವುದು ಕಾಂಗ್ರೆ ಹೈಕಮಾಂಡಿಗೆ ನುಂಗಲಾರದ ತುತ್ತಾಗಿದೆ. ಇದೇ ಸಂದರ್ಭದಲ್ಲಿ ಪ್ರಾದೇಶಿಕ ಪಕ್ಷ ಎನಿಸಿರುವ ದೇವೇಗೌಡರ ಜನತಾದಳ ಕೂಡ ಲೋಕಸಭಾ ಮತ್ತು ಅಸೆಂಬ್ಲಿ ಉಪ ಚುನಾವಣೆಯಲ್ಲಿ ತನ್ನ ಸ್ಥಾನವನ್ನು ಹೆಚ್ಚಿಸಿಕೊಂಡು ಪ್ರಬಲವಾಗುತ್ತಿರುವುದೂ ಕಾಂಗ್ರೆಗೆ ತಲೆನೋವಾಗಿದೆ. ಹೀಗಾಗಿ ಮುಂಬರುವ ಪ್ರತಿಷ್ಠೆಯ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆ ತನ್ನ ಶಕ್ತಿಯನ್ನು ಪ್ರದರ್ಶಿಸಬೇಕಾದರೆ ಅದು ಜೆಡಿಎಸ್ ಜೊತೆ ಚುನಾವಣಾ ಪೂರ್ವ ಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯ ಎಂದು ಲೋಕಲ್ ನಾಯಕರು ಹೈಕಮಾಂಡ್‌ಗೆ ಮನವರಿಕೆ ಮಾಡಿದ್ದಾರೆ. ಇದರ ರಿಹರ್ಸಲ್ ಎಂಬಂತೆ ಗೋವಿಂದರಾಜನಗರ ಚುನಾವಣೆಯಲ್ಲಿ ಹೈಕಮಾಂಡ್‌ನ ಅರಿವಿಲ್ಲದೇ ತೆರೆಮರೆಯಲ್ಲಿ ಕಾಂಗ್ರೆ ಮತ್ತು ಜೆಡಿಎಸ್‌ನ ಲೋಕಲ್ ನಾಯಕರು ಕೈ ಜೋಡಿಸಿ ಬಿಜೆಪಿಗೆ ಮುಖಭಂಗ ಮಾಡಿದ್ದಾರೆ. ಗೋವಿಂದರಾಜನಗರದಲ್ಲಿ ಸಾಧ್ಯವಾಗಿದ್ದು ಇದೀ ಬೆಂಗಳೂರಿನಲ್ಲಿ ಯಾಕೆ ಸಾಧ್ಯವಿಲ್ಲ ಎಂದು ಎರಡೂ ಪಕ್ಷದ ನಾಯಕರು ಚಿಂತಿಸಲಾರಂಭಿಸಿದ್ದಾರೆ.

ಬಿಜೆಪಿಗೆ ಪುಡಿನಾಯಕರ ಹಾವಳಿ

ಅತ್ತ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಇಂಥ ಲೆಕ್ಕಾಚಾರದಲ್ಲಿ ತೊಡಗಿರುವಾಗ ಇತ್ತ ಬಿಜೆಪಿಯಲ್ಲಿ ಇನ್ನೊಂದು ರೀತಿಯ ತಳಮಳವನ್ನು ಅದರ ನಾಯಕರು ಎದುರಿಸುತ್ತಿದ್ದಾರೆ. ಇಲ್ಲಿ ಸೋಮಣ್ಣ ಸೋತಿರುವಾಗಲೇ ಅಲ್ಲಿ ರಾಷ್ಟ್ರ ಮಟ್ಟದ ನಾಯಕರು ದಿನನಿತ್ಯ ಕಚ್ಚಾಡುತ್ತಿರುವುದು, ಆಪರೇಶನ್ ಕಮಲವನ್ನು ಜನತೆ ತಿರಸ್ಕರಿಸಿರುವುದು, ರೇಣುಕಾಚಾರ್ಯ ತರಹದ ಮರಿ ನಾಯಕರ ಹಾವಳಿಯಿಂದ ಪಕ್ಷಕ್ಕಾದ ಡ್ಯಾಮೇಜ್ .... ಇವೆಲ್ಲವುಗಳಿಂದ ಚೆಡ್ಡಿಗಳು ತತ್ತರಿಸಿಹೋಗಿದ್ದಾರೆ. ಹೀಗಾಗಿ ಅಸೆಂಬ್ಲಿ ಚುನಾವಣೆ ಸಂದರ್ಭದಲ್ಲಿದ್ದ ಬಿಜೆಪಿ ಪರವಿದ್ದ ಮತದಾರರ ಒಲವು ಈಗ ಇಲ್ಲ ಎಂಬುದು ಪಕ್ಷದ ನಾಯಕರಿಗೂ ಮನದಟ್ಟಾಗಿದೆ. ಇಂತಹ ಸಂದರ್ಭದಲ್ಲಿ ಬೆಂಗಳೂರಿನ ಮತದಾರರನ್ನು ಓಲೈಸಲು ವಿವಿಧ ಗಿಮಿಕ್‌ಗಳು ಬಿಜೆಪಿ ಪಾಳೆಯದಲ್ಲಿ ತಯಾರಾಗುತ್ತಿದೆ. ಇದರ ಮೊದಲ ಹಂತವಾಗಿ ಕವಿ ತಿರುವಳ್ಳುವರ್ ಪ್ರತಿಮೆಯನ್ನು ಅನಾವರಣಗೊಳಿಸಲಾಯಿತು, ಎರಡನೆ ಹಂತವಾಗಿ ಬೆಂಗಳೂರಿನ ಬಹುತೇಕ ರಸ್ತೆಗಳಿಗೆ ಆತುರಾತುರವಾಗಿ ಡಾಂಬರನ್ನು ಬಳಿಯಲಾಗುತ್ತಿದೆ.



ರೋಷನ್‌ಬೇಗ್ | ಆರ್.ವಿ.ದೇವರಾಜ್ | ಚಂದ್ರಶೇಖರ್ | ರಾಮಲಿಂಗರೆಡ್ಡಿ | ದಿನೇಶ್‌ಗುಂಡೂರಾವ್

ಹಲೋ ಬೆಂಗಳೂರ್ ಎನ್ನುತ್ತಿರುವ ಕುಮಾರಣ್ಣ

ಬೆಂಗಳೂರಿನ ಮಹಾಜನತೆ ಅಸೆಂಬ್ಲಿ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಕೈಕೊಟ್ಟ ಬಗ್ಗೆ ಜೆಡಿಎಸ್ ನಾಯಕ ಕುಮಾರಸ್ವಾಮಿ ಹಲವಾರು ಬಾರಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. "ನನ್ನ ಅಧಿಕಾರಾವಧಿಯಲ್ಲಿ ನಾನು ಗ್ರಾಮ ವಾಸ್ತವ್ಯ ಕಾರ್ಯಕ್ರಮ ಮಾಡಿದ್ದರೂ ಅತ್ಯಂತ ಹೆಚ್ಚು ಹಣವನ್ನು ಬೆಂಗಳೂರಿನ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ್ದೆ'' ಎಂದು ಕುಮಾರಸ್ವಾಮಿ ಅಂಕಿಅಂಶವನ್ನು ನೀಡುತ್ತಾರೆ. ಈಗ ಆ ಕಾರಣಕ್ಕಾಗಿಯೇ ಕುಮಾರಸ್ವಾಮಿಯ ಪರ ಬೆಂಗಳೂರಿನ ಮತದಾರರು ಒಲವು ತೋರಿಸುವ ಸಾಧ್ಯತೆಗಳು ಕಾಣಿಸುತ್ತಿವೆ. ಅದಕ್ಕಿಂತಲೂ ಮುಖ್ಯವಾಗಿ ಯಡ್ಡಿ ಅಧಿಕಾರಕ್ಕೆ ಬಂದನಂತರ ಬೆಂಗಳೂರಿನ ಮತದಾರರಿಗೆ ಅಂತಹ ಮಹತ್ತರವಾದ ಸೌಲಭ್ಯಗಳೂ ಸಿಕ್ಕಿಲ್ಲ.


ಬೆಂಗಳೂರಿನ 'ಕಟ್ಟಾ'ಳುಗಳು

ಹಾಗೆ ನೋಡಿದರೆ, ಬಿಜೆಪಿಯಲ್ಲಿರುವ ಅನೇಕ ಅತಿರಥಮಹಾರಥ ನಾಯಕರುಗಳೆಲ್ಲ ಬೆಂಗಳೂರಿನಿಂದ ಆಯ್ಕೆಯಾದವರೇ. ಸಾರಿಗೆ ಸಚಿವ ಅಶೋಕ್, ವಾರ್ತಾ ಸಚಿವ ಕಟ್ಟಾ, ಗ್ರಾಮೀಣಾಭಿವೃದ್ಧಿ ಸಚಿವೆ ಶೋಭಾ ಕರಂದ್ಲಾಜೆ, ಶಿಕ್ಷಣ ಸಚಿವ ಲಿಂಬಾವಳಿ, ನಗರಾಭಿವೃದ್ಧಿ ಸಚಿವ ಸುರೇಶ್ ಕುಮಾರ್, ವೈದ್ಯಕೀಯ ಸಚಿವ ರಾಮಚಂದ್ರಗೌಡ, ಜಯನಗರದ ವಿಜಯಕುಮಾರ್.... ಇವರೆಲ್ಲರೂ ಬೆಂಗಳೂರಿನ ಅಧಿಪತಿಗಳೇ. ಇವರನ್ನೆಲ್ಲಾ ಬದಿಗಿಟ್ಟು ಸೋಮಣ್ಣನಿಗೆ ವೀಳ್ಯದೆಲೆ ಕೊಟ್ಟು ಯಡ್ಡಿ ಪಕ್ಷಕ್ಕೆ ಕರೆದುಕೊಂಡುಬಂದಿದ್ದರ ಬಗ್ಗೆ ಇವರಿಗೆಲ್ಲ ಅಸಮಾಧಾನವಿತ್ತು. ಈಗ ಸೋಮಣ್ಣನ ಸೋಲಿನ ನಂತರ, ಈ ಮರಿನಾಯಕರುಗಳೆಲ್ಲ ಜಾಗೃತಗೊಂಡಿದ್ದಾರೆ; ಮಾತ್ರವಲ್ಲ ಹೇಗಾದರೂ ಮಾಡಿ ಮಹಾನಗರ ಪಾಲಿಕೆಯಲ್ಲಿ ತಮ್ಮ ಪಕ್ಷಕ್ಕೆ ಅಧಿಕಾರ ದೊರಕುವಂತೆ ಸಕಲ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಯಾಕೆಂದರೆ ಸೋಮಣ್ಣನ ಸಹಾಯವಿಲ್ಲದೆ ತಾವೇ ಮಹಾನಗರ ಪಾಲಿಕೆಯಲ್ಲಿ ಜಯಭೇರಿ ಬಾರಿಸಿ ತಮ್ಮ ಶಕ್ತಿಯನ್ನು ಯಡ್ಡಿಗೆ ತೋರುವ ಉದ್ದೇಶ ಅವರದ್ದು.


ಸೋಮಣ್ಣ

ಹಸಿದ ಹುಲಿಗಳ ಕಾಂಗ್ರೆ

ಇದೇ ಹೊತ್ತಿನಲ್ಲಿ ಕಾಂಗ್ರೆ ಪಕ್ಷದಲ್ಲೂ ಹಲವಾರು ಮರಿನಾಯಕರುಗಳ ಮಹಾದಂಡೇ ಪಾಲಿಕೆ ಚುನಾವಣೆ ಎದುರಿಸಲು ತಯಾರಾಗಿ ನಿಂತಿದೆ. ಶಾಸಕರಾದ ದಿನೇಶ್ ಗುಂಡೂರಾವ್, ನೆ.ಲ. ನರೇಂದ್ರ ಬಾಬು, ರಾಮಲಿಂಗಾರೆಡ್ಡಿ, ಹ್ಯಾರಿಸ್, ಜಾರ್ಜ್, ರೋಷನ್ ಬೇಗ್ ಮೊದಲಾದವರು ತಮ್ಮ ತಮ್ಮ ಹಿಂಬಾಲಕರಿಗೆ ಟಿಕೆಟ್ ನೀಡಿ ಪಕ್ಷವನ್ನು ಭದ್ರಪಡಿಸುವ ಕಾರ್ಯ ಆರಂಭಿಸಿದ್ದಾರೆ. ಇನ್ನು ರಾಷ್ಟ್ರ ನಾಯಕರಾದ ಬಿ.ಕೆ. ಹರಿಪ್ರಸಾದ್ ಮತ್ತು ಜಾಫರ್ ಷರೀಫ್ ಎಂದಿನಂತೆ ಚುನಾವಣೆಗಾಗಿ ಸಿಕ್ಕಾಪಟ್ಟೆ ಸಕ್ರಿಯರಾಗಿದ್ದಾರೆ. ಮೊನ್ನಿನ ಅಸೆಂಬ್ಲಿ ಚುನಾವಣೆಯಲ್ಲಿ ಸೋತು ಮುಖಭಂಗ ಅನುಭವಿಸಿದ ಆರ್.ವಿ. ದೇವರಾಜ್ ಮತ್ತು ಕೆ.ಚಂದ್ರಶೇಖರ್ ಕೂಡ ಬರಲಿರುವ ಚುನಾವಣೆಯಲ್ಲಿ ಸಕ್ರಿಯವಾಗಿ ತಮ್ಮ ಹಿಂಬಾಲಕರಿಗೆ ಟಿಕೆಟ್ ನೀಡಿ ತಮ್ಮ ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಿರ್ಧರಿಸಿದ್ದಾರೆ. ಹಸಿದ ಹುಲಿಯಂತಾಗಿರುವ ಇವರನ್ನು ತಡೆಯಲು ಬಹುಶಃ ಬಿಜೆಪಿ ಶಾಸಕರಿಂದ ಕಷ್ಟವಾಗಬಹುದು.


ಕುಮಾರಸ್ವಾಮಿ

ಕಾಂಗ್ರೆ ಪಾಲಿಗೆ ಮತ್ತೊಂದು ಆಶಾಕಿರಣವೆಂದರೆ ಬೆಂಗಳೂರಿನಲ್ಲಿರುವ ಬಹುತೇಕ ಎಲ್ಲಾ ಸ್ಲಂಗಳು ಕಾಂಗ್ರೆ ಶಾಸಕರನ್ನೇ ಬೆಂಬಲಿಸಿರುವುದು. ಮಹಾನಗರ ಪಾಲಿಕೆ ಚುನಾವಣೆಯಲ್ಲಿ ವಿದ್ಯಾವಂತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸದಿರುವುದರಿಂದ ಸ್ಲಂ ನಿವಾಸಿಗಳ ಮತಗಳೇ ನಿರ್ಣಾಯಕ. ಹೀಗಾಗಿ ಸರ್ವಜ್ಞನಗರ, ಪುಲಿಕೇಶಿ ನಗರ, ಭಾರತಿನಗರ, ಶಾಂತಿನಗರ, ಗಾಂಧಿನಗರ ಮತ್ತು ಬ್ಯಾಟರಾಯನಪುರದಲ್ಲಿರುವ ಸ್ಲಂಗಳಲ್ಲಿ ಯಾವುದೇ ಕಾರಣಕ್ಕೆ ಭಗವದ್ ಧ್ವಜ ಹಾರಲು ಸಾಧ್ಯವಿಲ್ಲ.

ಪುಡಿ ರೌಡಿಗಳಿಗೆ ಹಬ್ಬ

ಈ ಬಾರಿ ಮತ್ತೊಂದು ವಿಶೇಷವೆಂದರೆ, ಪ್ರತಿಯೊಂದು ವಾರ್ಡಿನ ಮತದಾರರ ಸಂಖ್ಯೆ ಮೂವತ್ತೈದು ಸಾವಿರವನ್ನು ಮೀರದಂತೆ ಚುನಾವಣಾ ಆಯೋಗದ ನೋಡಿಕೊಂಡಿರುವುದು. ಅಂದರೆ, ಮೂವತ್ತೈದು ಸಾವಿರ ಮತದಾರರಿದ್ದರೂ ಶೇ. ಐವತ್ತರಷ್ಟು ಮತದಾನ ಆಯಿತೆಂದರೆ ಹದಿನೇಳು ಸಾವಿರ ಜನ ಓಟು ಹಾಕಿದಂತೆ. ಪ್ರತೀ ಕ್ಷೇತ್ರದಿಂದ ಹತ್ತಾರು ಸ್ವತಂತ್ರ ಅಭ್ಯರ್ಥಿಗಳ ಹೊರತಾಗಿ ನಾಲ್ಕು ಪ್ರಮುಖ ರಾಜಕೀಯ ಪಕ್ಷಗಳ ಅಭ್ಯರ್ಥಿಗಳೂ ಸ್ಪರ್ಧಿಸಲಿದ್ದಾರೆ. ಇದರರ್ಥ ಓರ್ವ ಅಭ್ಯರ್ಥಿ ಸುಮಾರು ಎರಡು ಸಾವಿರ ಮತಗಳನ್ನು ಪಡೆದೂ ಪಾಲಿಕೆಗೆ ಕಾರ್ಪೊರೇಟರ್ ಆಗಿ ಆಯ್ಕೆಯಾಗುವ ಸಾಧ್ಯತೆ ಇದೆ. ಕಳೆದ ಬಾರಿ ಸಾವಿರದ ಎಂಟು ನೂರು ಮತ ಪಡೆದವರೂ ಕಾರ್ಪೊರೇಟರ್ ಆಗಿದ್ದರು. ಈ ಬಾರಿ ನೂರಿನ್ನೂರು ಓಟುಗಳ ಅಂತರದಲ್ಲಿ ಸೋಲು/ಗೆಲುವು ನಿರ್ಣಯವಾಗುವ ಪರಿಸ್ಥಿತಿ ಒದಗಿಬಂದಿದೆ. ಹೀಗಾಗಿ ಈಗ ಗಣೇಶನ ಹಬ್ಬ, ಅಣ್ಣಮ್ಮನ ಜಾತ್ರೆ, ರಾಜ್ಯೋತ್ಸವ ಮೊದಲಾದ ಆಚರಣೆಗಳು ಎಲ್ಲ ಬಡಾವಣೆಯ ಗಲ್ಲಿಗಲ್ಲಿಗಳಲ್ಲಿ ನಡೆಯುತ್ತಿವೆ.


ಮೈತ್ರಿ ಯಾಕೆ ಬೇಕು?

ಬದಲಾಗಿರುವ ಇಂದಿನ ಸಂದರ್ಭದಲ್ಲಿ ಪಾಲಿಕೆ ಚುನಾವಣೆಯಲ್ಲಿ ಯಾವುದೇ ಅಭ್ಯರ್ಥಿ ಗೆದ್ದರೆ, ಒಂದು ಸಾವಿರ ಮತಗಳ ಅಂತರಕ್ಕಿಂತ ದೊಡ್ಡ ಅಂತರದಲ್ಲಿ ಗೆಲ್ಲಲು ಸಾಧ್ಯವಿಲ್ಲ. ಕಾಂಗ್ರೆ ಮತ್ತು ದಳದ ನಡುವೆ ಮೈತ್ರಿ ಏರ್ಪಟ್ಟರೆ, ಮುಸ್ಲಿಂ, ಕ್ರಿಶ್ಚಿಯನ್ ಹಾಗೂ ಪ್ರಗತಿಪರರ ಮತಗಳೆಲ್ಲವೂ ಹರಿದುಹಂಚಿಹೋಗುವ ಅಪಾಯ ತಪ್ಪಿ ಅವೆಲ್ಲವೂ ಕೋಮುವಾದಿ ವಿರೋಧಿ ಶಕ್ತಿಯಾಗಿ ಮಾರ್ಪಡುತ್ತದೆ. ಖಂಡಿತವಾಗಿಯೂ ಅಲ್ಪಸಂಖ್ಯಾತರ ಮತಗಳೇ ಈ ಬಾರಿಯ ಪಾಲಿಕೆ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ಇದರ ಜೊತೆಗೆ ಆಪರೇಷನ್ ಕಮಲ ಎಂಬ ಅಸಹ್ಯ ಹುಟ್ಟಿಸುವ ರಾಜಕೀಯದಿಂದ ಅನೇಕ ಬಿಜೆಪಿ ಬೆಂಬಲಿಗರಿಗೂ ಪಕ್ಷದ ಮೇಲೆ ಬೇಸರ ಹುಟ್ಟಿದೆ. ಶಿಸ್ತಿನ ಪಕ್ಷ ಎನಿಸಿಕೊಂಡಿದ್ದ ಬಿಜೆಪಿಯ ರಾಷ್ಟ್ರೀಯ ನಾಯಕರ ನಿತ್ಯದ ದೊಂಬರಾಟ ಬಿಜೆಪಿ ಒಲವಿರುವ ಮತದಾರರಲ್ಲೂ ಭ್ರಮನಿರಸನ ಉಂಟುಮಾಡಿದೆ. ಇವರೆಲ್ಲಾ ಈ ಬಾರಿಯ ಚುನಾವಣೆಯಲ್ಲಿ, ಒಂದೋ ಮತದಾನ ಮಾಡಲಾರರು ಅಥವಾ ಆಪರೇಷನ್ ಕಮಲದ ರೂವಾರಿಗಳಿಗೆ ಪಾಠ ಕಲಿಸಬೇಕು ಎಂಬ ಕಾರಣಕ್ಕಾಗಿ ಪ್ರತಿಪಕ್ಷಗಳಿಗೆ ಓಟು ಒತ್ತಿದರೂ ಆಶ್ಚರ್ಯವಿಲ್ಲ. ಈ ಕಾರಣಕ್ಕಾಗಿ ಈ ಬಾರಿ ಕಾಂಗ್ರೆ ಮತ್ತು ದಳದ ಚುನಾವಣಾ ಮೈತ್ರಿಯ ಅಗತ್ಯ ಹೆಚ್ಚಾಗಿದೆ.

ಆಗಲಿದೆಯೇ ಆಪರೇಷನ್?

ಅಸೆಂಬ್ಲಿ ಮತ್ತು ಲೋಕಸಭಾ ಚುನಾವಣೆಯಲ್ಲಿ ...ಕ್ಷದ ಸಿದ್ಧಾಂತ ಮತ್ತು ಪ್ರಣಾಳಿಕೆಯ ಮೇಲೆ ಜನ ...ತ ನೀಡುತ್ತಾರೆ. ಆದರೆ ಪಾಲಿಕೆ ಚುನಾವಣೆ ...ದರ್ಭದಲ್ಲಿ ಅದನ್ನೆಲ್ಲಾ ಗಾಳಿಗೆ ತೂರಿದ ನಿದರ್ಶನಗಳು ...ಕಾದಷ್ಟಿವೆ. ಹೀಗಾಗಿ ಲೋಕಸಭೆ ಮತ್ತು ವಿಧಾನಸಭೆ ...ನಾವಣೆಯಲ್ಲಿ ಜಯಭೇರಿ ಬಾರಿಸಿದ ಬಿಜೆಪಿ ಪಕ್ಷ ...ಲಿಕೆ ಚುನಾವಣೆಯುಲ್ಲೂ ಅದೇ ತರಹದ ...ಧನೆಯನ್ನು ಮಾಡುತ್ತದೆ ಎಂದು ನಿರೀಕ್ಷಿಸುವುದು ...ಷ್ಟಾಗುತ್ತದೆ.

ಆದರೂ ಬೆಂಗಳೂರು ಮಹಾನಗರ ಪಾಲಿಕೆ ...ದ್ದುಗೆಯನ್ನು ಏರಲು ಬಿಜೆಪಿ ಚಿಂತಕರ ...ವಡಿಯಲ್ಲಿ ಗುಪ್ತ ಯೋಜನೆಗಳು ನಡೆಯುತ್ತಿವೆ. ...ೋಕಸಭಾ ಚುನಾವಣಾ ಸಂದರ್ಭದಲ್ಲಿ ಹೇಗೆ ...ನೇ ಘಳಿಗೆಯಲ್ಲಿ ಆಪರೇಷನ್ ಕಮಲದ ...ಚಿದಾಂತರ ಚಂದ್ರೇಗೌಡರನ್ನು ಪಕ್ಷಕ್ಕೆ ತಂದು ...ಬ ವೃದ್ಧಿಸಿಕೊಂಡಿತೋ ಅದೇ ಮಾದರಿಯಲ್ಲಿ ...ಬವಾರು ಆಪರೇಷನ್‌ಗಳನ್ನು ಮಾಡಿ ...ಾರುಯಾರನ್ನ ತಮ್ಮತ್ತ ಸೆಳೆದುಕೊಳ್ಳಬಹುದು ...ಬ ದೊಡ್ಡ ಪಟ್ಟಿಯನ್ನೇ ತಯಾರು ...ಾಡಿಟ್ಟಿದ್ದಾರಂತೆ. ಆದರೆ ಬಿಜೆಪಿಯ ದುರದೃಷ್ಟ ...ತಹದ್ದೆಂದರೆ "ಪಾಲಿಕೆ ಚುನಾವಣೆ ಸಂದರ್ಭದಲ್ಲಿ ...ಪರೇಷನ್ ಕಮಲ ...ಾಡಿ ಮೂವತ್ತರಿಂದ ...ೂವತ್ತೈದು ಹಾಲಿ ...ರ್ಪೊರೇಟರ್‌ಗಳನ್ನು ...ಾಂಗ್ರೆಸಿನಿಂದ ಬಿಜೆಪಿಗೆ ...ೆತರುತ್ತೇನೆ" ಎಂದು ...ಭರವಸೆ ನೀಡಿದ್ದ ...ೋಮಣ್ಣನವರೇ ಈಗ ...ರಾಭವಗೊಂಡಿದ್ದಾರೆ. ...ಸ್ತರಿಂದ ಬರಲಿರುವ



...ನಾವಣೆಯಲ್ಲಿ ಆಪರೇಷನ್ ಕಮಲ ಎಂಬ ...ತ್ರದಿಂದ ಬಿಜೆಪಿಗೆ ಎಷ್ಟು ಲಾಭವಾಗುತ್ತದೆ ...ಂಬುದರ ಬಗ್ಗೆ ಸ್ವತಃ ಬಿಜೆಪಿ ಪಾಳಯದಲ್ಲಿ ...ಶಯ ಹುಟ್ಟಿದೆ.

ಬೆಂಗಳೂರಿನಲ್ಲಿ 18 ಶಾಸಕರನ್ನು, ಐದು ಸಚಿವರನ್ನು ...ಗೂ ಮೂರು ಲೋಕಸಭಾ ಸದಸ್ಯರನ್ನು ಬಿಜೆಪಿ ... ಹೊಂದಿದ್ದರೂ ಅಕಸ್ಮಾತ್ ಕಾಂಗ್ರೆಸ್ ಮತ್ತು ...ಜನತಾದಳ ಜಂಟಿಯಾಗಿ ಬೆಂ.ಮ.ಪಾ ಚುನಾವಣೆಯನ್ನು ...ದುರಿಸಿದರೆ ಬಿಜೆಪಿಗೆ ಬೆಂಗಳೂರಿನ ಪಾಲಿಕೆ ಮೇಲೆ ...ಿಡಿತ ಸಿಗುವುದು ಕಷ್ಟವಾಗಬಹುದು.

ಲೋಕಸಭಾ ಮತ್ತು ಅಸೆಂಬ್ಲಿ ಉಪಚುನಾವಣೆಯಲ್ಲಿ ...ಮುಖಭಂಗಕ್ಕೊಳಗಾಗಿರುವ ಕಾಂಗ್ರೆಸ್ ನಾಯಕರು ಈಗ ...ಮ್ಮ ಅಹಂಕಾರವನ್ನು ಬದಿಗಿಟ್ಟು ವಾಸ್ತವ ಪರಿಸ್ಥಿತಿ ...ಯನ್ನು ವಿಶ್ಲೇಷಿಸುತ್ತಿರುವುದು ಶುಭಸೂಚಕ. ತಮ್ಮದು ...ಷ್ಟ್ರೀಯ ಪಕ್ಷ ಎಂದು ಬೀಗುತ್ತಿದ್ದ ಕಾಂಗ್ರೆಸಿಗಳು ...ಪಾಲಿಕೆ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದರೆ ...ಮತ್ತೊಮ್ಮೆ ಭಾರೀ ಸೋಲು ಕಾಣಬೇಕಾಗುತ್ತದೆ. ಅಷ್ಟೇ ...ಲ್ಲದೆ, ತಮ್ಮದು ಗ್ರಾಮೀಣ ಪಕ್ಷ ಎನ್ನುವ ಜನತಾದಳದ ...ನಾಯಕರು ಕೂಡಾ ಬೆಂಗಳೂರು ಮಹಾನಗರ ಪಾಲಿಕೆ ...ಚುನಾವಣೆಯಲ್ಲಿ ಜಯಭೇರಿ ಬಾರಿಸಿ ತಮ್ಮದು ...ಪಟ್ಟಣದ ಮತ್ತು ವಿದ್ಯಾವಂತರ ಪಕ್ಷ ಎನಿಸಿಕೊಳ್ಳುವ ...ತವಕದಲ್ಲಿದ್ದಾರೆ. ಕೊಳ್ಳೇಗಾಲ ಕ್ಷೇತ್ರದಲ್ಲಿ ತಮ್ಮ ಪಕ್ಷದ ...ಸ್ಪರ್ಧಿ ಸೋಲು ಕಂಡ ನಂತರ ಕಾಂಗ್ರೆಸ್ ನಾಯಕ ...ಸಿದ್ಧರಾಮಯ್ಯ ಕೂಡಾ ಈಗ ಮೆದುವಾಗಿದ್ದಾರೆ. "...ಜೆಡಿಎಸ್ ಜೊತೆ ಚುನಾವಣಾ ಮೈತ್ರಿ ಮಾಡಿಕೊಂಡರೆ ...ನನ್ನದೇನೂ ಅಭ್ಯಂತರವಿಲ್ಲ" ಎಂದು ಅವರು ಹೇಳಿ...ರುವುದೇ ಅದಕ್ಕೆ ಸಾಕ್ಷಿ. ಜೊತೆಗೆ ತಳಮಟ್ಟದ ಸಂಘಟಕರ ...ಬಲವಿಲ್ಲದ ಕಾಂಗ್ರೆಸ್ ರಾಜ್ಯಾಧ್ಯಕ್ಷ ಆರ್.ವಿ.ದೇಶಪಾಂಡೆ ...ಅದಾ ಹೇಗಾದರೂ ಮಾಡಿ ತನ್ನ ಅಧಿಕಾರಾವಧಿಯಲ್ಲಿ ...ಪಾಲಿಕೆಯಲ್ಲಿ ಕಾಂಗ್ರೆಸ್ ಬಾವುಟ ಹಾರಿಸಬೇಕೆಂದು ...ಬಯಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೂ, ದಳಕ್ಕೂ ...ಚುನಾವಣಾ ಮೈತ್ರಿ ತೀರಾ ಅನಿವಾರ್ಯವಾಗಿದೆ. ಆದರೆ ... ಮೈತ್ರಿಯ ಸ್ನೇಹಹಸ್ತವನ್ನು ಮೊದಲು ಯಾರು ...ಚಾಚಬೇಕು ಎಂಬ ಒಣಪ್ರತಿಷ್ಠೆಯಿಂದಾಗಿ ಸ್ವಲ್ಪ ...ವಿಳಂಬವಾಗುತ್ತಿದೆಯೇ ವಿನಃ ಇಬ್ಬರೂ ಭಾಯಿಭಾಯಿ ...ಎನ್ನುವ ದಿನಗಳು ದೂರವಿಲ್ಲ. ಹಾಗೆಯೇ ಅವರಿಬ್ಬರೂ ...ಕೈ ಜೋಡಿಸಿದರೆ ಮಾತ್ರ ಕೋಮುವಾದಿ ಪಕ್ಷ ...ಬಿಜೆಪಿಗೆ ಟಾಟಾ ಹೇಳಲು ಮತದಾರರಿಗೆ ಅವಕಾಶ ...ಮಾಡಿಕೊಟ್ಟಂತಾಗುತ್ತದೆ. ಇಲ್ಲದಿದ್ದರೆ ಚಿತ್ತಾಪುರ ಮತ್ತು ...ಕೊಳ್ಳೇಗಾಲ ಅಸೆಂಬ್ಲಿ ಕ್ಷೇತ್ರಗಳನ್ನು ಬಿಜೆಪಿಗೆ ಬಿಟ್ಟು...ಕೊಟ್ಟಂತೆ ಬೃಹತ್ ಬೆಂಗಳೂರನ್ನೂ ಚೆಡ್ಡಿಗಳಿಗೆ ...ಬಿಟ್ಟುಕೊಟ್ಟು ಎರಡೂ ಪಕ್ಷಗಳು 'ಬರಿ'ಗೈ' ಆಗ...ಬೇಕಾಗುತ್ತದೆ.

● ಸದಾಶಿವ ಶೆಣೈ

ನ್ಯಾಯಾಲಯದ ಆದೇಶವನ್ನೂ ಪಾಲಿಸದ ಅಧಿಕಾರಿಗಳು


ಬೆಂಗಳೂರು ಅಡ್ಡಾದಿಡ್ಡಿಯಾಗಿ ಬೆಳೆಯುತ್ತಾ ವಿಶ್ವದ ಗಮನ ಸೆಳೆಯುತ್ತಿದ್ದಂತೆಯೇ ಇಲ್ಲಿ ಭೂಮಿಗೆ ಚಿನ್ನದ ಬೆಲೆ ಬಂದುಬಿಟ್ಟಿದೆ. ಅದರ ಬೆನ್ನಹಿಂದೆಯೇ ಸರ್ಕಾರಿ ಭೂಮಿಗಳನ್ನು ಒತ್ತುವರಿ ಮಾಡಿಕೊಳ್ಳುವುದು, ಅಮಾಯಕರ ತಲೆ ಮೇಲೆ ಟೋಪಿ ಇಟ್ಟು ಭೂಮಿ ನುಂಗುವುದು ಸರ್ವೇಸಾಮಾನ್ಯವಾಗಿಬಿಟ್ಟಿದೆ. ಸಾರ್ವಜನಿಕರ ಸೊತ್ತಾಗಿರುವ ಸರ್ಕಾರಿ ಭೂಮಿಯನ್ನು ಫೋರ್ಜರಿ ದಾಖಲೆಗಳ ಮೂಲಕ ಗುಳುಂ ಮಾಡುವ ಈ ಭೂಗಳ್ಳರೊಂದಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳೂ ಕೈಜೋಡಿಸುತ್ತಾರೆ.

ಇಂಥ ಅಕ್ರಮಗಳ ವಿರುದ್ಧ ಜಾಗೃತ ನಾಗರಿಕರು ಅಲ್ಲಲ್ಲಿ ದನಿಯೆತ್ತುತ್ತಿದ್ದಾರಾದರೂ ಅದು ಅದು ಅರಣ್ಯರೋದನವಾಗಿಬಿಟ್ಟಿದೆ. ಭೂ ಮಾಫಿಯಾದವರು ಎಷ್ಟೊಂದು ಬಲಿತಿದ್ದಾರೆಂದರೆ ನ್ಯಾಯಾಲಯಗಳ ಆದೇಶಗಳನ್ನೂ ಧಿಕ್ಕರಿಸಿ ತಮ್ಮ ದಂಧೆಯಲ್ಲಿ ನಿರತರಾಗಿದ್ದಾರೆ. ಅದಕ್ಕೊಂದು ಜ್ವಲಂತ ಉದಾಹರಣೆ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲೊಂದಾದ ಜೆ.ಪಿ.ನಗರದಲ್ಲಿರುವ ಮಿನಿ-ಫಾರೆಸ್ಟ್ ಎಂದೇ ಪ್ರಸಿದ್ಧವಾಗಿರುವ ಸಾರ್ವಜನಿಕ ಉದ್ಯಾನವನವೊಂದು ದೇವರು-ಧರ್ಮದ ಹೆಸರಿನಲ್ಲಿ ಭೂಗಳ್ಳರ ಸೊತ್ತಾಗುತ್ತಿರುವುದು. ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿ ಪಿ.ಡಿ.ದಿನಕರನ್ ಅವರೇ ಖುದ್ದಾಗಿ ಈ ಅಕ್ರಮದ ವಿರುದ್ಧ ತೀರ್ಪು ಕೊಟ್ಟಿದ್ದರೂ ಅದಕ್ಕೆ ಮಹಾನಗರ ಪಾಲಿಕೆಯ ಅಧಿಕಾರಿಗಳು ಕ್ಯಾರೆ ಎನ್ನುತ್ತಿಲ್ಲ ಎಂದರೆ ಪರಿಸ್ಥಿತಿ ಹೇಗಿರಬಹುದೆಂದು ಯಾರು ಬೇಕಾದರೂ ಅರ್ಥ ಮಾಡಿಕೊಳ್ಳಬಹುದು.●


ಮಿನಿಫಾರೆಸ್ಟ್‌ನಲ್ಲಿ ನಡೆಯುತ್ತಿರುವುದೇನು?

ಅಸಲಿಗೆ ಈ ವಿಚಾರವಾಗಿ 'ಲಂಕೇಶ್' ಈ ಹಿಂದೆಯೂ ಎರಡು ಬಾರಿ ವರದಿ ಮಾಡಿತ್ತು. ಮಹಾನಗರ ಪಾಲಿಕೆಯ ಅಧಿಕಾರಿಗಳ ಜಡ ಕಿವಿಗಳನ್ನು ತೆರೆಸುವುದಕ್ಕಾಗಿ ಈಗ ಮತ್ತೊಮ್ಮೆ ಬರೆಯಬೇಕಾಗಿ ಬಂದಿದೆ.

ರಾಜಧಾನಿ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲೊಂದಾದ ಜೆ.ಪಿ.ನಗರವನ್ನು 1976ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಿದೆ. ಇದರ ಮೂರು ಮತ್ತು ನಾಲ್ಕನೇ ಹಂತದ ಬಡಾವಣೆಗಳು ಬನ್ನೇರುಘಟ್ಟ ರಸ್ತೆಯ ಪೂರ್ವ ಭಾಗದ ಸರಹಂಚಿನಲ್ಲಿವೆ. ಬಿಡಿಎ ಈ ಬಡಾವಣೆಯನ್ನು ನಿರ್ಮಿಸುವಾಗ ಬನ್ನೇರುಘಟ್ಟ ರಸ್ತೆ ಜಯದೇವ ಹೃದ್ರೋಗ ಆಸ್ಪತ್ರೆಯಿಂದ ಹೆಚ್ಚು ಕಡಿಮೆ ಬಿಲೇಕಹಳ್ಳಿಯವರೆಗೆ ರಸ್ತೆಯ ಪೂರ್ವಭಾಗದಲ್ಲಿ ಸಣ್ಣ ಕೈಗಾರಿಕೆಗಳಿಗೆ ನಿವೇಶನವನ್ನು ನಿರ್ಮಿಸಿತು. ಮುಂದೆ ಈ ಸಣ್ಣ ಕೈಗಾರಿಕೆಗಳಿಂದ ಉಂಟಾಗುವ ಸಂಭವನೀಯ ವಾಯುಮಾಲಿನ್ಯ ಮತ್ತು ಶಬ್ದಮಾಲಿನ್ಯದಿಂದ ಜೆ.ಪಿ.ನಗರದ ಮೂರು ಮತ್ತು ನಾಲ್ಕನೇ ಹಂತದ ನಿವಾಸಿಗಳನ್ನು ಮುಕ್ತಗೊಳಿಸಲು ಮೂರನೇ ಹಂತದಲ್ಲಿ ಮಿನಿ ಫಾರೆಸ್ಟ್ ಮತ್ತು ನಾಲ್ಕನೇ ಹಂತದಲ್ಲಿ ನಿವೇಶನ ನಂ. 9 ನ್ನು ಉದ್ಯಾನವನವನ್ನಾಗಿ ಅಭಿವೃದ್ಧಿಪಡಿಸಲು ತೀರ್ಮಾನಿಸಿತು. ನಂತರ ಮೇಲಿನ ಸ್ಥಳಗಳಲ್ಲಿ ತನ್ನ ಇತಿಮಿತಿಯೊಡನೆ ಮಿನಿ ಫಾರೆಸ್ಟ್ ಮತ್ತು ನಾಲ್ಕನೇ ಹಂತದ 9ನೇ ನಂಬರಿನ ಉದ್ಯಾನವನವನ್ನು ಅಭಿವೃದ್ಧಿಪಡಿಸಿ ಒಟ್ಟು ಬಡಾವಣೆಯನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿತು.



ಕಂಡೇಗೌಡ ರೂಪಿಸಿದ ನಕ್ಷೆ.....



ಸಮಸ್ಯೆ ಪರಿಹಾರಕ್ಕೆ ಬೇಕಿರುವ ನಕ್ಷೆ.....

ನಾಲ್ಕನೇ ಹಂತದ ಉದ್ಯಾನವನದ (ಸಂಖ್ಯೆ 9) ವಿಸ್ತೀರ್ಣ ಸುಮಾರು ಒಂದೂವರೆ ಎಕರೆ. ಇಂದು ಜೆ.ಪಿ.ನಗರದ ಬಡಾವಣೆಯಲ್ಲಿ 30x40 ಅಡಿಯ ಒಂದು ನಿವೇಶನ ಏನಿಲ್ಲವೆಂದರೂ ಒಂದು ಕೋಟಿಯ ಮೇಲೆ ಬಾಳುತ್ತದೆ. ಈ ಲೆಕ್ಕಾಚಾರದಲ್ಲಿ ಹೇಳುವುದಾದರೆ ನಾಲ್ಕನೇ ಹಂತದಲ್ಲಿರುವ ಈ ಉದ್ಯಾನವನದ ಬೆಲೆ ಕಮ್ಮಿಯೆಂದರೂ ನಲವತ್ತು ಕೋಟಿಯಾಗುತ್ತದೆ. ಮೊದಲೇ ಮಹಾನಗರ ಪಾಲಿಕೆಯ ದಿವ್ಯನಿರ್ಲಕ್ಷ್ಯಕ್ಕೊಳಗಾಗಿದ್ದ ಈ ಉದ್ಯಾನ ಪಾಳು ಜಾಗದಂತಿತ್ತು. ಈ ನಿರ್ಲಕ್ಷ್ಯವನ್ನೇ ಬಂಡವಾಳ ಮಾಡಿಕೊಂಡು ಇಡೀ ಉದ್ಯಾನವನ್ನೇ ಗುಳುಂ ಮಾಡಲು 1998 ರಲ್ಲೇ ಒಬ್ಬ ನಕಲಿ ಸ್ವಾಮಿ ಹುಟ್ಟಿಕೊಂಡಿದ್ದ. ಆದರೆ ಆ ಹೊತ್ತು ಜೆ.ಪಿ.ನಗರ ಬಡಾವಣೆಯ ಜನ ತೋರಿದ ಪ್ರತಿರೋಧದಿಂದಾಗಿ ಹತ್ತಾರು ಕೋಟಿ ಬೆಲೆಬಾಳುವ ಸಾರ್ವಜನಿಕ ಜಾಗ ಕಳ್ಳ ಸ್ವಾಮಿಯ ಪಾಲಾಗುವುದು ತಪ್ಪಿತ್ತು.

ನಂತರದಲ್ಲಿ ಬಡಾವಣೆಯ ಪರಿಸರವನ್ನು ರಕ್ಷಿಸುವುದಕ್ಕಾಗಿ ನಿವಾಸಿಗಳು ಮಹಾನಗರ ಪಾಲಿಕೆಯ ಆಯುಕ್ತರಿಗೆ ದುಂಬಾಲು ಬಿದ್ದರು. ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಆಯುಕ್ತರು ಸಂಬಂಧಪಟ್ಟ ಇಲಾಖೆಗಳಿಂದ ಸ್ಥಳ ಪರಿಶೀಲನೆ ನಡೆಸಿ ಉದ್ಯಾನ ಅಭಿವೃದ್ಧಿಗೆ 27 ಲಕ್ಷ ರೂಪಾಯಿ ವೆಚ್ಚದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಅನುಮೋದಿಸಿದರಲ್ಲದೇ ತಕ್ಷಣದಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಮಂಜೂರು ಮಾಡಿದರು. ಜೆ.ಪಿ.ನಗರದ ಈ ಪಾಳು ಜಾಗಕ್ಕೆ ಒಂದಿಷ್ಟು ಉದ್ಯಾನದ ರೂಪು ಬರತೊಡಗಿತು. ಆಗಲೇ ಒಬ್ಬ ಕಳ್ಳ ಸ್ವಾಮಿಯೊಬ್ಬ ಈ ಅಮೂಲ್ಯ ಜಾಗವನ್ನು ಗುಳುಂ ಮಾಡುವುದಕ್ಕೆ ಪ್ರಯತ್ನಿಸಿದ್ದನಾದ್ದರಿಂದ ಮಹಾನಗರ ಪಾಲಿಕೆಯು "ಉದ್ಯಾನವನದ ಜಾಗ, ಅತಿಕ್ರಮ ನಿಷಿದ್ಧ" ಎಂಬ ಒಂದು ಬೋರ್ಡ್ ನೆಟ್ಟಿತು. ಅಲ್ಲಿಗೆ ಜೆಪಿ ನಗರದ ನಾಗರಿಕರೂ ಒಂದಿಷ್ಟು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದೂ ಆಯಿತು.

ಆದರೆ, ನಾಗರಿಕರ ಈ ನೆಮ್ಮದಿ ಬಹಳ ಕಾಲ ಇರಲಿಲ್ಲ. ಜೆಪಿ ನಗರದಂತ ಪ್ರತಿಷ್ಠಿತ ಬಡಾವಣೆಯಲ್ಲಿ ನಲ್ವತ್ತು ಕೋಟಿ ಬೆಲೆಬಾಳುವ ಈ ಸರ್ಕಾರಿ ಆಸ್ತಿ ನೆಲಗಳ್ಳರ ಕಣ್ಣು ಕುಕ್ಕುತ್ತಲೇ ಇತ್ತು. ಆಗ ಹುಟ್ಟಿಕೊಂಡಿದ್ದೇ "ಜೆ.ಪಿ.ನಗರ 4ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ" ಎಂಬ ಸಂಘ. ಈ ಸಂಘವನ್ನು ಎಷ್ಟೊಂದು ತುರ್ತಾಗಿ ಮಾಡಿದರೆಂದರೆ ಇದರ ನೋಂದಣಿಯೇ ನೋಂದಣಿ ಕಾಯ್ದೆಗೆ ಅನುಗುಣವಾಗಿರಲಿಲ್ಲ. ಇದರ ಬೈಲಾದಾದ್ಯಂತ ಜನಸಾಮಾನ್ಯರ ಮತೀಯ ಭಾವನೆಗಳನ್ನು ಕೆರಳಿಸಿ ಕೋಮುಸಾಮರಸ್ಯಕ್ಕೆ ಧಕ್ಕೆ ತರುವಂತಹ ವಿಚಾರಗಳೇ ಇವೆ. ನಮ್ಮ ದೇಶದಲ್ಲಿ ಏನುಬೇಕಾದರೂ ನಡೆಯಬಹುದಲ್ಲವೆ? ಇದಕ್ಕೂ ಕೂಡ ಸಮ್ಮತಿ ಸಿಕ್ಕಿತು. ಈ ಪಾರ್ಕನ್ನು ನುಂಗುವುದಕ್ಕಾಗಿ ಒಂದು ಮಾಸ್ಟರ್ ಪ್ಲಾನ್ ಸಿದ್ಧಪಡಿಸಿದ ಈ ಗ್ಯಾಂಗು ಮೊದಲು ಅಲ್ಲೊಂದು ದೇವಸ್ಥಾನವನ್ನು ಕಟ್ಟಿತು. ಗುಡಿಯಲ್ಲಿದ್ದ ದೇವರಿಗೆ ಶ್ರವಣದೋಷವಿದೆ ಎಂಬಂತೆ ದಿನಾಲು ಬೆಳಗ್ಗೆ, ಮಧ್ಯಾಹ್ನ, ಸಂಜೆ ಜೋರಾಗಿ ಮೈಕ್ ಹಾಕಿ ಶ್ಲೋಕ, ಭಕ್ತಿಗೀತೆಗಳನ್ನು ಭಿತ್ತರಿಸಿ ಬಡಾವಣೆಯ ಜನರ ನೆಮ್ಮದಿಯನ್ನೇ ಹಾಳು ಮಾಡಲಾರಂಭಿಸಿತು. ಮಹಾನಗರ ಪಾಲಿಕೆಯ 'ಉದ್ಯಾನವನದ ಜಾಗ, ಅತಿಕ್ರಮ ನಿಷಿದ್ಧ' ಎಂಬ ನಾಮಫಲಕದಲ್ಲಿದ್ದ 'ಅತಿಕ್ರಮ ನಿಷಿದ್ಧ' ಎಂಬುದನ್ನು ಅಳಿಸಿಹಾಕಿದರು. ಅದರ ಪಕ್ಕದಲ್ಲೇ "ಜೆ.ಪಿ.ನಗರ 4ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ" ಎಂಬ ತಮ್ಮ ಸಂಘದ ಬೋರ್ಡು ನೆಟ್ಟರು. ಪಾಲಿಕೆ ನೆಟ್ಟಿದ್ದ ಗಿಡಗಳನ್ನು ಒಂದೊಂದಾಗಿ ಕಿತ್ತೆಸೆಯಲಾರಂಭಿಸಿದರು.

ಈ ಸಂಘದಿಂದ ಬೇಸತ್ತು ಹೋದ ನಾಗರಿಕರು ಸದರಿ ಉದ್ಯಾನವನದ ಕಬಳಿಕೆಯ ಹುನ್ನಾರ, ಮೇಲಿನ ಸಂಘದ ಕಾನೂನುಬಾಹಿರ ದಂಧೆ ಎಲ್ಲವನ್ನೂ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರೂ ಯಾರೂ ಕಿಮಕ್ಕೆನ್ನಲಿಲ್ಲ. ತಮಗೂ ಅದಕ್ಕೂ ಸಂಬಂಧವೇ ಇಲ್ಲವೆಂಬಂತೆ ಆಫೀಸಿನಲ್ಲಿಯೇ ನಿದ್ರಿಸತೊಡಗಿದರು. ಅನ್ಯ ಮಾರ್ಗವಿಲ್ಲದೇ ಅಂತಿಮವಾಗಿ ಸ್ಥಳೀಯ ನಾಗರಿಕರು ಬಿ.ಎಸ್.ಕುಮಾರಸ್ವಾಮಿ ಮತ್ತು ನಿವೃತ್ತ ಐಪಿಎಸ್ ಅಧಿಕಾರಿ ಮತ್ತು ಮಾಜಿ ಸಂಸದ ಪಿ.ಕೋದಂಡರಾಮಯ್ಯ ಅವರ ನೇತೃತ್ವದಲ್ಲಿ ನ್ಯಾಯಾಲಯದ ಮೆಟ್ಟಿಲೇರಿದರು. ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯವರಾದ ಪಿ.ಡಿ.ದಿನಕರನ್ ಅವರ ಮುಂದೆಯೇ ಈ ಕೇಸು ಬಂತು. ದಿನಕರನ್ ಅವರು ಕಳೆದ ನವೆಂಬರ್ 24 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಆದೇಶ ಕೊಟ್ಟರು; ಸಾರ್ವಜನಿಕ ಉಪಯೋಗಕ್ಕಾಗಿ ಇರುವ ಸರ್ಕಾರಿ ಉದ್ಯಾನವನದಲ್ಲಿ ಅಕ್ರಮವಾಗಿ ಕಟ್ಟಡಗಳನ್ನು, ಗುಡಿಗುಂಡಾರಗಳನ್ನು ಕಟ್ಟುತ್ತಿರುವುದು, ಜೋರಾಗಿ ಮೈಕ್ ಹಾಕಿ ಸಾರ್ವಜನಿಕರ ನೆಮ್ಮದಿ ಹಾಳು ಮಾಡುತ್ತಿರುವುದು - ಎಲ್ಲವೂ ಕಾನೂನುಬಾಹಿರ ಎಂದು ಸ್ಪಷ್ಟವಾಗಿ ಹೇಳಿದರು. ಈ ಆದೇಶ ಬಂದ 30 ದಿನಗಳೊಳಗಾಗಿ ಮಹಾನಗರ ಪಾಲಿಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆದೇಶಿಸಿದರು.

ಈ ಆದೇಶ ಬಂದ ಮೇಲೂ ಮಹಾನಗರ ಪಾಲಿಕೆಯ ಅಧಿಕಾರಿಗಳು ನಿದ್ರೆಯಿಂದೇಳಲಿಲ್ಲ. ಕೊನೆಗೆ ಅರ್ಜಿದಾರರೇ ಮಹಾನಗರ ಪಾಲಿಕೆಗೆ ಪತ್ರ ಬರೆದು ನ್ಯಾಯಾಲಯದ ಆದೇಶವನ್ನು ಪಾಲಿಸದಿದ್ದರೆ 'ನ್ಯಾಯಾಂಗ ನಿಂದನೆ' ಮೊಕದ್ದಮೆ ಹೂಡುವುದಾಗಿ ಬೆದರಿಸಿದ ಮೇಲಷ್ಟೇ ಕಣ್ಣು ತೆರೆದರು. ಅಷ್ಟರಲ್ಲಾಗಲೇ ಬೆಂಗಳೂರು ಮಹಾನಗರ ಪಾಲಿಕೆಗೆ ಸಾಪೇಕ್ಷವಾಗಿ ದಕ್ಷರೆನಿಸಿಕೊಂಡಿರುವ ಭರತ್‌ಲಾಲ್ ಮೀನಾ ಕಮೀಷನರ್ ಆಗಿ ಬಂದರು. ಮೊನ್ನೆ ಜುಲೈ ತಿಂಗಳಲ್ಲಿ ನ್ಯಾಯಾಲಯದ ಆದೇಶವನ್ನು ಕೂಡಲೇ ಪಾಲಿಸಬೇಕೆಂದು ತಮ್ಮ ಪಾಲಿಕೆಯ ತೋಟಗಾರಿಕಾ ವಿಭಾಗದ ಅಧಿಕಾರಿಗಳಿಗೆ ತಾಕೀತು ಮಾಡಿದರು. ತೋಟಗಾರಿಕಾ ವಿಭಾಗದ ಜಂಟಿ ನಿರ್ದೇಶಕರಾದ ನಾರಾಯಣಸ್ವಾಮಿಯವರು ಕೂಡಲೇ ದಕ್ಷಿಣ ವಲಯದ ತೋಟಗಾರಿಕಾ ವಿಭಾಗದ ಅಧೀಕ್ಷಕರಾದ ದೊಡ್ಡ ಕೆಂಡೇಗೌಡರಿಗೆ ಸದರಿ ಜಾಗವನ್ನು ಒಂದು ಪರಿಪೂರ್ಣ ಪಾರ್ಕ್ ಆಗಿ ರೂಪುಗೊಳಿಸುವಂತೆ ಆದೇಶಿಸಿದರು.

ಕೆಂಡೇಗೌಡ ಎಂಬ ಕಿರಾತಕ


ಈ ಕೆಂಡೇಗೌಡ ಎಂಥ ಚಾಲಾಕಿ ಎಂದರೆ ವಾಸ್ತವದಲ್ಲಿ ಆತನಿಗೆ ಜೆ.ಪಿ.ನಗರದ ಈ ಪಾರ್ಕ್‌ನಿಂದ ದೇವಸ್ಥಾನಗಳನ್ನು ಎತ್ತಂಗಡಿ ಮಾಡುವುದಕ್ಕೆ, ಅದನ್ನು ಒಂದು ಪೂರ್ಣ ಪ್ರಮಾಣದ ಸಾರ್ವಜನಿಕ ಉದ್ಯಾನವನವನ್ನಾಗಿ ಪರಿವರ್ತಿಸುವುದಕ್ಕೆ ಎಳ್ಳಷ್ಟೂ ಇಷ್ಟವಿಲ್ಲ. ಇನ್ನೊಂದೆಡೆಗೆ ನ್ಯಾಯಾಲಯದ ಮತ್ತು ತನ್ನ ಉನ್ನತ ಅಧಿಕಾರಿಗಳ ಆದೇಶವನ್ನು ಪಾಲಿಸದೇ ಬೇರೆ ಮಾರ್ಗವೂ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಆತ ತನ್ನ ಚಾಲಾಕಿ ಬುದ್ಧಿ ತೋರಿಸಿದ್ದಾನೆ. ನ್ಯಾಯಾಲಯದ ಆದೇಶ ಪಾಲಿಸಿದಂತೆಯೂ ಆಗಬೇಕು, ಜೊತೆಗೆ ದೇವಸ್ಥಾನವನ್ನು ಉಳಿಸಿಕೊಂಡಂತೆಯೂ ಆಗಬೇಕು ಎಂಬ ರೀತಿಯಲ್ಲಿ ಪಾರ್ಕ್ ಅಭಿವೃದ್ಧಿಯ ನಕಾಶೆಯನ್ನು ರೂಪಿಸಿದ್ದಾನೆ. ಅದರಲ್ಲಿ ಪ್ರಸ್ತುತವಾಗಿ ದೇವಸ್ಥಾನವಿರುವ ಜಾಗವನ್ನು ಹೊರಗಿಟ್ಟು ಉಳಿದ ಜಾಗದಲ್ಲಿ ಪಾತ್‌ವೇ, ಲ್ಯಾಂಡ್‌ಸ್ಕೇಪ್‌ಗಳು ಬರುವಂತೆ ನಕಾಶೆ ರೂಪಿಸಿದ್ದಾನೆ. ಸಾರಾಂಶದಲ್ಲಿ ಕೋಟ್ಯಂತರ ಬೆಲೆಬಾಳುವ ಹಾಗೂ ಸಮಾಜದ ಎಲ್ಲಾ ಜಾತಿ, ಸಮುದಾಯ, ಧರ್ಮಗಳ ಜನರಿಗೆ ಸೇರಬೇಕಾಗಿರುವ ಪಾರ್ಕ್‌ನ ಈ ವಿಸ್ತಾರ ಜಾಗವನ್ನು ಒಂದು ಜಾತಿಯ ಗುಂಪಿನ ಮಡಿಲಿಗೆ ಹಾಕುವ ಹುನ್ನಾರ ನಡೆಸಿದ್ದಾನೆ.

ಇದು ನ್ಯಾಯಾಲಯದ ನಿಂದನೆಯಲ್ಲದೇ ಮತ್ತೇನೂ ಅಲ್ಲ. ಮಾತ್ರವಲ್ಲ, ನಮ್ಮ ಜಾತ್ಯತೀತ ಸಂವಿಧಾನಕ್ಕೆ ಎಸಗಿರುವ ಅಪಚಾರವೂ ಹೌದು. ಸಾರ್ವಜನಿಕ ಜಾಗಗಳು ಯಾವುದೇ ಒಂದು ಜಾತಿಗೆ, ಧರ್ಮಕ್ಕೆ, ಸಮುದಾಯಕ್ಕೆ ಸೀಮಿತವಾಗಿರುವಂಥವುಗಳಲ್ಲ. ಆದರೆ, ಬೆಂಗಳೂರಿನ ಪಾರ್ಕ್‌ಗಳಲ್ಲಿ ದೇವಸ್ಥಾನಗಳನ್ನು ನಿರ್ಮಿಸುವ ಪರಿಪಾಠ ಬೆಳೆದು ನಿಧಾನವಾಗಿ ಅವುಗಳನ್ನು ಕೇವಲ ಒಂದು ಧರ್ಮದ ಸೊತ್ತುಗಳನ್ನಾಗಿ ಮಾಡಿಕೊಳ್ಳುವ ಹುನ್ನಾರ ನಡೆದಿದೆ. ನಮ್ಮದು ಎಂಥ ಜಾತ್ಯತೀತ-ಧರ್ಮನಿರಪೇಕ್ಷ ರಾಷ್ಟ್ರ ಎಂದರೆ ಒಂದು ಕೋಮಿನಿಂದ ಇಂಥ ಅಕ್ರಮಗಳು ನಡೆಯುತ್ತಿದ್ದರೂ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಅದೇ ಪಾರ್ಕಿನಲ್ಲಿ ಯಾರಾದರೂ ಮಸೀದಿ ಕಟ್ಟಿದ್ದರೆ ಅಥವಾ ಚರ್ಚನ್ನು ನಿರ್ಮಿಸಿದ್ದರೆ ಇವರೆಲ್ಲಾ ಸುಮ್ಮನಿರುತ್ತಿದ್ದರೆ? ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಪಿ.ಡಿ.ದಿನಕರನ್ ಅವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಈ ಅಕ್ರಮದ ವಿರುದ್ಧ ತೀರ್ಪು ನೀಡಿದ್ದರೂ ಅದನ್ನು ಪಾಲಿಸುವುದಿಲ್ಲ ಎಂದರೆ ಭ್ರಷ್ಟ ಅಧಿಕಾರಿಗಳಿಗೆ ಇನ್ನೆಷ್ಟು ಕೊಬ್ಬು ಹೆಚ್ಚಿರಬೇಕು ನೀವೇ ಊಹಿಸಿ.

● ವರದಿಗಾರ

ಮಾಟ ಮಾಡಿಸಿದ್ದಾರೆಂದು, ಲಾಟರಿ ಹೊಡೆಸುತ್ತೇನೆಂದು; ಪೂಜೆಗೆ ಚಿನ್ನಾಭರಣಗಳನ್ನು ಪಡೆದು ಒಡವೆಗಳ ಬದಲಿಗೆ ಕಲ್ಲು ಇಟ್ಟು ಲಪಟಾಯಿಸುವ ಕಪಟ ಜ್ಯೋತಿಷಿಗಳು, ಮಾಂತ್ರಿಕರು ಇತ್ಯಾದಿ ವಂಚಕರನ್ನು ಪೊಲೀಸ್ ಭಾಷೆಯಲ್ಲಿ ಫೋರ್ ಟ್ವೆಂಟಿ ಅಥವಾ ಚಾರ್ ಸೋ ಬೀಸ್ ಎನ್ನುತ್ತಾರೆ. ಈ ಪ್ರಕಾರವೇ ಹೇಳುವುದಾದರೆ ಬಿಜೆಪಿ ಸರ್ಕಾರದ ಮಾನ್ಯ ಸಮಾಜ ಕಲ್ಯಾಣ ಮಂತ್ರಿ ಸುಧಾಕರ್ ಓರ್ವ ಫೋರ್ ಟ್ವೆಂಟಿ ಅಥವಾ ಚಾರ್‌ಸೋ ಬೀಸ್!

ಡಿ. ಸುಧಾಕರ್ ಮಿನಿಸ್ಟರ್ 420!



ಭಾರತೀಯ ದಂಡ ಸಂಹಿತೆ ಅಂದರೆ ಇಂಡಿಯನ್ ಪೀನಲ್ ಕೋಡ್‌ನ ಸೆಕ್ಷನ್ 420 ಎಂದರೆ ವಂಚನೆ. ಯಾರದೋ ಸಹಿಯನ್ನು ಫೋರ್ಜರಿ ಮಾಡಿ ಹಣ ಲಪಟಾಯಿಸುವುದು, ಸೈಟು ಕೊಡುತ್ತೇನೆಂದು ಹಣ ಪಡೆದು ಕೈ ಎತ್ತುವುದು, ನಕಲಿ ದಾಖಲೆಗಳನ್ನು ಸೃಷ್ಟಿಸಿ ಬ್ಯಾಂಕ್‌ನಿಂದ ಸಾಲ ಪಡೆಯುವುದು, ಯಾರದೋ ಜಮೀನನ್ನು ತೋರಿಸಿ ಹಣ ಪಡೆದು ಪರಾರಿಯಾಗುವುದು, ಅಗ್ಗದ ದರಕ್ಕೆ ಟೀವಿ ಕೊಡುತ್ತೇನೆಂದು ನೂರಾರು ಜನರಿಂದ ಹಣ ಸಂಗ್ರಹಿಸಿ ಮುಂಡಾಯಿಸುವುದು, ನಿಧಿ ತೋರಿಸುತ್ತೇನೆಂದು, ಮಾಟ ಮಾಡಿಸಿದ್ದಾರೆಂದು, ಲಾಟರಿ ಹೊಡೆಸುತ್ತೇನೆಂದು; ಪೂಜೆಗೆ ಚಿನ್ನಾಭರಣಗಳನ್ನು ಪಡೆದು ಒಡವೆಗಳ ಬದಲಿಗೆ ಕಲ್ಲು ಇಟ್ಟು ಲಪಟಾಯಿಸುವ ಕಪಟ ಜ್ಯೋತಿಷಿಗಳು, ಮಾಂತ್ರಿಕರು, ಇತ್ಯಾದಿ ವಂಚಕರನ್ನು ಪೊಲೀಸ್ ಭಾಷೆಯಲ್ಲಿ ಫೋರ್ ಟ್ವೆಂಟ ಅಥವಾ ಚಾರ್ ಸೋ ಬೀಸ್ ಎನ್ನುತ್ತಾರೆ.

ಈ ಪ್ರಕಾರವೇ ಹೇಳುವುದಾದರೆ ಬಿಜೆಪಿ ಸರ್ಕಾರದ ಮಾನ್ಯ ಸಮಾಜ ಕಲ್ಯಾಣ ಮಂತ್ರಿ ಸುಧಾಕರ್ ಓರ್ವ ಫೋರ್ ಟ್ವೆಂಟ ಅಥವಾ ಚಾರ್‌ಸೋ ಬೀಸ್!

ದಿನಾಂಕ 1.2.2008 ರಂದು ಬೆಂಗಳೂರಿನ ವಿಶೇಷ ಸಿಬಿಐ ನ್ಯಾಯಾಲಯಕ್ಕೆ ಸಿಬಿಐನ Bank securities and fraud cell ನ ಎಸ್.ಪಿ. ಹಿತೇಂದ್ರರು ಸಲ್ಲಿಸಿದ ಎಫ್.ಐ.ಆರ್ ಅಂದರೆ ಪ್ರಥಮ ವರ್ತಮಾನ ವರದಿಯ ಪ್ರಕಾರ ಸಮಾಜ ಕಲ್ಯಾಣ ಮಂತ್ರಿ ಸುಧಾಕರ್ ಓರ್ವ ವಂಚಕ ಮತ್ತು ಅಪರಾಧಿ!

ಗಾಂಧಿನಗರದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಗೆ ಮಂತ್ರಿ ಸುಧಾಕರ್ ಒಟ್ಟು ಏಳು ಕೋಟಿ ರೂಪಾಯಿಗಳನ್ನು ವಂಚಿಸಿದ್ದಾರೆಂದು ಎಫ್‌ಐಆರ್ ಮಾತ್ರವೇ ಅಲ್ಲ; ಮೊನ್ನೆ ಅಂದರೆ 2009 ರ ಆಗಸ್ಟ್ 10 ರಂದು ಚಾರ್ಜ್‌ಷೀಟ್ ಕೂಡ ಸಿಬಿಐ ಸಲ್ಲಿಸಿದೆ.

ಸಿಬಿಐ ಆರೋಪ ಪಟ್ಟಿ

ಸಿಬಿಐ ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ಗಾಂಧಿನಗರದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಆಗ ಚೀಫ್ ಮ್ಯಾನೇಜರ್ ಆಗಿದ್ದ ಎಂ.ಟಿ.ವಿ. ರೆಡ್ಡಿ ಎಂಬಾತ ಮೊದಲ (A1) ಆರೋಪಿಯಾದರೆ ಮಂತ್ರಿ ಸುಧಾಕರ್ (A2) ಎರಡನೇ ಆರೋಪಿ. ಸುಧಾಕರ್ ಸಂಬಂಧಿ ವಿ.ಎಸ್. ಅಜಿತ್ ಪ್ರಸಾದ್ ಜೈನ್, ಗೌರಿಬಿದನೂರಿನ ವಂಚಕ ಕೆ.ವಿ. ಹನುಮಪ್ಪ ರೆಡ್ಡಿ, ಮಂಗಳೂರಿನ ಜಿ.ಎಂ. ರಮೇಶ್ ಮುಂತಾದವರು ಕ್ರಮವಾಗಿ ಮೂರು, ನಾಲ್ಕು ಮತ್ತು ಐದನೇ ಆರೋಪಿಗಳು.

ಸಿಬಿಐನ ಆರೋಪ ಪಟ್ಟಿ RC.1/E/2008-BSFC/BLR ರ ಪ್ರಕಾರ ಐಪಿಸಿ ಸೆಕ್ಷನ್ನುಗಳಾದ 120B-r/w 409, 419, 420, 467 ಮತ್ತು 471 ಮಾತ್ರವಲ್ಲದೇ ಭ್ರಷ್ಟಾಚಾರ ನಿಷೇಧ ಕಾಯ್ದೆ 1988 ರ ಸೆಕ್ಷನ್ 13(2) 13 (1) (d) ಇತ್ಯಾದಿ ಎಂಟಕ್ಕೂ ಅಧಿಕ ಅಪರಾಧಗಳಲ್ಲಿ ಮಂತ್ರಿ ಸುಧಾಕರ್ ರೆಡ್‌ಹ್ಯಾಂಡ್ ಸಿಕ್ಕಿಬಿದ್ದಿದ್ದಾರೆ.

ಇವೆಲ್ಲವೂ ಸುಳ್ಳು, ಮೋಸ, ವಂಚನೆ, ಫೋರ್ಜರಿ, ಲಂಚ, ಬೋಗಸ್ ದಾಖಲೆ ಸೃಷ್ಟಿ, ಸಾರ್ವಜನಿಕ ಸೊತ್ತಿನ ದುರ್ಬಳಕೆ, ಕೋಟಿಗಟ್ಟಲೇ ಹಣವನ್ನು ಮುಂಡಾಯಿಸಿದ್ದು, ಬ್ಯಾಂಕ್ ವಂಚನೆ ಇತ್ಯಾದಿ ಕುಕೃತ್ಯಗಳಿಗೆ ಬಳಕೆಯಾಗುವ ಸೆಕ್ಷನ್ನುಗಳು. ಕರೀಮ್ ಲಾಲಾತೆಲಗಿ, ಹರ್ಷದ್ ಮೆಹ್ತಾ, ವಿನಿವಿಂಕ್ ಶಾಸ್ತ್ರಿ ಇತ್ಯಾದಿ ಯಾರೆಲ್ಲ ಫೋರ್ಜರಿ ಖದೀಮರನ್ನು ಜೈಲಿಗೆ ದಬ್ಬಲು ಪೊಲೀಸರು ಮೇಲ್ಮಂಡ ಐಪಿಸಿ ಸೆಕ್ಷನ್ನುಗಳನ್ನು ಬಳಸುತ್ತಾರೋ ಅಂಥ ಎಲ್ಲಾ ಸೆಕ್ಷನ್ನುಗಳೂ ಮಂತ್ರಿ ಸುಧಾಕರ್ ವಿರುದ್ಧದ ಆರೋಪ ಪಟ್ಟಿಯಲ್ಲಿ ಕಂಗೊಳಿಸುತ್ತಿವೆ.

ಏಳು ಕೋಟಿ ಸಣ್ಣ ಮೊತ್ತವೇನಲ್ಲ, ಸಿಬಿಐ ಸಲ್ಲಿಸಿದ ಆರೋಪ ಪಟ್ಟಿಯ ವಿವರಗಳೇ ಸಾಕು, ಮಂತ್ರಿ ಸುಧಾಕರ್ ಎಂಥಾ ವಂಚಕ ಎಂಬುದಕ್ಕೆ. ಇಡೀ ವಂಚಕ ಪುರಾಣ ಸಂಭವಿಸಿದ್ದು 2003 ರ ಆಗಸ್ಟ್‌ನಿಂದ 2008 ರ ಜನವರಿ ತಿಂಗಳ ಮಧ್ಯೆ. ಆ ಹೊತ್ತಿಗೆ ಬೆಂಗಳೂರಿನ ಗಾಂಧಿನಗರದ ನಾಲ್ಕನೇ ಕ್ರಾಸಿನಲ್ಲಿ ಬಿಲ್ಡಿಂಗ್ ಒಂದನ್ನು ಬಾಡಿಗೆಗೆ ಪಡೆದ ಸುಧಾಕರ್ ಅದಕ್ಕೆ ಎರಡು ಬೋರ್ಡುಗಳನ್ನು ತಗುಲು ಹಾಕಿದ್ದ, ಒಂದು-ಮೇ. ತ್ರಿಶೂಲ್ ಎಂಟರ್‌ಪ್ರೈಸಸ್ ಎಂದಾದರೆ ಮತ್ತೊಂದು ಮೇ. ಸೆವೆನ್ ಹಿಲ್ಸ್ ಪ್ರಾಪರ್ಟೀಸ್ ಪ್ರೈ.ಲಿ. ಎಂದಿತ್ತು. ಇವೆರಡೂ ಮಂತ್ರಿ ಸುಧಾಕರ್ ಹುಟ್ಟು ಹಾಕಿದ ಭೋಗಸ್ ಕಂಪೆನಿಗಳೆ.

ಎಂ.ಟಿ.ವಿ. ರೆಡ್ಡಿ!

ಜೊತೆಗೆ ಸೆವೆನ್ ಹಿಲ್ಸ್ ಡಿಸ್ಟಿಲ್ಲರೀಸ್ ಪ್ರೈವೇಟ್ ಲಿಮಿಟೆಡ್ ಎಂಬ ಮಗದೊಂದು ಕಂಪೆನಿಯನ್ನೂ ಸೃಷ್ಟಿಸಿದ ಸುಧಾಕರ್ ಇದಕ್ಕೆ ಪಾಲುದಾರರನ್ನಾಗಿ ತನ್ನ ಸಂಬಂಧಿ ಚಿತ್ರದುರ್ಗದ ವಿ.ಎಸ್. ಅಜಿತ್‌ಪ್ರಸಾದ್ ಜೈನ್, ಗೌರಿಬಿದನೂರಿನ ಕೆ.ವಿ. ಹನುಮಪ್ಪ ಮತ್ತು ಮಂಗಳೂರಿನ ಇನ್ನೊಬ್ಬ ಸಂಬಂಧಿ ಜಿ.ಎಂ. ರಮೇಶ್ ಎಂಬುವವರನ್ನು ನಾಮಕಾವಸ್ತೆಗೆ ಹಾಕಿಕೊಂಡ.

ಹೀಗೆ ಸೃಷ್ಟಿಯಾದ ನಕಲಿ ರಿಯಲ್ ಎಸ್ಟೇಟ್ ಕಂಪೆನಿಗಳ ಮೂಲಕ ಬೆಂಗಳೂರಿನ ಎಚ್.ಎ.ಎಲ್., ರೈಲ್ವೇ, ಬಿಎಂಟಿಸಿ, ಕೆಎಸ್ಸಾರ್ಟಿಸಿ, ಬಿಎಸ್‌ಎನ್‌ಎಲ್ ಇತ್ಯಾದಿ ಸರ್ಕಾರಿ ಉದ್ದಿಮೆಗಳ ನೌಕರರಿಗೆ ನಿವೇಶನ ಕೊಡುತ್ತೇನೆಂದು ಕಳ್ಳ ದಾಖಲೆಗಳನ್ನು ಸೃಷ್ಟಿಸಿ ಕೋಟಿಗಟ್ಟಲೇ ದೋಚುವುದು ಸುಧಾಕರ್ ಉದ್ದೇಶವಾಗಿತ್ತು. ಇಂಥ ದೋಖೇಬಾಜಿಗೆ ಕೈಜೋಡಿಸಿದವನು ಗಾಂಧಿನಗರದ ಸ್ಟೇಟ್ ಬ್ಯಾಂಕ್ ಮೈಸೂರಿನ ಚೀಫ್ ಮ್ಯಾನೇಜರ್ ಎಂ.ಟಿ.ವಿ. ರೆಡ್ಡಿ-

ಇದಕ್ಕೆ ಸುಧಾಕರ್ ನೆಲಮಂಗಲ ಸಮೀಪದ ಅಬ್ಬಿಗೆರೆಯ ಸಿಂಗಾಪುರದ ವಿವಾದಿತ ಜಮೀನೊಂದರ ನಕಲಿ ದಾಖಲೆಗಳನ್ನು ಸೃಷ್ಟಿಸಿದ. ಅಲ್ಲಿ ಸೌಂದರ್ಯನಗರ ಎಂಬ ಮುನ್ನೂರು ಸೈಟುಗಳ ಲೇಔಟ್‌ಗೆ ಬಿಎಂಆರ್‌ಡಿಎ ಪರವಾನಗಿ ಕೊಟ್ಟಿದೆಯೆಂದೂ ಲೇಔಟಿನ ನಕ್ಷೆಗೆ ಮಂಜೂರಾತಿ ಕೂಡ ಸಿಕ್ಕಿದೆಯೆಂದೂ ಸುಧಾಕರ್ ಭೋಗಸ್ ದಾಖಲೆಗಳನ್ನು ಸೃಷ್ಟಿಸಿದ. ಇದಕ್ಕಿಂತಲೂ ದೊಡ್ಡ ವಂಚನೆಯೆಂದರೆ ತಮ್ಮ ಮನೆ ಕೆಲಸದವರು, ಸಂಬಂಧಿಗಳು, ಪರಿಚಿತರ ಫೋಟೋಗಳನ್ನೆಲ್ಲ ಸಂಗ್ರಹಿಸಿ ಅವರೆಲ್ಲ ಕೆಎಸ್ಸಾರ್ಟಿಸಿ, ಬಿಟಿಎಸ್, ರೈಲ್ವೇ, ಎಚ್‌ಎಎಲ್ ಇತ್ಯಾದಿ ಸರ್ಕಾರಿ ಸಂಸ್ಥೆಗಳ ನೌಕರರೆಂಬಂತೆ ಕಳ್ಳ ಗುರುತು ಪತ್ರ, ಸುಳ್ಳು ಸಂಬಳ ರಶೀದಿ, ನಕಲಿ ಪ್ರಮಾಣ ಪತ್ರಗಳನ್ನು ಸೃಷ್ಟಿಸಿದ್ದು!



13 ಕೋಟಿಯ ಆಕ್ಸಿಸ್ ಬ್ಯಾಂಕ್ ದೋಖಾ?

ಸ್ವಂತ ಚಿಕ್ಕಪ್ಪನ ಆಸ್ತಿಗೇ ಕಂಟಕನಾದ


ಬ್ಯಾಂಕ್‌ಗೆ ಟೋಪಿ ಹಾಕಿದ ಮಂತ್ರಿ ಸುಧಾಕರ್ ವಂಚನೆ ಒತ್ತಟ್ಟಿಗಿರಲಿ, ತನ್ನ ಸಂಬಂಧಿಗಳನ್ನೇ ಮುಂಡಾಯಿಸಿ ಬೀದಿಪಾಲು ಮಾಡಿದ್ದಕ್ಕೆ ಏನೆನ್ನಬೇಕು?

ಅದು 13 ಕೋಟಿಯ ಆಕ್ಸಿಸ್ ಬ್ಯಾಂಕ್ ವಂಚನೆ ಪ್ರಕರಣವಷ್ಟೇ ಅಲ್ಲ, ತನ್ನ ಚಿಕ್ಕಪ್ಪನ ಮನೆಗೇ ಸುಧಾಕರ್ ಕನ್ನ ಹಾಕಿದ ದುರುಳ ಕೂಡ. ಬೆಂಗಳೂರಿನಲ್ಲಿ ತಾನು ರಿಯಲ್ ಎಸ್ಟೇಟ್ ದಂಧೆ ನಡೆಸುತ್ತೇನೆಂದು ಏಳು ಕೋಟಿ ಸಾಲ ಎತ್ತಿದಂತೆ ಮಂಗಳೂರಿನ ಆಕ್ಸಿಸ್ ಬ್ಯಾಂಕಿನಿಂದ ಸುಧಾಕರ್ ಮತ್ತೆ 13 ಕೋಟಿಯಷ್ಟು ಸಾಲ ಎತ್ತಿದ್ದಾನೆ. ಅದೂ ಮೈನಿಂಗ್ ದಂಧೆಯ ಹೆಸರಲ್ಲಿ.

ಅದಕ್ಕೆಂದು ಅಮ್ಮ ಭಗವಾನ್ ಟ್ರೇಡರ್ಸ್ ಎಂಬ ಮತ್ತೊಂದು ನಕಲಿ ಕಂಪೆನಿಯನ್ನು ತನ್ನ ಪತ್ನಿ ಹರ್ಷಿಣಿ ಸುಧಾಕರ್ ಪಾರ್ಟನರ್‌ಶಿಪ್ಪಿನಲ್ಲಿ ಸುಧಾಕರ್ ಹುಟ್ಟುಹಾಕಿದ್ದಾನೆ. ಇದು ಬಳ್ಳಾರಿಯಲ್ಲಿ ದೋಚಿದ ಕಬ್ಬಿಣದ ಅದಿರನ್ನು ರಫ್ತು ಮಾಡುವ ಸಂಸ್ಥೆಯಂತೆ. ಯಾರದೋ ಅದಿರು ಗೋಡೌನನ್ನು ತೋರಿಸಿದ ಸುಧಾಕರ್ 2008 ರ ಜನವರಿ 28 ರಂದು ಮಂಗಳೂರಿನ ಆಕ್ಸಿಸ್ ಬ್ಯಾಂಕಿನಿಂದ ಮೊದಲ ಕಂತಾಗಿ 10 ಕೋಟಿಯ ಸಾಲ ಪಡೆದಿದ್ದಾನೆ. ಇದಾಗಿ ಹದಿನೇಳನೇ ದಿನಕ್ಕೆ ಅಂದರೆ 2008 ರ ಫೆಬ್ರವರಿ 15 ರಂದು ಮತ್ತೆ 3 ಕೋಟಿಯ ಸಾಲವನ್ನು ಅದೇ ಆಕ್ಸಿಸ್ ಬ್ಯಾಂಕಿನಿಂದ ಪಡೆಯುತ್ತಾನೆ.

ಹೀಗೆ ಎತ್ತಿದ 13 ಕೋಟಿಯ ಸಾಲಕ್ಕೆ ಗ್ಯಾರಂಟಿಯಾಗಿ ಸುಧಾಕರ್ ಕೊಟ್ಟಿದ್ದು ತನ್ನ ಚಿಕ್ಕಪ್ಪ ಜಯಣ್ಣನ ಆಸ್ತಿಯನ್ನು. ದಿವಂಗತ ಜಯಣ್ಣ ಈ ಹಿಂದೆ ಒಂದಲ್ಲ ಎರಡು ಬಾರಿ ಚಳ್ಳಕೆರೆಗೆ ಶಾಸಕರಾಗಿದ್ದವರು. ಶಾಸಕರಾಗಿದ್ದಾಗ ಅವರು ಮಾಡಿದ ಸಾಧನೆ, ಕಾಂಟ್ಯಾಕ್ಟುಗಳನ್ನೇ ಬಳಸಿಕೊಂಡು ಚಳ್ಳಕೆರೆಗೆ ಎಮ್ಮೆಲ್ಲೆಯಾದವನು ಸುಧಾಕರ್. ಚಿಕ್ಕಪ್ಪನ ಋಣವನ್ನು ಸುಧಾಕರ್ ಇಷ್ಟೊಂದು ದಾರುಣವಾಗಿ ತೀರಿಸುತ್ತಾನೆಂದು ನಿರೀಕ್ಷೆಯಾದರೂ ಯಾರಿಗಿತ್ತು?

ಏನೋ ಮಗನ ಸಮಾನ ಎಂದು ಮರುಗಿದ ಜಯಣ್ಣನವರ ಪತ್ನಿ ಸುಲೋಚನಮ್ಮ ಪತಿ ಜಯಣ್ಣನವರು ಸಂಪಾದಿಸಿದ್ದ ಚಿತ್ರದುರ್ಗದ ನಾಲ್ಕೆಕರೆಯ ಸೈಟು, ಚಳ್ಳಕೆರೆಯ ಮೂರೆಕರೆಯ ಎಣ್ಣೆ ಗಿರಣಿ ಮತ್ತು ಸ್ವಂತ ಮನೆಯನ್ನು ಪೂರ್ತಿಯಾಗಿ ಮಂಗಳೂರಿನ ಆಕ್ಸಿಸ್ ಬ್ಯಾಂಕಿಗೆ ಅಡವಿಟ್ಟಿದ್ದಾರೆ. ಅದರ ಆಧಾರದ ಮೇಲೆಯೇ 13 ಕೋಟಿ ಜೇಬಿಗಿಳಿಸಿದ ಸುಧಾಕರ್ ಚೀನಾ ದೇಶಕ್ಕೆ ತಾನು ಅದಿರು ಕಳಿಸಿದ್ದೇನೆಂದೂ ಅದರ ದುಡ್ಡಿನ್ನೂ ಬರಬೇಕಿದೆಯೆಂದೂ ಆವತ್ತಿನಿಂದಲೂ ಸರ್ಕಸ್ ಮಾಡುತ್ತಿದ್ದಾನೆಯೇ ಹೊರತು ಈ ತನಕ ಬ್ಯಾಂಕ್ ಸಾಲ ಕಟ್ಟಿಲ್ಲ.



ಅಸಲಿಗೆ ಅಮ್ಮ ಭಗವಾನ್ ಟ್ರೇಡರ್ಸ್ ಮೈನಿಂಗ್ ದಂಧೆಯಲ್ಲೇ ಇರಲಿಲ್ಲ, ನಕಲಿ ಎಲ್.ಸಿ.ಗಳನ್ನು ಸೃಷ್ಟಿಸಿ ಆಕ್ಸಿಸ್ ಬ್ಯಾಂಕಿಗೆ ಯಾಮಾರಿಸಿ ಸಾಲ ಪಡೆದ ಸುಧಾಕರ್ ಅಷ್ಟೂ ದುಡ್ಡನ್ನು ಏನು ಮಾಡಿದ? ಎಲ್ಲಿಗೆ ಹಾಕಿದ? ಹೇಗೆ ತೀರಿಸುತ್ತಾನೆಂಬುದು ಆ ಭಗವಂತನಿಗೂ ಗೊತ್ತಿಲ್ಲ, ಸದ್ಯ ಆಕ್ಸಿಸ್ ಬ್ಯಾಂಕ್ ಮುಗುಮ್ಮಾಗಿದೆ. ಏಕೆಂದರೆ ಗ್ಯಾರಂಟಿಯಾಗಿ ಕೊಟ್ಟ ಚಿಕ್ಕಪ್ಪನ ಆಸ್ತಿಯಿದೆಯಲ್ಲ?

ಕರ್ಮವೆಂದರೆ ಸುಧಾಕರ್ ಚಿಕ್ಕಮ್ಮ ಈಗ ಎದೆಬಡಿದುಕೊಳ್ಳುತ್ತಿದ್ದಾರೆ. ಸುಧಾಕರ್‌ಗೆ ನೆರವಾಗಲು ಹೋಗಿ ಅಡವಿಟ್ಟ ಆಸ್ತಿಯ ಜಪ್ತಿಗಾಗಿ ಬ್ಯಾಂಕ್ ನೋಟೀಸು ಕೊಡುತ್ತಲೇ ಇದೆ. ಮಾಜಿ ಶಾಸಕ ಜಯಣ್ಣನವರ ಮೂರು ಮಕ್ಕಳ ಪೈಕಿ ಹಿರಿಯನಾದ ನಿರ್ಮಲ್‌ಕುಮಾರ್‌ಗೆ ನೆಟ್ಟಗೊಂದು ಉದ್ಯೋಗವಿಲ್ಲ, ಎರಡನೇ ಮಗ ವೆಂಕಟೇಶ್ ಎಣ್ಣೆ ಮಿಲ್ಲಿನಲ್ಲಿ ಲೆಕ್ಕ ಬರೆದು ಹೊಟ್ಟೆ ಹೊರೆದರೆ ಕೊನೇ ಮಗ ದಿನೇಶ್ ಇವತ್ತಿಗೂ ನಿರುದ್ಯೋಗಿ.

ತನ್ನ ಚಿಕ್ಕಪ್ಪನ ಮಕ್ಕಳಿಗೊಂದು ಕೆಲಸವನ್ನೂ ಕೊಡಿಸಲಾಗದ, ಅವರ ಆಸ್ತಿಗೇ ಕಂಟಕ ತಂದಿಟ್ಟ, ಸಂಬಂಧಿಕರನ್ನೂ ಬಿಡದೇ ಮುಂಡಾಯಿಸಿದ ಸುಧಾಕರ್‌ನಂಥ ವಂಚಕನ ಕೈಗೆ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಿರಿ ಸಿಕ್ಕರೆ ಗತಿಯೇನು?

ಮಂತ್ರಿಗಿರಿಯ ಮರ್ಜಿಯಿಲ್ಲದ, ರಕ್ತ ಸಂಬಂಧದ ಹಂಗಿಲ್ಲದ ಮೋಸಗಾರ ಯಾವತ್ತಿದ್ದರೂ ಮೋಸಗಾರನೇ!

ಐದೂವರೆ ಕೋಟಿ

ಬದುಕೇ ಇಲ್ಲದ ವ್ಯಕ್ತಿಗಳ ಫೋಟೋ ಅಂಟಿಸಿ ...ವಕ್ಕೆ ಮೇಲಧಿಕಾರಿಗಳ ನಕಲಿ ಸೀಲು, ಸಹಿ ...ಲ್ಲವನ್ನೂ ಸುಧಾಕರ್ ಹಾಕಿದ. ಇಂಥ ಕಳ್ಳ ...ದಾಖಲೆಗಳ ಆಧಾರದ ಮೇಲೆ ಮೊದಲ ಕಂತಾಗಿ ...75 ಮಂದಿ ನಕಲಿ ನೌಕರರಿಗೆ ಮನೆ ಕಟ್ಟುವ ...ಸಾಲವೆಂದು ಒಟ್ಟು ಐದೂವರೆ ಕೋಟಿ

Central Bureau of Investigation
Bank Securities & Fraud Cell
No. 36, Bellary Road, IInd Floor
Ganganagar, Bangalore
(Phone :080-23534466, 080-23534455, Fax: 080-23534441)

Confidential
Speed Post

...No. DPSSB2008/00 /RTI Act/BS&FC/BLR Dt.: 20/08/2009

The names, addresses and present occupation of the accused persons are as follows:

i) Shri.M.T.V.Reddy(A-1),

Formerly Chief Manager, State Bank of Mysore, Specialised Personal Banking Branch, Gandhinagar, Bangalore-9(Dismissed from service on 22.8.08)
R/o.E-1/16, 1st Cross, Syndicate Bank Colony, J.P.Nagar, 7th Phase, Bangalore-560 078.


ii) Shri.D.Sudhakar(A-2),

Proprietor, M/s.Trishul Enterprises & Managing Director, M/s.Seven Hills Properties Pvt. Ltd. & M/s.Seven Hills Distilleries Pvt. Ltd.
R/o.Gommuta Nilaya, Bangalore Road, Challakere, Chitradurga District, Karnataka.

Yours faithfully
(R.Nithendra)
Superintendent of Police
CBI, BS&FC, Bangalore

...ರೂಪಾಯಿಗಳಷ್ಟು ಸಾಲವನ್ನು ಸ್ಟೇಟ್ ಬ್ಯಾಂಕ್ ...ಆಫ್ ಮೈಸೂರಿನ ಗಾಂಧಿನಗರ ಶಾಖೆಯ ಚೀಫ್ ...ಮ್ಯಾನೇಜರ್ ಎಂ.ಟಿ.ವಿ. ರೆಡ್ಡಿ ಮಂಜೂರು ...ಮಾಡುತ್ತಾನೆ. ಹೀಗೆ ಮಂಜೂರಾದ ಸಾಲವನ್ನು ...ಮ್ಯಾನೇಜರ್ ರೆಡ್ಡಿ ಮತ್ತು ಸುಧಾಕರ್ ಸೇರಿ ಮತ್ತೆ ...ರಿಯಲ್ ಎಸ್ಟೇಟಿಗೆ ಹಾಕುತ್ತಾರೆ.

ಇದಾಗಿ ಕೆಲ ದಿನಕ್ಕೇ ಒಂದೂವರೆ ಕೋಟಿ ...ರೂಪಾಯಿಗಳ ಎರಡನೇ ಕಂತಿನ ವಂಚನೆಗೆ ರೆಡ್ಡಿ ...ಮತ್ತು ಸುಧಾಕರ್ ತಂತ್ರ ರೂಪಿಸುತ್ತಾರೆ. ಈ ...ಬಾರಿ ಸುಧಾಕರ್ ಬಳಸಿದ್ದು ಸೆವೆನ್ ಹಿಲ್ಸ್ ...ಪ್ರಾಪರ್ಟೀಸ್ ಪ್ರೈ ಲಿ. ಎಂಬ ಎರಡನೇ ಭೋಗಸ್ ...ಕಂಪೆನಿಯನ್ನು. 27 ಮಂದಿ ಬಿಎಸ್‌ಎನ್‌ಎಲ್, ...ರೈಲ್ವೇ, ಫೋರ್‌ಮನ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನ ...ನೌಕರರಿಗೆ ಗೃಹನಿರ್ಮಾಣ ಸಾಲವೆಂದು ಸುಧಾಕರ್ ...ಅರ್ಜಿ ಸಲ್ಲಿಸುತ್ತಾರೆ. ಯಾರ್‍ಯಾರದೋ ಫೋಟೋ ...ಅಂಟಿಸಿ ನಕಲಿ ಗುರುತುಪತ್ರಗಳನ್ನು ಸೃಷ್ಟಿಸಿ,



...ರೈಲ್ವೇ, ಬಿಎಸ್ಸೆನೆಲ್ ಮತ್ತು ಫೋರ್‌ಮನ್ ...ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಅಧಿಕಾರಿಗಳ ಸಹಿ ...ಮತ್ತು ಲೆಟರ್‌ಹೆಡ್‌ನ ಫೋರ್ಜರಿ ಮಾಡಿದ ...ಸುಧಾಕರ್‌ಗೆ ಬ್ಯಾಂಕ್ ಮ್ಯಾನೇಜರ್ ರೆಡ್ಡಿ ಮತ್ತೆ ...ಒಂದೂವರೆ ಕೋಟಿಯ ಸಾಲ ಮಂಜೂರು ...ಮಾಡುತ್ತಾನೆ.

ಮೊದಲು ಐದೂವರೆ ಕೋಟಿ ಮತ್ತು ನಂತರ ...ಒಂದೂವರೆ ಕೋಟಿ ಒಟ್ಟು ಏಳು ಕೋಟಿಯಷ್ಟು ...ಹೌಸಿಂಗ್ ಸಾಲ ನಕಲಿ ದಾಖಲೆಗಳ ಆಧಾರದ ...ಮೇಲೆ ಸುಧಾಕರ್ ಮತ್ತು ರೆಡ್ಡಿಯ ಜೇಬು ...ಸೇರುತ್ತದೆ. ಮಂಜೂರಾದ ದುಡ್ಡು ಸುಧಾಕರ್ ...ಮತ್ತು ರೆಡ್ಡಿಯ ಖಾಸಗಿ ಅಕೌಂಟಿಗೆ ಬಂದು ...ಜಮೆಯಾಗಿದ್ದಕ್ಕೂ ದಾಖಲೆಯಿದೆ.

ಆದರೆ 2008 ರ ಹೊತ್ತಿಗೆ ಇದು ಸ್ಟೇಟ್ ...ಬ್ಯಾಂಕ್ ಆಫ್ ಮೈಸೂರಿನ ಮೇಲಧಿಕಾರಿಗಳ ...ದೃಷ್ಟಿಗೆ ಬಿದ್ದಿದೆ. ಗಾಂಧಿನಗರ ಶಾಖೆಯ ...ಮ್ಯಾನೇಜರ್ ಎಂ.ಟಿ.ವಿ. ರೆಡ್ಡಿ ತನ್ನ ಅಧಿಕಾರ ...ವ್ಯಾಪ್ತಿಯನ್ನೂ ಮೀರಿ ಸಾಲ ಮಂಜೂರು ಮಾಡಿದ ...ಬಗ್ಗೆ ಅನುಮಾನಗೊಂಡ ಮೇಲಧಿಕಾರಿಗಳು ...ದಾಖಲೆಗಳನ್ನು ಪರಿಶೀಲಿಸಿದಾಗಲೇ ವಂಚನೆ ...ಬಯಲಾಗಿದೆ.

ಸಿಬಿಐ ತನಿಖೆಗೆ.....

ಹಕೀಕತ್ತೆಂದರೆ ಸುಧಾಕರ್ ಒಡೆತನದ ಮೆ. ತ್ರಿಶೂಲ್ ಎಂಟರ್‌ಪ್ರೈಸಸ್ ಎಂಬುದೇ ನಕಲಿ ಕಂಪೆನಿಯಾಗಿತ್ತು, ಕಂಪೆನಿ ಕಾಯ್ದೆಯ ಪ್ರಕಾರ ಅದು ನೋಂದಾವಣೆಗೊಂಡೇ ಇರಲಿಲ್ಲ, ಸೆವೆನ್ ಹಿಲ್ಸ್ ಪ್ರಾಪರ್ಟೀಸ್ ಪ್ರೈ.ಲಿ. ಎಂಬುದು ಕೂಡ ಇನ್ನೊಂದು ಬ್ಲೇಡ್ ಕಂಪೆನಿಯೇ ಎಂಬುದು ಬ್ಯಾಂಕ್ ಮೇಲಧಿಕಾರಿಗಳಿಗೆ ತನಿಖೆಯಿಂದ ಗೊತ್ತಾಯಿತು. ಸಹಜವಾಗೇ ರಾಷ್ಟ್ರೀಕೃತ ಬ್ಯಾಂಕುಗಳು ಇಂಥ ಕೋಟಿ ಲೆಕ್ಕದ ವಂಚನೆ ಪ್ರಕರಣಗಳನ್ನು ಸಿಬಿಐಗೆ ವಹಿಸುತ್ತವೆ. ಸಿಬಿಐನಲ್ಲಿ ಆರ್ಥಿಕ ಅಪರಾಧಗಳ ತನಿಖೆಗೆಂದೇ **Bank securities & fraud cell** ಎಂಬ ವಿಶಿಷ್ಟ ಘಟಕವಿದೆ.

2007 ರ ಡಿಸೆಂಬರ್ ತಿಂಗಳಿಂದಲೇ ಈ ಬಗ್ಗೆ ತನಿಖೆ ಆರಂಭಿಸಿದ ಸಿಬಿಐ ಬೆಂಗಳೂರು ಘಟಕ **2008** ರ ಫೆಬ್ರವರಿ **1** ರಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಗಾಂಧಿನಗರ ಶಾಖೆಯ ಚೀಫ್ ಮ್ಯಾನೇಜರ್ ಎಂ.ಟಿ.ವಿ ರೆಡ್ಡಿಯನ್ನು ಮೊದಲನೇ ಆರೋಪಿಯಾಗಿಸಿ, ಮಂತ್ರಿ ಸುಧಾಕರ್‌ರನ್ನು ಎರಡನೇ ಗುನ್ನೇಗಾರರನ್ನಾಗಿಸಿ ವಿಶೇಷ ಸಿಬಿಐ ಕೋರ್ಟಿಗೆ ಎಫ್.ಐ.ಆರ್. ಸಲ್ಲಿಸುತ್ತದೆ. ಬಹುಶಃ ಸುಧಾಕರ್ ಮಂತ್ರಿಯಾಗಿರದೇ ಹೋಗಿದ್ದರೆ ಜೈಲು ಪಾಲಾಗಬೇಕಿತ್ತು. ಸಿಬಿಐ ಇದನ್ನು ರಾಜ್ಯಪಾಲರ ಗಮನಕ್ಕೂ ತಂದಿತ್ತು. ಆ ಮೂಲಕ ಮುಖ್ಯಮಂತ್ರಿ ಯಡ್ಡಿಗೂ ಗೊತ್ತಾಗಿತ್ತು. ಬಹುಮತದ ಅತಂತ್ರವಿತ್ತಲ್ಲ; ಗೊತ್ತಿದ್ದೂ ನುಂಗಿಕೊಂಡರು. 'ಅದು ನನ್ನ ವಿರೋಧಿಗಳ ಕುತಂತ್ರ, ಇವತ್ತಲ್ಲಾ ನಾಳೆ ಸಿಬಿಐನವರು ಖಂಡಿತಾ 'ಬಿ' ರಿಪೋರ್ಟ್ ಹಾಕೇ ಹಾಕ್ತಾರೆ.....!' ಎಂದು ಮುಖ್ಯಮಂತ್ರಿಯ ತಲೆ ತಿಕ್ಕಿಕೊಂಡೇ ಬಂದ ಮಂತ್ರಿ ಸುಧಾಕರ್‌ಗೆ ಆಘಾತವಾಗಿದ್ದು ಮೊನ್ನೆ ಅಂದರೆ **2009** ರ ಆಗಸ್ಟ್ **10** ರಂದು.

ಕಳ್ಳನ ಸುಳ್ಳುಗಳು

ಸುಧಾಕರ್ ಮಾಡಿದ್ದ ಫೋರ್ಜರಿ, ನಕಲಿ ದಾಖಲೆಗಳನ್ನೆಲ್ಲ ಸಾರಾಸಗಟಾಗಿ ಸಂಗ್ರಹಿಸಿದ ಸಿಬಿಐ ಕೋರ್ಟಿಗೆ ಮುನ್ನೂರಕ್ಕೂ ಹೆಚ್ಚು ಪುಟಗಳ ಆರೋಪ ಪಟ್ಟಿಯನ್ನು ಸಲ್ಲಿಸಬಿಟ್ಟಿತ್ತು. ಈಗ ಸುಧಾಕರ್ ತಿಪ್ಪೇ ಸಾರಿಸುತ್ತಿದ್ದಾನೆ. ಧರ್ಮಸ್ಥಳ ಮಂಜುನಾಥ ಸ್ವಾಮಿಯ ಮೇಲೆ ಆಣೆ ಮಾಡಿ 'ನಾನು ರಾಮಾಯಣದ ಸೀತೆಯಷ್ಟೇ ಪವಿತ್ರವಾಗಿದ್ದೀನಿ' ಎಂದು ಪತ್ರಕರ್ತರ ಮುಂದೆ ಸೋಗು ಹಾಕುತ್ತಿದ್ದಾನೆ. ಒಪ್ಪಿಕೊಳ್ಳೋಣ. ಹಾಗಿದ್ದರೆ, ಸುಧಾಕರ್ ಮಾಡಿದ ಲೇಔಟಿನಲ್ಲಿ ಮನೆಗಳಿರಬೇಕಿತ್ತಲ್ಲವೆ? ಕನಿಷ್ಠ ಸೈಟುಗಳಾದರೂ ಇರಬೇಕಿತ್ತು. ರಸ್ತೆ, ಮೋರಿ, ಕಟ್ಟಡ ಯಾವುದೂ ಇಲ್ಲದ ಬೋಗಸ್ ಲೇಔಟಿಗೆ ಬಿಎಂಆರ್‌ಡಿಎ ನಕ್ಷೆಯನ್ನೇ ಮಂಜೂರು ಮಾಡದಿರುವಾಗ, ಅಸಲಿಗೆ ರಿಯಲ್ ಎಸ್ಟೇಟ್ ಕಂಪೆನಿಗಳೇ 'ಲೆಟರ್‌ಹೆಡ್' ಕಂಪೆನಿಗಳೆಂದ ಮೇಲೆ ಯಾವ ಲೇಔಟು? ಎಲ್ಲಿಯ ಸೈಟು?

ಹಾಗಾದರೆ ಎತ್ತಿದ ಏಳು ಕೋಟಿ ಸಾಲ ಏನಾಯಿತು? ಹೋಗಲಿ; ಯಾರನ್ನು ರೈಲ್ವೇ, ಎಚ್‌ಎಎಲ್, ಕೆಎಸ್ಆರ್ಟಿಸಿ ನೌಕರರೆಂದು ದಾಖಲೆ ಸೃಷ್ಟಿಸಿ ಸುಧಾಕರ್ ಸಾಲ ಎತ್ತಿದ್ದಾನೋ ಅವರಾದರೂ ಇರಬೇಕಿತ್ತಲ್ಲವೆ? ಸಿಬಿಐಗೇನು ಹುಚ್ಚು ಹಿಡಿದಿದೆಯಾ?

ಕಳ್ಳ ಮಂತ್ರಿಯ ಸುಳ್ಳನ್ನು ನಂಬುವವರ್‍ಯಾರು?

● ರಾ. ಸೋಮನಾಥ್

ಸಂಸ್ಕೃತ ವಿ.ವಿ. ಒಳಗೆ ಪಾಕಶಾಲೆನೂ ಇರತ್ತೈತಿ ಗೊತ್ತೇನು?

ಪ್ರತಿದಿನವೂ ಕನ್ನಡ ಭಾಷೆ ಸಾವಿನ ಕಡೆ ತೆರಳುತ್ತಿರುವುದನ್ನು ನೋಡಿ ಆ ಭಾಷೆ ಸಚ್ಚಿ ಬದುಕುವವರು ಅಸಹಾಯಕತೆಯಿಂದ ಹಲುಬುತ್ತಿದ್ದಾರಂತಲ್ಲಾ, ಈ ಮಧ್ಯೆ ಸತ್ತ ಭಾಷೆಯೊಂದಕ್ಕೆ ಭವ್ಯವಾದ ಸ್ಮಾರಕ ಮಾಡಿ, ಆ ಸ್ಮಾರಕದೊಳಕ್ಕೆ ಸೇರಿಕೊಂಡು, ಪ್ರತಿ ದಿನವೂ ಶ್ರಾದ್ಧ ಹೋಮ, ಯಜ್ಞ ಮಾಡಿಕೊಂಡು ಹೊಟ್ಟೆ ಹೊರೆಯಲು ಸಂಚು ಮಾಡಿರುವ ಪುರೋಹಿತಶಾಹಿ ಪಿಂಡಗಳು, ಊರಗಲ ಕರಪತ್ರ ಹೊರಡಿಸಿ ಹಂಚುತ್ತಿವೆಯಂತಲ್ಲಾ, ಈ ಸಂಚಿನ ರೂವಾರಿಯಾದ ಸಂತೇಶಿವರದ ಭೈರ ತನ್ನ ಮೊಂಡು ಭೈರಿಗೆಯನ್ನು ಮತ್ತೊಮ್ಮೆ ಸಾಣೆ ಹಿಡಿಸಿಕೊಂಡು ತಯಾರಾಗುತ್ತಿದ್ದಾನಂತಲ್ಲಾ, ಭವತಾಹ ನಾಮ ಕಿಂ ಎಂದರೆ ಹಿಂದೆಮುಂದೆ ನೋಡುವ ಭಟ್ಟ ಭೈರನ ಭೈರಿಗೆಗೆ ಮುಖಪುಟವನ್ನೇ ಮೀಸಲಿಟ್ಟಿದ್ದಾನಂತಲ್ಲಾ, ಥೂತ್ತೇರಿ!

******

ಈ ಸಮಯದಲ್ಲಿ ಗೋಕಾಕರು ವರದಿ ತಯಾರಿಸುತ್ತ ಕೊಠಡಿಯಲ್ಲಿ ಕುಳಿತಿರಬೇಕಾದರೆ ಹೊರಗೆ ಗದ್ದಲ ಎಬ್ಬಿಸಿ "ನಿಮ್ಮ ವರದಿಯಲ್ಲಿ ಕನ್ನಡಕ್ಕೆ ಅನ್ಯಾಯವಾಗಕೂಡದು. ಹಾಗೆ ಆದದ್ದೇ ಆದರೆ, ನೀವು ನಮ್ಮ ಗುರುಗಳು ಅನ್ನದನ್ನು ಬಿಟ್ಟು ಬೀದಿಗಿಳಿದು ಹೋರಾಟ ಮಾಡತೇನ್ರಿ" ಎಂದು ಎಚ್ಚರಿಸಿದ್ದ ಮತ್ತು ಹಾಗೇ ಮಾಡಿದ ಚಂಪಾರನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತು. ಆ ಕೂಡಲೇ ಫೋನ್ ಮಾಡಿದರೆ ಸಿಕ್ಕೇ ಬಿಟ್ಟರು.

ರಿಂಗ್ ಟೋನ್: "ಹುಟ್ಟಿದರೆ ಕನ್ನಡ ನಾಡಲ್ಲುಟ್ಟಬೇಕು, ಮೆಟ್ಟಿದರೇ....

"ಹಲೋ ಯಾರು?"

"ನಾನು ಸಾರ್, ಯಾಹೂ."

"ಯಾಹೂ ಅವರೆ ಅರಾಮದಿರೇನ್ರಿ?"

ಥೂತ್ತೇರಿ ▸ ಯಾಹೂ

"ಎಲ್ಲಿ ಆರಾಮು ಸಾರ್, ನಮ್ಮ ಸುತ್ತ ನ್ನಡಿಯದ ನೋಡಿದ್ರೆ ಆರಾಮಾಗಿರಕ್ಕಾಯ್ತದ ಸಾ?"

"ನನಗೂ ಹಾಂಗೆ ಆಗೇತ್ರಿ. ಈ ಬೆಂಗಳೂರಾಗೆ ಇರೂದೆ ತ್ರಾಸಾಗೇತ್ರಿ. ಧಾರವಾಡದಾಗ ಬೇಸಿದ್ದೆ."

"ನಿಜವಾಗ್ಲು ಈ ಟೈಮಲ್ಲಿ ಅಲ್ಲಿರಬೇಕಿತ್ತು ಸಾ ನೀವು."

"ಇರಬೇಕಿತ್ತು ಅಂತ ಈಗ ಅನಸಾಕತ್ತೈತಿ. ಆದ್ರ ವಳ್ಳೆ ಹೋಗಾಕ ಬರೂದಿಲ್ರಿ."

"ಯಾಕ್ ಸಾರ್ ಹೋಗಕ್ಕಾಗದಿಲ್ಲ?"

"ಕಾಲ ಸರದೈತಿ. ಕಾಲ ಯಾವಾಗ್ಲು ಮುಂದ ಹೋಕ್ಕತಿ. ಅಂಗಾ ನಮ್ಮ ಬಾಳೇವೂ ಆಗೇತಿ."

"ಅದು ಸರಿ ಸಾ. ಈ ಪುರೋಹಿತ್ರು ಸಂಸ್ಕೃತ ವಿ.ವಿ. ಮಾಡ್ತಿವಿ ಅಂತ ವಂಟವ್ರೆ. ಗೋಕಾಕ್ ಚಳವಳಿ ತರ ಚಳವಳಿ ಹುಟ್ಟಾಕ ಬೇಕಲ್ಲಾ ಸಾ."

"ನೀವೇಳೂದು ಖರೆ. ಆದ್ರೆ ಗೋಕಾಕ್ ಚಳವಳಿ ನಮೂನಿ ಚಳವಳಿ ಇನ್ನಾಗುದಿಲ್ರಿ. ಯದಕ್ಕಂದ್ರ ಈಗ ರಾಜಕುಮಾರ ಇಲ್ಲ, ನಂಜುಂಡ ಸ್ವಾಮಿ, ಲಂಕೇಶ್, ತೇಜಸ್ವಿ ಯಾರೂ ಇಲ್ಲ. ಮುಖ್ಯವಾಗಿ ಗುಂಡೂರಾಯನೆ ಇಲ್ಲಲಾ. ಬರೇ ಚಿ.ಮೂ ಅದಾನ, ಅವ ಅಲ್ಲದಾನೆ ಮಗ."


"ಎಡೂರಪ್ಪ ಅವ್ರುನಲ್ಲ ಸಾ?"

"ಇದ್ರೂನು ಅವ್ರುನ ಎಡಬಲಕ್ಕ ಮೇಲಜಾತಿ ಅದಾವು. ಅದರಾಗು ಬಡಗಿ ಹಿಡದಿರೊ ಮಂದಿ ಕೈಗೆ ತಲಿ ಕೊಟ್ಟಾನ."

"ಈ ಬಡಗಿ ಜನ ಗೋಕಾಕ್ ಚಳವಳಿ ಟೈಮಲ್ಲು ಸುಮ್ಮನಿದ್ರಲವೆ?"

"ಎಲ್ಲಿ ಸುಮ್ಮನಿದ್ರಿ? ಮುಸ್ಲಿಮರು ಕನಡ ಮಾತಾಡೂದಿಲ್ಲ ಅಂತೇಳಿ ಗಲಬೇ ಹಚ್ಚಾಕ ನೋಡತಿದ್ರು. ಗೋಕಾಕ್ ಚಳವಳಿ ಜನಸಾಗರ ನೋಡಿ ಮನಿ ಹಿಡದು ಕುಂತರು ಗೊತ್ತೇನ?"

"ಅನಂತಮೂರ್ತಿಯವರು ಸುಮ್ಮನವ್ರುರಲ್ಲ ಸಾ?"



"ಅವರು ಸುಮ್ಮನದಾರ ಅಂದ್ರ ಯಾವುದೊ ಗೊಂದಲಮಯ ಸ್ಥಿತಿಗೆ ತಯಾರಿ ನಡಸಿರತಾರ್ರಿ. ಇಲ್ಲಂದ್ರ ಅವುರು ಈಗ ಸುಮ್ಮನಿರೋದು ಒಂದು ಗೊಂದಲನೆ."

"ಅನಂತಮೂರ್ತಿಯಂತವುರ ಬಗ್ಗೆ ಅಂಗೆಲ್ಲಾ ಅನುಮಾನ ಪಡಬಾರ್ದು ಸಾ."

"ಅನಂತಮೂರ್ತಿಯಲ್ಲ ಅವುರಂತ ಯಾರೇ ಬುದ್ದಿಜೀವಿಯಾದ್ರು ಅವುರು ಬ್ರಾಹ್ಮಣ ಅಂದಕೂಡಲೇ ನನಗೆ ಒಂದು ಸಂಶಯದ ಎಳೆ ಇದ್ದೇ ಇರತೈತಿ. ಆನಂತರ ಮೋಸ ಹೋಗದಕಿಂತ್ಲೂ ಮೊದಲಕ್ಕ ಉಷಾರಿಂದ ಇದ್ರ ಬೇಸಲ್ಲೇನು?"

"ಈ ಮಾತು ನಿಮ್ಮ ಮಟ್ಟಿಗೆ ನಿಜ ಇರಬಹುದು ಸಾರ್. ಯಾಕಂದ್ರೇ ಈಚಿಗೆ ಬೆಲ್ಜಿಯಂನಿಂದ ಬಾಲಗಂಗಾಧರ ಅಂತ ಭಯಂಕರ ವಿದ್ವಾಂಸ ಬಂದಿದ್ದ ಸಾರ್. ಹೆಗ್ಗೋಡಿನಿಂದ ಹಿಡಿದು ಕರ್ನಾಟಕದ ಬಹಳ ಜನ ಬುದ್ಧಿಜೀವಿಗಳು ಅವನನ್ನು ಅಪ್ಪಿಕೊಂಡು ಮುದ್ದಾಡಿ ಕಳಿಸಿದ್ರು."

"ಗೊತ್ತರಿ, ಅವ ಇಂಡಿಯಾದಾಗ ಜಾತಿ ಇಲ್ಲ, ಜಾತಿ ಸಿಸ್ಟಂ ಇಲ್ಲ, ಜಾತಿಗಳು ಇಲ್ಲಿ ಮೆಕ್ಯಾನಿಜಂ ತರ ವರಕ ಮಾಡಿಲ್ಲ ಅಂತ ಹೇಳಾಕತ್ಯಾನೌದಿಲ್ಲೊ?"

"ಅವುನೆ ಸಾರ್ ಅವುನೆ. ಎಷ್ಟು ಚನ್ನಾಗಿ ಮಾತಾಡ್ತನೆ ಅಂದ್ರೆ ಅವುನೆದ್ರಿಗೆ ಕುಂತೋರ್‍ಯಲ್ಲ ದಡ್ಡರು ಅನ್ನಂಗೆ ಮಾತಾಡ್ತನೆ. ಈಚೆಗೆ ಅವುನು ಬಂದು ವಿ.ಕ. ಭಟ್ಟನ ಮನೆಲಿ ಉಳಕೊಂಡಿದ್ದು, ಬೆಲ್ಜಿಯಂಗೂ ಅವುನನ್ನ ಕರಿಸಿಕೊಂಡಿದ್ನಂತೆ ಸಾ."

"ಅಲ್ಲರಿ ಎಷ್ಟು ದಡ್ಡದೀರಿ ನೀವು. ಬೆಲ್ಜಿಯಂನಿಂದ ಬಂದ ಬ್ರಾಹ್ಮಣ ಭಟ್ಟನ ಮನಿಯಾಗ ವಸ್ತಿ ಹ್ವಗಿದನೆ ನಿಮ್ಮ ಮನಿಗೆ ಬರ್‍ತಾನೇನ್ರಿ. ಇನ್ನ ಮುಂದೆ ಅವ ಬಂದ್ರ ಹೊಸ ಸಂಸ್ಕೃತ ವಿ.ವಿ.ಗೆ ಹೊಗತನು. ಅಲ್ಲಿ ಆ ತುದಿ ಭೈರಪ್ಪನಿಂದ ಹಿಡದು ಈ ತುದಿ ಭಟ್ಟನವರೆಗೂ ಸಬ ಸೇರಿರತದ. ಕೃಷ್ಣಭಟ್ಟ ಸ್ವಾಗತ ಮಾಡ್ತನ, ಚಿ.ಮೂ. ಸಂಸ್ಕೃತದಾಗ ಭಾವಗೀತೆ ಹಾಡ್ತನ, ವಿ.ಕ.ದಲ್ಲಿ ವಿಕೃತವಾಗಿ ಕೆರೆಯೂ ಸಿಂಹ ವಂದನಾರ್ಪಣೆ ಮಾಡ್ತನ, ನಂತರ ಬೋಜನ ಇದ್ದೇ ಇರತೈತಿ. ಇನ್ನೊಂದು ವಿಷಯ ಗೊತ್ತದೇನು?"

"ಗೊತ್ತಿಲ್ಲ ಹೇಳಿ ಸಾ."

"ಸಂಸ್ಕೃತ ವಿ.ವಿ. ಆದನಂತರ ಅದರೊಳಗ ಒಂದು ಪಾಕ ಶಾಲಿನೂ ತೆಗಿತರ. ಪ್ರತಿಭಾವಂತ ಅಡಿಗರು ಅಲ್ಲಿ ಅಡಿಗೆಯವರಾಗಿ ಸೇರ್‍ತರ!"

"ಥೂತ್ತೇರಿ!" ■

ರೆಡ್ಡಿಯ ರಕ್ತ ರಾಜಕಾರಣ

ಯಾವುದೇ ಒಬ್ಬ ಪ್ರಮುಖ ನಾಯಕ ಸತ್ತನೆಂದರೆ ಮಾಧ್ಯಮಗಳು ಆತನನ್ನು ಒಬ್ಬ ಹೀರೋನಂತೆ, ಕ್ರಾಂತಿಕಾರಿಯಂತೆ ವರ್ಣಿಸಲಾರಂಭಿಸಿಬಿಡುತ್ತವೆ. ಆತ ತನ್ನ ಜೀವಮಾನದುದ್ದಕ್ಕೂ ಮಾಡಿಕೊಂಡು ಬಂದಿದ್ದ ಕೊಲೆ-ಸುಲಿಗೆಗಳು, ದರೋಡೆ-ಲೂಟಿಗಳು, ಅನ್ಯಾಯ-ಅತ್ಯಾಚಾರಗಳು, ದೌರ್ಜನ್ಯ-ಅಕ್ರಮಗಳು – ಎಲ್ಲವೂ ತೆರೆಮರೆಗೆ ಸರಿದುಬಿಡುತ್ತವೆ. ಈಗ ಹೆಲಿಕಾಪ್ಟರ್ ಕ್ರ್ಯಾಶ್‌ನಲ್ಲಿ ಮರಣ ಹೊಂದಿರುವ ಆಂಧ್ರಪ್ರದೇಶದ ಮುಖ್ಯಮಂತ್ರಿ ಡಾ.ವೈ.ಎಸ್.ರಾಜಶೇಖರ ರೆಡ್ಡಿಯ ವಿಚಾರದಲ್ಲೂ ಅದು ಮತ್ತೊಮ್ಮೆ ಸಾಬೀತಾಗುತ್ತಿದೆ. ಎಲೆಕ್ಟ್ರಾನಿಕ್ ಮತ್ತು ಮುದ್ರಣ ಮಾಧ್ಯಮಗಳು ಅವರನ್ನು ಬಹುದೊಡ್ಡ ನಾಯಕ ಮಾತ್ರವಲ್ಲ, ಅಪ್ರತಿಮ ಕ್ರಾಂತಿಕಾರಿ ಎಂದು ಹಾಡಿ ಹೊಗಳಲಾರಂಭಿಸಿವೆ.

ಕಾಂಗ್ರೆಸ್ ಪಕ್ಷಕ್ಕೆ ರಾಜಶೇಖರ್ ರೆಡ್ಡಿ ಬಹುದೊಡ್ಡ ನಾಯಕನೇ ಇರಬಹುದು. ಆಂಧ್ರಪ್ರದೇಶದಲ್ಲಿ ಬಲವಾಗಿ ತಳವೂರಿದ್ದ ತೆಲುಗುದೇಶಂ ಪಕ್ಷದ ಚಂದ್ರಬಾಬು ನಾಯ್ಡುವಿಗೆ ಹೆಡೆಮುರಿ ಕಟ್ಟಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಮೇಲೆತ್ತಿದ ಮಹಾಪುರುಷನಿರಬಹುದು. ಆದರೆ ಇದೆಲ್ಲದರೊಂದಿಗೆ ರಾಜಶೇಖರ್ ರೆಡ್ಡಿ ಯಾವ ಕ್ರಿಮಿನಲ್‌ಗಳಿಗಿಂತ ಕಡಿಮೆಯೇನಿರಲಿಲ್ಲ. ಅವರು ರಾಜ್ಯ ರಾಜಕಾರಣದಲ್ಲಿ ಬಹುದೊಡ್ಡ ನಾಯಕರಾಗಿ ಬೆಳೆಯುವುದಕ್ಕೆ, ರಾಷ್ಟ್ರ ರಾಜಕಾರಣದಲ್ಲಿ ಬಲವಾದ ಪ್ರಭಾವ ಬೀರುವಷ್ಟು ಬಲಿಯುವುದಕ್ಕೆ, ಅದೆಷ್ಟು ಹೆಣಗಳನ್ನು ಉರುಳಿಸಿದ್ದರೆಂಬುದು ಪ್ರಾಯಶಃ ಅವರಿಗೂ ನೆನಪಿರಲಿಲ್ಲ.

ರಾಜಶೇಖರ್ ರೆಡ್ಡಿ ಹುಟ್ಟಿ ಬೆಳೆದುಬಂದ ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವರು ಆಂಧ್ರಪ್ರದೇಶದ ರಾಯಲಸೀಮ ಪ್ರದೇಶದ ರಕ್ತಸಿಕ್ತ ರಾಜಕಾರಣಕ್ಕೆ ಹೇಳಿಮಾಡಿಸಿದ ವ್ಯಕ್ತಿ ಎನ್ನಿಸದೇ ಇರದು.

● ಕುಮಾರ್ ಬುರಡಿಕಟ್ಟಿ

ಕಡಪ, ಚಿತ್ತೂರು, ಅನಂತಪುರ, ಕರ್ನೂಲು ಜಿಲ್ಲೆಗಳ ನ್ನೊಳಗೊಂಡ ರಾಯಲಸೀಮ ಎಂಬ ಬಯಲುಸೀಮೆ ಇಡೀ ದೇಶದಲ್ಲೇ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲೊಂದು. ಶತಶತಮಾನಗಳ ಹಿಂದಿನ ಭೂಮಾಲಿಕ ಪಾಳೆಗಾರರ ದರ್ಪ, ದೌರ್ಜನ್ಯಗಳು ಇಂದಿಗೂ ಅಲ್ಲಿ ರಾರಾಜಿಸುತ್ತಿವೆ. ಸಾವಿರಾರು ಎಕರೆ ಭೂಮಿಗೆ ಒಡೆಯರಾಗಿರುವ ಭೂಮಾಲಿಕರೇ ಇವತ್ತಿಗೂ ಆ ಸೀಮೆಯನ್ನು ಆಳುತ್ತಿದ್ದಾರೆ. ಒಬ್ಬೊಬ್ಬ ಭೂಮಾಲಿಕನೂ ತನ್ನದೇ ಆದ 'ಪ್ರತ್ಯೇಕ ಸೈನ್ಯ'ದಂತಿರುವ ರೌಡಿ ಗ್ಯಾಂಗುಗಳನ್ನು ಸಾಕಿಕೊಂಡಿದ್ದಾನೆ. ಹಿಂದೆ ಈ ಗ್ಯಾಂಗುಗಳ ನಡುವಿನ ಹೊಡೆದಾಟ-ಬಡಿದಾಟಗಳಲ್ಲಿ ಬಡಿಗೆ, ಕತ್ತಿಗಳನ್ನು ಬಳಸುತ್ತಿದ್ದವರು ಈಗ ಫೈರ್ ಆರ್ಮ್ಸ್‌ಗಳನ್ನು ಬಳಸುತ್ತಿದ್ದಾರೆ. ಪರಿಣಾಮವಾಗಿ ದೌರ್ಜನ್ಯ, ಕ್ರೌರ್ಯಗಳು ಮತ್ತಷ್ಟು ಭೀಕರವಾಗಿವೆ. ಈ ಪಾಳೆಗಾರರೇ ಚುನಾವಣೆಗಳಲ್ಲಿ ನಿಂತು ಎದುರಾಳಿಗಳನ್ನು ತೋಳ್ಬಲದ ಮೂಲಕ ಮಣಿಸಿ ವಿಧಾನಸಭೆ, ಲೋಕಸಭೆ ಪ್ರವೇಶಿಸುತ್ತಾರೆ. ಹೆಚ್ಚು ಕೊಲೆಗಳನ್ನು ಮಾಡಿದವರು, ಹೆಚ್ಚು ತೋಳ್ಬಲವನ್ನು ಪ್ರದರ್ಶಿಸಿದವರು, ತಮ್ಮ ಭೀಭತ್ಸತೆಯ ಮೂಲಕ ಜನಸಾಮಾನ್ಯರಲ್ಲಿ, ಎದುರಾಳಿಗಳಲ್ಲಿ ನಡುಕ ಹುಟ್ಟಿಸುವವರು ನಾಯಕರಾಗಿ ಬೆಳೆಯುತ್ತಾರೆ. ಸೌಮ್ಯ ರಾಜಕಾರಣಿಗಳನ್ನು, ತೋಳ್ಬಲವಿಲ್ಲದವರನ್ನು ಮಿಡತೆಗಳಂತೆ ಹೊಸಕಿ ಹಾಕಲಾಗುತ್ತದೆ. ಅದು ರಾಯಲಸೀಮ ರಾಜಕಾರಣ. ರಕ್ತಸಿಕ್ತ ರಾಜಕಾರಣ.

ಡಾ.ವೈ.ಎಸ್.ರಾಜಶೇಖರ ರೆಡ್ಡಿ ಇದೇ ರಾಯಲಸೀಮದ ರಕ್ತಸಿಕ್ತ ರಾಜಕಾರಣದಲ್ಲಿ ಹುಟ್ಟಿದವರು. ಅಲ್ಲೇ ಹೊಡೆದಾಡುತ್ತಾ, ಬಡಿದಾಡುತ್ತಾ, ಭೀಭತ್ಸತೆ ಸೃಷ್ಟಿಸುತ್ತಾ ಬೆಳೆದವರು.

ರಾಜಶೇಖರ ರೆಡ್ಡಿಯ ಕುಟುಂಬ ಇಡೀ ರಾಯಲಸೀಮಾದಲ್ಲಿ ಕ್ರೌರ್ಯಕ್ಕೆ ಕುಖ್ಯಾತಿ ಗಳಿಸಿದ ಕುಟುಂಬ. ಅವರ ತಂದೆ ರಾಜರೆಡ್ಡಿ ಒಬ್ಬ ನಟೋರಿಯಸ್ ಕ್ರಿಮಿನಲ್. ಆತನನ್ನು ಕಂಡರೆ ಅರ್ಧ ರಾಯಲಸೀಮ ಗಡಗಡ ನಡುಗುತ್ತಿತ್ತು, ರಾಜರೆಡ್ಡಿ ಭೂಮಾಲಿಕ ಪಾಳೆಗಾರನಾಗಿರದಿದ್ದರೂ ತನ್ನ ನಟೋರಿಯಸ್ ಕೊಲೆಪಾತಕಗಳಿಂದಲೇ ಪ್ರಭಾವಿ ವ್ಯಕ್ತಿಯಾಗಿ ಬೆಳೆದಾತ. ತನ್ನನ್ನು ಕಂಡರೆ ಜನಸಾಮಾನ್ಯರು, ತನ್ನ ವಿರೋಧಿಗಳು ಗಡಗಡ ನಡುಗಬೇಕೆಂಬ ಕುಖ್ಯಾತಿಗೆ ಹಪಹಪಿಸುತ್ತಿದ್ದ ರಾಜರೆಡ್ಡಿ ಅದಕ್ಕಾಗಿ ಎಂಥ ಹೀನ ಕೃತ್ಯಕ್ಕೂ ಇಳಿಯಲು ಸಿದ್ಧವಾಗಿರುತ್ತಿದ್ದ. ಒಮ್ಮೆ ಯಾವುದೋ ಮಹಿಳೆಯೊಬ್ಬಳ ಸರ ಕದ್ದ ಕಳ್ಳನನ್ನು ಹಿಡಿದು ತರಿಸಿ ಹಾಡುಹಗಲೇ ಎಲ್ಲರ ಎದುರೇ ಆತನ ಮೇಲೆ ಸೀಮೆಯೆಣ್ಣೆ ಸುರಿದು ಜೀವಂತವಾಗಿ ಸುಟ್ಟು ಹಾಕಿ ಭೀಭತ್ಸತೆ ಸೃಷ್ಟಿಸಿದ್ದ. ರಾಯಲಸೀಮೆಯಲ್ಲಿ ಪ್ರಭಾವಿ ರಾಜಕಾರಣಿಯಾಗಿದ್ದ ದೇವಿನಾಗಾರೆಡ್ಡಿಯನ್ನು ಮಣಿಸುವುದಕ್ಕೆ ಅತನ ವಿರೋಧಿಗಳು ರಾಜರೆಡ್ಡಿಯನ್ನೇ ಗುರಾಣಿಯನ್ನಾಗಿ ಬಳಸಿಕೊಂಡರು. ಅಲ್ಲಿಂದ ಪ್ರಾರಂಭವಾದ ರಾಜರೆಡ್ಡಿಯ ಕೊಲೆಸುಲಿಗೆಗಳ ಸರಮಾಲೆ ಆತ ಖುದ್ದಾಗಿ 1998ರ ಮೇ 23ರಂದು ಬಲಿಯಾಗುವ ತನಕವೂ ಮುಂದುವರೆಯಿತು.



ಹೀಗೆ, ರಾಯಲಸೀಮಾದಲ್ಲಿ ರಾಜರೆಡ್ಡಿಯ ತೋಳ್ಬಲ ಹೆಚ್ಚಾಗುತ್ತಿದ್ದಂತೆಯೇ ಭೂಮಾಲಿಕರು, ಗಣಿ ಮಾಲಿಕರು ಆತನನ್ನು ತಮ್ಮ ರಕ್ಷಣೆಗಿಟ್ಟುಕೊಂಡರು. ಅಂಥವರಲ್ಲಿ ವೆಂಕಟಸುಬ್ಬಯ್ಯ ಎಂಬ ಗಣಿ ಉದ್ಯಮಿಯೂ ಒಬ್ಬ. ಮೂಲತಃ ಗಂಧಕದ ಗಣಿಯೊಂದಕ್ಕೆ ಮಾಲಿಕನಾಗಿದ್ದ ಈತ ತನ್ನ ಆಳುಗಳನ್ನು ನಿಯಂತ್ರಿಸುವುದಕ್ಕೆ, ಇನ್ನಿತರ ವಿರೋಧಿಗಳಿಂದ ರಕ್ಷಣೆ ಪಡೆಯುವುದಕ್ಕೆ ರಾಜರೆಡ್ಡಿಯನ್ನು ಬಾಡಿಗಾರ್ಡ್‌ನಂತೆ ಬಳಸಿಕೊಂಡ. ವೆಂಕಟಸುಬ್ಬಯ್ಯನ ಗೂಂಡಾ ಸೈನ್ಯಕ್ಕೆ ಸಾರಥಿಯಾದ ಮೇಲಂತೂ ರಾಜರೆಡ್ಡಿ ಮತ್ತಷ್ಟು ನಟೋರಿಯಸ್ ಆಗಿ ಬೆಳೆದ. ಎಲ್ಲಿಯತನಕ ಎಂದರೆ ಮುಂದೊಂದು ದಿನ ವೆಂಕಟಸುಬ್ಬಯ್ಯನಿಗೆ ಚಿನ್ನದ ಮೊಟ್ಟೆಯಿಡುವ ಕೋಳಿಯಂತಿದ್ದ ಆ ಗಂಧಕದ ಗಣಿಯಿಂದ ಕಾಲ್ತೆಗೆಯುವಂತೆ ಆದೇಶಿಸಿಬಿಟ್ಟ. ಅದಕ್ಕೆ ಆತ ಒಪ್ಪಲಿಲ್ಲ, ಕೆಲವೇ ದಿನಗಳಲ್ಲಿ ವೆಂಕಟಸುಬ್ಬಯ್ಯ ಅನಾಥ ಹೆಣವಾಗಿ ಬಿದ್ದ. ಮುಂದೆ ಆ ಗಂಧಕದ ಗಣಿಗೆ ರಾಜರೆಡ್ಡಿಯ ಪುತ್ರರತ್ನವಾದ ಡಾ.ವೈ.ಎಸ್.ರಾಜಶೇಖರ ರೆಡ್ಡಿಯೇ ಮಾಲಿಕನಾದ.

ವೈ.ಎಸ್.ರಾಜಶೇಖರ ರೆಡ್ಡಿ ತಂದೆಗೆ ತಕ್ಕ ಮಗ. ತಂದೆ ಅಷ್ಟೇನೂ ಓದುಬರಹ ಬರದಿದ್ದವನಾಗಿದ್ದರೆ ಮಗ ಡಾಕ್ಟರ್ ಆಗಿದ್ದ. ಈ ವ್ಯತ್ಯಾಸ ಬಿಟ್ಟರೆ ಕೊಲೆ-ಸುಲಿಗೆಗಳಲ್ಲಿಯಾಗಲೀ, ದರ್ಪ-ದೌರ್ಜನ್ಯಗಳಲ್ಲಿಯಾಗಲೀ, ಕ್ರೌರ್ಯ-ಭೀಭತ್ಸತೆಗಳಲ್ಲಿಯಾಗಲೀ ಯಾವುದೇ ವ್ಯತ್ಯಾಸವಿರಲಿಲ್ಲ. ಬೇಕೆಂದರೆ ತಂದೆಗಿಂತ ಒಂದು ಹೆಜ್ಜೆ ಮುಂದೆ ಎಂದೂ ಹೇಳಬಹುದು. ಕಡಪ ಜಿಲ್ಲೆಯಲ್ಲಿ ಒಂದಿಷ್ಟು ಕಾಲ ಡಾಕ್ಟರಿಕೆ ಮಾಡಿದ ರಾಜಶೇಖರ್ ರೆಡ್ಡಿಯನ್ನು ತಂದೆಯಿಂದ ರಕ್ತಗತವಾಗಿ ಬಂದಿದ್ದ ರಕ್ತಸಿಕ್ತ ರಾಜಕಾರಣ ಸದಾ ಸೆಳೆಯುತ್ತಿತ್ತು, ವೈದ್ಯ ವೃತ್ತಿ ಬಿಟ್ಟು ತೋಳೇರಿಸಿಕೊಂಡು ರಾಯಲಸೀಮ ರಾಜಕಾರಣಕ್ಕಿಳಿದರು. ಕಾಂಗ್ರೆಸ್ ಪಕ್ಷದಲ್ಲಿ ಪ್ರಭಾವಿ ರಾಜಕಾರಣಿಯಾಗಿ ಬೆಳೆದರು.

1975ರಲ್ಲಿ ಕಡಪ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾದರು. 1978ರಲ್ಲಿ ಪುಲಿವೆಂದುಲ ಕ್ಷೇತ್ರದಿಂದ ಸ್ಪರ್ಧಿಸಿ ಎದುರಾಳಿಗಳೊಂದಿಗೆ ಹೊಡೆದಾಟ-ಬಡಿದಾಟ ನಡೆಸುತ್ತಲೇ ಗೆದ್ದು ಮೊದಲ ಬಾರಿಗೆ ಆಂಧ್ರಪ್ರದೇಶ ವಿಧಾನಸಭೆ ಪ್ರವೇಶಿಸಿದರು. ಅಲ್ಲಿಂದಾಚೆಗೆ ಆ ಕ್ಷೇತ್ರವನ್ನು ಯಾರಿಗೂ ಬಿಟ್ಟುಕೊಡದೇ ಆರು ಬಾರಿ ಗೆದ್ದು ಬಂದಿದ್ದರು. 1983ರಲ್ಲಿ ಇಡೀ ರಾಜ್ಯದಾದ್ಯಂತ ತೆಲುಗುದೇಶಂ ಪಕ್ಷದ ಹವಾ ಬಲವಾಗಿ ಬೀಸುತ್ತಿದ್ದ ಸಮಯದಲ್ಲೂ ರಾಜಶೇಖರ್ ರೆಡ್ಡಿ ಸೋಲುಣ್ಣಲಿಲ್ಲ. ರಾಯಲಸೀಮ ರಕ್ತಸಿಕ್ತ ರಾಜಕಾರಣವನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಇದು ರಾಜಶೇಖರ ರೆಡ್ಡಿಯ ಜನಪ್ರಿಯತೆಯಾಗಿರಲಿಲ್ಲ, ಬದಲಿಗೆ ಕ್ಷೇತ್ರದ ಮೇಲೆ ಅವರ ಭೀಭತ್ಸತೆಯ ಹಿಡಿತವಾಗಿತ್ತು, ಈ ಭೀಭತ್ಸತೆಯೇ ಅವರನ್ನು ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕರನ್ನಾಗಿ ಮಾಡಿತು. 1980ರಲ್ಲಿ ಅಂಜಯ್ಯ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿ, 1982ರಲ್ಲಿ ಬಿ.ವೆಂಕಟರಾಮರೆಡ್ಡಿ ಸರ್ಕಾರದಲ್ಲಿ ಅಬಕಾರಿ ಸಚಿವರಾಗಿ, 1983ರಲ್ಲಿ ಶಿಕ್ಷಣ ಮತ್ತು ಆರೋಗ್ಯ ಸಚಿವರಾಗಿ ಕಾರ್ಯನಿರ್ವಹಿಸಿದರು.

ಈ ಸಚಿವಗಿರಿಗಳು ವಾಸ್ತವದಲ್ಲಿ ರಾಜಶೇಖರ ರೆಡ್ಡಿಯನ್ನು ಮತ್ತಷ್ಟು ಬಲಗೊಳಿಸಿದವು. ಅಲ್ಲಿಯ ತನಕ ಕೇವಲ ರಾಯಲಸೀಮೆಯ ನಾಯಕರಾಗಿದ್ದ ರಾಜಶೇಖರ್ ರೆಡ್ಡಿ ಈ ಪ್ರಕ್ರಿಯೆಯಲ್ಲಿ ರಾಜ್ಯ ಕಾಂಗ್ರೆಸ್ ನಾಯಕರಾಗಿ ಹೊರಹೊಮ್ಮಿದರು. 1983ರಲ್ಲಿ ಇಂದಿರಾಗಾಂಧಿಯವರು ಅವರನ್ನು ಆಂಧ್ರಪ್ರದೇಶದ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸುವುದರೊಂದಿಗೆ ಇಡೀ ರಾಜ್ಯ ಕಾಂಗ್ರೆಸ್ ರಾಜಶೇಖರ ರೆಡ್ಡಿಯ ಹಿಡಿತಕ್ಕೆ ಬಂತು. ಆದರೆ, ಈ ಸಮಯದಲ್ಲಿ ಇಡೀ ರಾಜ್ಯದಾದ್ಯಂತ ತೆಲುಗುದೇಶಂ ಹವಾ ಜೋರಾಗಿ ಬೀಸಲಾರಂಭಿಸಿದ್ದರಿಂದ 1984ರ ಲೋಕಸಭಾ ಚುನಾವಣೆಯಲ್ಲಿ ಹಾಗೂ 1985ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನೆಲಕಚ್ಚಿತು. ರಾಜ್ಯವನ್ನಾಳಬೇಕೆಂಬ ರಾಜಶೇಖರ್ ರೆಡ್ಡಿಯ ಕನಸು ತಾತ್ಕಾಲಿಕವಾಗಿ ನುಚ್ಚುನೂರಾಯಿತು. ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಡಬೇಕಾಯಿತು. 1989ರಲ್ಲಿ ಕಡಪಾದಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಗೆಲ್ಲುವುದರೊಂದಿಗೆ ರಾಷ್ಟ್ರ ರಾಜಕಾರಣಕ್ಕೆ ಕಾಲಿಟ್ಟರು. ಅಲ್ಲಿಂದಾಚೆಗೆ ನಾಲ್ಕು ಲೋಕಸಭೆಗಳಲ್ಲಿ ಕಡಪಾ ಕ್ಷೇತ್ರವನ್ನು ಪ್ರತಿನಿಧಿಸಿದರು. ಆದರೆ, ರಾಜ್ಯ ರಾಜಕಾರಣ ಅವರನ್ನು ಸೆಳೆಯುತ್ತಿತ್ತು, ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಬೇಕೆಂಬ ಕನಸು ಅವರನ್ನು ಮತ್ತೆ ರಾಜ್ಯ ರಾಜಕಾರಣಕ್ಕೆ ಮರಳುವಂತೆ ಮಾಡಿತು. ▶▶▶

ವೈಎಸ್‌ಆರ್ ಸಾವು ಕರ್ನಾಟಕ ಕಾಂಗ್ರೆಸ್‌ಗೆ ಬಿಡುಗಡೆ?

ಇದು ಉತ್ಪ್ರೇಕ್ಷೆಯ ಮಾತಲ್ಲ!

ಒಬ್ಬ ವ್ಯಕ್ತಿ ದುರಂತ ಸಾವಿಗೀಡಾದಾಗ ಕೆಟ್ಟ ಮಾತಾಡುವುದು ತರವಲ್ಲ, ಆದರೂ ಕರ್ನಾಟಕದ ರಾಜಕಾರಣದ ಇವತ್ತಿನ ಸ್ಥಿತಿ ನೋಡಿದವರಿಗೆ ಆಂಧ್ರ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿಯ ಅನಿರೀಕ್ಷಿತ ಸಾವಿನ ಸುದ್ದಿ ಕೇಳಿ ಹೀಗನ್ನಿಸಿದರೆ ಅದು ಅಸಹಜವೂ ಅಲ್ಲ.

ಆಂಧ್ರದ ಮಟ್ಟಿಗೆ ಹಾಗೂ ಎಐಸಿಸಿಗೂ ವೈಎಸ್‌ಆರ್ ಸಾವು ಶಾಕ್ ನೀಡಿದೆ. ಆದರೆ ಕರ್ನಾಟಕದ ನಿಷ್ಠಾವಂತ ಕಾಂಗ್ರೆಸ್ ನಾಯಕರಿಗೆ ಹಾಗನ್ನಿಸುತ್ತಿಲ್ಲ, ಬದಲಾಗಿ ಕೆಲವರಿಗೆ 'ಇನ್ನು ಮುಂದಾದರೂ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಆಡಳಿತಾರೂಢ ಬಿಜೆಪಿಯ ವಿರುದ್ಧ ನಿಜವಾದ ವಿರೋಧ ಪಕ್ಷವಾಗಿ ಕೆಲಸ ಮಾಡಲು ಕಾಲ ಕೂಡಿ ಬಂದಿದೆ' ಅಂತಲೇ ಭಾಸವಾಗಿದೆ.

ಇದಕ್ಕಿರುವ ಪ್ರಬಲ ಕಾರಣ ಏನೆಂದು ಬಹುತೇಕರಿಗೆ ತಿಳಿದಿದೆ. ಅದು ಬಿಜೆಪಿಯ ಕುಬೇರರಾದ ಬಳ್ಳಾರಿಯ ರೆಡ್ಡಿ ಬ್ರದರ್ಸ್‌ಗೂ ಆಂಧ್ರದ ಕಾಂಗ್ರೆ ಸಿಎಂ ವೈಎಸ್‌ಆರ್‌ಗೂ ಇದ್ದ ಬ್ಯುಸಿನೆಸ್ ಲಿಂಕ್‌ಗಳು. ಇವರಿಬ್ಬರೂ ಪರಸ್ಪರ ಶತ್ರು ಕ್ಯಾಂಪ್‌ಗಳಲ್ಲಿದ್ದರೂ ಸಹ ಪಾಲುದಾರಿಕೆಯಲ್ಲಿ ವ್ಯಾಪಾರ ನಡೆಸಿಕೊಂಡಿದ್ದರು. ಕಬ್ಬಿಣದ ಅದಿರು ಸಾಗಾಣಿಕೆ, ಉಕ್ಕಿನ ಕಾರ್ಖಾನೆ, ಮೀಡಿಯಾ ವ್ಯವಹಾರಗಳೆಂದು ಇವರ ದಂಧೆ ಹತ್ತಾರು ಸಾವಿರ ಕೋಟಿ ರೂಪಾಯಿಗಳದ್ದಾಗಿತ್ತು, ಆಂಧ್ರದ ಅತ್ಯಂತ ಬಲಿಷ್ಠ ಕಾಂಗ್ರೆಸ್ ನಾಯಕನಾಗಿದ್ದ ವೈಎಸ್‌ಆರ್ ಕರ್ನಾಟಕ ಕಾಂಗ್ರೆಸ್‌ನವರು ಬಳ್ಳಾರಿ ರೆಡ್ಡಿಗಳ ವಿರುದ್ಧ ದನಿ ಎತ್ತದಂತೆ ನೋಡಿಕೊಳ್ಳುತ್ತಾ ಬಂದಿದ್ದ. ಇದರ ವಿಪರ್ಯಾಸ ಎಲ್ಲಿಯವರೆಗೂ ಬೆಳೆದಿತ್ತೆಂದರೆ ಈ ಆಂಧ್ರ ಕಾಂಗ್ರೆ ನಾಯಕನ ಬ್ಯುಸಿನೆಸ್ ಪಾರ್ಟನರ್‌ಗಳಾದ ಬಿಜೆಪಿ ರೆಡ್ಡಿಗಳು ಕರ್ನಾಟಕ ಕಾಂಗ್ರೆಸ್ ಅನ್ನು 'ಆಪರೇಷನ್ ಕಮಲ'ದ ಮೂಲಕ ನಿರ್ನಾಮ ಮಾಡುತ್ತಿದ್ದಾಗಲೂ ಇಲ್ಲಿನ ಕಾಂಗ್ರೆಗಳು ಪ್ರತಿರೋಧಿಸಲು ಆಗಿರಲೇ ಇಲ್ಲ. ಕರ್ನಾಟಕ ಕಾಂಗ್ರೆಸ್ ಅನ್ನು ಚಿಂದಿಚಿಂದಿ ಮಾಡುತ್ತಿರುವ ಬಳ್ಳಾರಿ ರೆಡ್ಡಿಗಳೊಂದಿಗೆ ಆಂಧ್ರದ ಕಾಂಗ್ರೆನ ವೈಎಂಆರ್ ಡೀಲು ಕುದುರಿಸಿಕೊಂಡಿದ್ದನ್ನು ಪ್ರಶ್ನಿಸಲೂ ಆಗುತ್ತಿರಲಿಲ್ಲ. ಮತ್ತೊಂದೆಡೆ ಕಾಂಗ್ರೆಸ್ ಹೈಕಮಾಂಡ್ ಕೂಡಾ ವೈಎಸ್‌ಆರ್ ಹೀಗೆ ಡಬಲ್ ಗೇಮ್ ಮಾಡುತ್ತಿದ್ದುದನ್ನು ಎಂದೂ ಪ್ರಶ್ನಿಸಿರಲಿಲ್ಲ, ಇದು ಕಾಂಗ್ರೆಸ್ ಹೈಕಮಾಂಡ್ ಲೆವೆಲ್‌ನಲ್ಲಿ ವೈಎಸ್‌ಆರ್‌ಗಿದ್ದ ಪ್ರಭಾವ ಹಾಗೂ ದುಡ್ಡಿನ ಬಲ ಎಷ್ಟೆಂಬುದಕ್ಕೆ ಸಾಕ್ಷಿಯಾಗಿದೆ. ಆದರೆ ಇದರಿಂದ ಹಾನಿಯಾಗಿದ್ದು ಮಾತ್ರ ಕರ್ನಾಟಕದ ಜನತೆಗೆ.

ಕರ್ನಾಟಕ-ಆಂಧ್ರ ಗಡಿ ವಿವಾದವೇ ಇದಕ್ಕೆ ಸಾಕ್ಷಿಯಾಗಿದೆ. ಗಾಲಿ ರೆಡ್ಡಿಗಳ ಓಬಳಾಪುರಂ ಮೈನ್ಸ್ ಕಂಪನಿಯು ಗಣಿಗಾರಿಕೆ ನಡೆಸಲು ಆಂಧ್ರ ಸರ್ಕಾರದಿಂದ ಲೈಸೆನ್ಸ್ ಪಡೆದಿತ್ತು, ಈ ವಂಚಕರು ಆಂಧ್ರದ ರಾಮದುರ್ಗ ತಾಲ್ಲೂಕಿನಲ್ಲಿ ಗಣಿಗಾರಿಕೆ ಶುರು ಮಾಡಿದವರು ಕರ್ನಾಟಕದ ಗಡಿಯೊಳಕ್ಕೂ ನುಗ್ಗಿ ಒತ್ತುವರಿ ಮಾಡಿಕೊಂಡಿದ್ದರು. ತಮ್ಮ ಸ್ವಾರ್ಥಕ್ಕಾಗಿ ಕರ್ನಾಟಕಕ್ಕೆ ಸೇರಿದ್ದ ಕಿಲೋಮೀಟರು ಗಟ್ಟಲೆ ಅರಣ್ಯ ಪ್ರದೇಶವನ್ನೇ ಆಂಧ್ರಕ್ಕೆ ಸೇರಿದೆಯೆಂಬಂತೆ ಬಿಂಬಿಸಿದ್ದರು. ಈ ಬಗ್ಗೆ ವಿವಾದವಾದರೂ ಯಡಿಯೂರಪ್ಪನ ಬಿಜೆಪಿ ಸರ್ಕಾರ ಉಸಿರೆತ್ತಿರಲಿಲ್ಲ, ರೆಡ್ಡಿಗಳ ಹತ್ತಿರ ಹಫ್ತಾ ವಸೂಲಿ ಮಾಡಿಕೊಂಡ ರಕ್ಷಣಾ ವೇದಿಕೆಯ ನಾರಾಯಣಗೌಡ ಅತ್ತ ತಿರುಗಿಯೂ ನೋಡಲಿಲ್ಲ, ಆಗ ತಿರುಗಿ ಬಿದ್ದವರೆ ಟಪಾಲು ಗಣೇಶ್ ಫ್ಯಾಮಿಲಿಯವರು. ಇವರು ಮೊದಲು ಹೈಕೋರ್ಟ್‌ಗೆ ಕೊನೆಗೆ ಸುಪ್ರೀಂ ಕೋರ್ಟ್‌ಗೂ ದೂರು ನೀಡಿ ಕೇಸ್ ಹಾಕಿದ ಕಾರಣ ಗಡಿ ಬಗ್ಗೆ ಸರ್ವೆ ನಡೆಸುವಂತೆ ಕೋರ್ಟ್ ಆದೇಶಿಸಿತಲ್ಲ



ಇಂಥದ್ದೊಂದು ಸರ್ವೆ ನಡೆಸುವುದಾಗಿ ಕೇಂದ್ರ ಪರಿಸರ ಖಾತೆ ಸಚಿವ ಜೈರಾಂ ರಮೇಶ್ ರಾಜ್ಯಸಭೆಯಲ್ಲೇ ಭರವಸೆ ಕೊಟ್ಟಿದ್ದರು. ಆದರೆ ರೆಡ್ಡಿಗಳ ತಲೆ ಉಳಿಸಲು ಅಲ್ಲೂ ವೈಎಸ್‌ಆರ್ ಕಾಣಿಸಿಕೊಂಡಿದ್ದ. ಕಾಂಗ್ರೆ ಹೈಕಮಾಂಡಿಗೆ ಅದೇನು ಕಪ್ಪಕಾಣಿಕೆ ಕೊಡಿಸಿದನೋ ಏನೋ ಸಚಿವ ಜೈರಾಂ ರಮೇಶ್ 'ಸರ್ವೆ ಅಗತ್ಯವಿಲ್ಲ, ಆಂಧ್ರ ಸರ್ಕಾರ ನಡೆಸಲಿರುವ ಸರ್ವೆಯೇ ಸಾಕು' ಎಂದು ಕೋರ್ಟ್‌ಗೆ ಹೇಳಿಬಿಟ್ಟರು.

ಇದರಿಂದ ಅನ್ಯಾಯವಾಗಿದ್ದು ಕರ್ನಾಟಕಕ್ಕೇನೆ. ಜೊತೆಗೆ ಬಳ್ಳಾರಿ ರೆಡ್ಡಿಗಳ ಮೇಲಿದ್ದ ಗಡಿ ಒತ್ತುವರಿ ಆರೋಪವೂ ಒಂದೇ ಏಟಿಗೆ ಮೂಲೆ ಸೇರಿತ್ತು, ಇದರ ಬಗ್ಗೆ ಕರ್ನಾಟಕ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್ ಆಗಲಿ, ದೇಶಪಾಂಡೆ, ಸಿದ್ಧರಾಮಯ್ಯರಾಗಲಿ ಉಸಿರೇ ಬಿಡಲಿಲ್ಲ, ಕರ್ನಾಟಕದ ಪರವಾಗಿ ಹೈಕಮಾಂಡ್ ಬಳಿ ಮಾತನಾಡಲೂ ಆಗಲೇ ಇಲ್ಲ, ಇಲ್ಲಿ ಒಂದು ನೆನಪಿಡಬೇಕಾದ ವಿಚಾರ ಏನೆಂದರೆ ಈ ಗಡಿ ಒತ್ತುವರಿ ಬಗ್ಗೆ ಕರ್ನಾಟಕ ಕಾಂಗ್ರೆಗಳೇನಾದರೂ ಹೋರಾಟ ನಡೆಸಿದ್ದಿದ್ದರೆ ಬಳ್ಳಾರಿ ರೆಡ್ಡಿಗಳು ರಾಜೀನಾಮೆ ಕೊಡಬೇಕಾಗುತ್ತಿತ್ತು, ಅದರಿಂದ ಬಿಜೆಪಿಗಳಿಗೂ ಮುಖಭಂಗವಾಗುತ್ತಿತ್ತು, ಅಷ್ಟೇ ಅಲ್ಲಾ ಕರ್ನಾಟಕ ಕಾಂಗ್ರೆಸ್‌ನ ವೈರಿಯಾಗಿದ್ದ ಜನಾರ್ದನ ರೆಡ್ಡಿ ದುರ್ಬಲನೂ ಆಗುತ್ತಿದ್ದ, ಆದರೆ ವೈಎಸ್‌ಆರ್‌ನ ಸ್ವಾರ್ಥದಿಂದಾಗಿ ಬಳ್ಳಾರಿ ರೆಡ್ಡಿಗಳು ಬಚಾವಾಗಿಬಿಟ್ಟರು.

ಈ ಬಳ್ಳಾರಿ ರೆಡ್ಡಿಗಳೂ ಹಾಗೂ ವೈಎಸ್‌ಆರ್ ನಡುವಿನ ಅಪವಿತ್ರ ಮೈತ್ರಿ ಯಾವ ಲೆವೆಲ್‌ಗಿತ್ತೆಂದರೆ ಕೇವಲ ಕರ್ನಾಟಕ ಕಾಂಗ್ರೆಸ್ ಮಾತ್ರವಲ್ಲವೆ ಆಂಧ್ರ ಕಾಂಗ್ರೆಸ್ ಅನ್ನು ಇವರಿಬ್ಬರ ಸ್ವಾರ್ಥಕ್ಕಾಗಿ ಬಲಿಕೊಡಲಾಗಿತ್ತು.

ಕಳೆದ ವಿಧಾನಸಭಾ ಎಲೆಕ್ಷನ್ ನಡೆಯುವಾಗ ರಾಯಲಸೀಮಾದ ಅಂಬರ್‌ಪೇಟ್ ಕ್ಷೇತ್ರದಲ್ಲಿ ,ಬಳ್ಳಾರಿ ರೆಡ್ಡಿಗಳ ಗೆಣೆಕಾರ ಕಿಶನ್ ರೆಡ್ಡಿ ಬಿಜೆಪಿ ಹುರಿಯಾಳಾಗಿದ್ದ, ಇವನು ಸುಲಭವಾಗಿ ಗೆಲ್ಲಲು ವೈಎಸ್‌ಆರ್ ಯಾವ ಕುತಂತ್ರ ನಡೆಸಿದನೆಂದರೆ ಕಾಂಗ್ರೆ ಟಿಕೆಟ್ ಅನ್ನು ಫರೀನುದ್ದೀನ್ ಎಂಬ ಅದೃಷ್ಟೇ ಇರದಿದ್ದವನಿಗೆ ಕೊಟ್ಟು ಬಿಜೆಪಿಯ ಕಿಶನ್ ಗೆಲ್ಲುವಂತೆ ಮಾಡಿದ್ದ, ವೈಎಸ್‌ಆರ್ ಹಾಗೂ ಬಳ್ಳಾರಿ ರೆಡ್ಡಿಗಳಿಗೆ ಬಿಜೆಪಿ ಅಥವಾ ಕಾಂಗ್ರೆಸ್‌ಗಳಿಗಿಂತ ತಮ್ಮ ವ್ಯವಹಾರ-ಲಾಭಗಳೇ ಮುಖ್ಯವಾಗಿದ್ದವು. ವೈಎಸ್‌ಆರ್‌ಗೆ ತನ್ನ ಕಾಂಗ್ರೆಸ್ ಪಕ್ಷದ ರಕ್ಷಣೆ ಮುಖ್ಯವಾಗಿದಿದ್ದಿದ್ದರೆ ಬಳ್ಳಾರಿ ರೆಡ್ಡಿಗಳು ಆಪರೇಷನ್ ಕಮಲ ಎಂಬ ಅಸಹ್ಯ ರಾಜಕೀಯ ಮಾಡುತ್ತಿದ್ದಾಗ ಬ್ರೇಕ್ ಹಾಕಬಹುದಿತ್ತಲ್ಲವಾ? ●



ಮಗ ಜಗನ್‌ರೆಡ್ಡಿ

ಹತ್ತಾರು ಹಗರಣ, ಸಾವಿರಾರು ಕೋಟಿ ಕಬಳಿಕೆ

...ಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಎನ್.ಜನಾರ್ದನ ರೆಡ್ಡಿ ಬೇಕಾಬಿಟ್ಟ ...ತು 20 ಮೆಡಿಕಲ್ ಮತ್ತು ಡೆಂಟಲ್ ಕಾಲೇಜುಗಳಿಗೆ ಸಾಮೂಹಿಕವಾಗಿ ...ನೀಡಿದ್ದರಿಂದ ಇಡೀ ರಾಜ್ಯಾದ್ಯಂತ ಮಾತ್ರವಲ್ಲ, ಹೈಕೋರ್ಟಿನಿಂದಲೂ ...ಂಡನೆಗೆ ಒಳಗಾದರು. ಈ ಕಾರಣಕ್ಕಾಗಿ ಅವರು ಮುಖ್ಯಮಂತ್ರಿ ಸ್ಥಾನ ...ಪರಿಸ್ಥಿತಿಯೂ ಎದುರಾಯಿತು. ಇಂಥ ಸಂದರ್ಭದಲ್ಲೇ ತಾನು ...ಕೊಂಡು ಆಂಧ್ರದ ಮುಖ್ಯಮಂತ್ರಿಯಾಗಬೇಕೆಂದು ರಾಜಶೇಖರ್ ರೆಡ್ಡಿ ...ಯತ್ನ ಮಾಡಿದರು. ಆದರೆ ಆಂಧ್ರಪ್ರದೇಶದವರೇ ಆದ ಅಂದಿನ ...ನರಸಿಂಹರಾವ್ ಅವರು ತನ್ನ ಹಳೆಯ ಸ್ನೇಹಿತ ಹಾಗೂ ಕಾಂಗ್ರೆಸ್ ...ವಿಜಯಭಾಸ್ಕರ ರೆಡ್ಡಿಯನ್ನು ರಾಜಶೇಖರ್ ರೆಡ್ಡಿಯ ವಿರುದ್ಧ ಎತ್ತಿಕಟ್ಟಿ ...ಂತ್ರಿ ಮಾಡಿಬಿಟ್ಟರು.

...9ರಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ರಾಜಶೇಖರ್ ರೆಡ್ಡಿಯನ್ನು ...ಂಗ್ರೆಸ್ ನಾಯಕನನ್ನಾಗಿ ಆಯ್ಕೆ ಮಾಡುವುದರೊಂದಿಗೆ ಮತ್ತೆ ಅವರಿಗೆ ...ಶ ಕೂಡಿಬಂತು. ಆದರೆ ಚಂದ್ರಬಾಬು ನೇತೃತ್ವದ ತೆಲುಗುದೇಶಂ ...ಜೆಪಿ ಪಕ್ಷಗಳ ಮೈತ್ರಿಕೂಟ 1999ರ ವಿಧಾನಸಭಾ ಚುನಾವಣೆಯಲ್ಲಿ ...ರಿ ಭಾರಿಸುವುದರೊಂದಿಗೆ ರಾಜಶೇಖರ್ ರೆಡ್ಡಿ ಆಂಧ್ರದ ...ಂತ್ರಿಯಾಗುವ ಕನಸು ಕನಸಾಗಿಯೇ ಉಳಿದುಬಿಟ್ಟಿತು. 2004ರ ...ಭಾ ಚುನಾವಣೆಗಳ ಸಿದ್ಧತೆಯ ಭಾಗವಾಗಿ ರಾಜಶೇಖರ್ ರೆಡ್ಡಿ 2003ರಲ್ಲಿ ...ತ ಸುಮಾರು 2000 ಕಿ.ಮೀ. ಪಾದಯಾತ್ರೆ ಮಾಡಿ ಭಾರಿ ಜನಪ್ರಿಯತೆ ...ಂಡರು. ಎಲ್ಲಕ್ಕಿಂತ ಹೆಚ್ಚಾಗಿ ಈ ಸಂದರ್ಭದಲ್ಲಿ ಮಾವೋವಾದಿ ...ತಳೆದ ರಾಜಕೀಯ ನಿಲುವು ರಾಜಶೇಖರ್ ರೆಡ್ಡಿಯ ರಾಜಕೀಯ ...ನ್ನೇ ಬದಲಿಸಿಬಿಟ್ಟಿತು.

...ಗೆ ಏಳು ವರ್ಷಗಳ ಕಾಲ ಚಂದ್ರಬಾಬು ...ಅಕ್ಷರಶಃ ಮಾವೋವಾದಿ ನಕ್ಸಲರ ಕತ್ತು ...ರು. ಒಂದು ಕಾಲದಲ್ಲಿ ನಕ್ಸಲ್ ಚಳವಳಿಯ ...ಯೆಂದೇ ಗುರುತಿಸಲಾಗಿದ್ದ ಆದಿಲಾಬಾದ್, ...ನಗರ್, ನಿಜಾಮಾಬಾದ್, ವಾರಂಗಲ್, ...ಖಮ್ಮಮ್, ನಲ್ಗೊಂಡ, ಮೆಹಬೂಬ್‌ನಗರ್, ...ತ್ತ ಜಿಲ್ಲೆಗಳನ್ನೊಳಗೊಂಡ ತೆಲಂಗಾಣ ...ದ ಹೆಚ್ಚೂಕಡಿಮೆ ನಕ್ಸಲೀಯರನ್ನು ಸರ್ವನಾಶ ...ಲ್ಲಿ ಚಂದ್ರಬಾಬು ನಾಯ್ಡು ಯಶಸ್ವಿಯಾಗಿದ್ದರು. ...ದಿರೆಡ್ಡಿ, ಎರ್ರಂ ರೆಡ್ಡಿ, ಸಂತೋಷ್ ರೆಡ್ಡಿ, ...ರೇಶ್‌ರಂಥ ನಕ್ಸಲೀಯ ನಾಯಕರಿಂದ ...ಸಾಮಾನ್ಯ ನಕ್ಸಲ್ ಗೆರಿಲ್ಲಾಗಳ ತನಕ ಎಲ್ಲರನ್ನೂ ...ನ್‌ಕೌಂಟರ್‌ಗಳಲ್ಲಿ ಪೊಲೀಸರು ಕೊಂದು ... ಚಂದ್ರಬಾಬು ನಾಯ್ಡು ಮಾರ್ಗದರ್ಶನದಲ್ಲಿ ...ದು ಭೀಕರ ದಮನ ಕಾರ್ಯಾಚರಣೆಗಳನ್ನು ...ದ್ದರಿಂದ ನಕ್ಸಲೀಯರ ಜೊತೆಗೆ ಸಾಮಾನ್ಯ ...ಸಾವಿರಾರು ಸಂಖ್ಯೆಯಲ್ಲಿ ಬಲಿಯಾದರು. ...ಂಧ್ರಪ್ರದೇಶ ಅಕ್ಷರಶಃ ಪೊಲೀಸ್ ರಾಜ್ಯವಾಗಿ ...ತ್ತು.

...ಸಮಯದಲ್ಲಿ ನಕ್ಸಲೀಯರು ಚಂದ್ರಬಾಬು ...ಮೇಲೆ ದಾಳಿ ಮಾಡಿ ಕೊಂದು ಹಾಕಲು ...ವಿಫಲರಾದರು. ನಕ್ಸಲೀಯರ ಬಾಂಬ್ ...ಲ್ಲಿ ಕೂದಲೆಳೆಯ ಅಂತರದಲ್ಲಿ ಬಚಾವಾದ ಚಂದ್ರಬಾಬು ನಾಯ್ಡು ...ಂಡ ಹುಲಿಯಂತಾದರು. ಬರುವ ಚುನಾವಣೆಯಲ್ಲಿ ತಮ್ಮ ಪಕ್ಷವನ್ನು ...ಕಾರಕ್ಕೆ ತಂದರೆ ಆದಾಗಲೇ ಅರ್ಧ ಸರ್ವನಾಶವಾಗಿದ್ದ ನಕ್ಸಲೀಯರನ್ನು ...ವಾಗಿ ಹೊಸಕಿ ಹಾಕುವುದಾಗಿ ಘೋಷಿಸಿದರು. ಇದು ರಾಜ್ಯದ ...ಮತ್ತಷ್ಟು ಬೆಚ್ಚಿಬೀಳಿಸಿತು. ಈಗಾಗಲೇ ಪೊಲೀಸ್ ರಾಜ್ಯವಾಗಿರುವ ...ಂದ್ರಬಾಬು ಅಧಿಕಾರಕ್ಕೆ ಬಂದರೆ ಮತ್ತಷ್ಟು ರಕ್ತಸಿಕ್ತಗೊಳ್ಳುತ್ತದೆ ಎಂದು ...ಸಿ. ಈಗಾಗಲೇ ತಮ್ಮ ಒಂದು ಭದ್ರ ನೆಲೆಯಾಗಿದ್ದ ತೆಲಂಗಾಣವನ್ನು ...ಕಿತ್ತುಕೊಂಡ ಚಂದ್ರಬಾಬು ಮತ್ತೆ ಅಧಿಕಾರಕ್ಕೆ ಬಂದರೆ ತಮ್ಮ ಇನ್ನೆರಡು ...ಗಳಾಗಿರುವ ನಲ್ಲಮಲ ಅರಣ್ಯ ಪ್ರದೇಶ ಮತ್ತು ಆಂಧ್ರ-ಒರಿಸ್ಸಾ ಗಡಿ ...ಯಿಂದಲೂ ತಮ್ಮನ್ನು ಹೊರಗಟ್ಟುತ್ತಾರೆಂಬುದು ನಕ್ಸಲೀಯರಿಗೂ ...ಸಿಯಾಯಿತು. ಈ ಹಿನ್ನೆಲೆಯಲ್ಲಿ ಚಂದ್ರಬಾಬು ನಾಯ್ಡುವನ್ನು ಬರುವ ...ಯಲ್ಲಿ ಸೋಲಿಸಿ ಮನೆಗೆ ಕಳಿಸದೇ ತಮಗೆ ಬೇರೆ ದಾರಿಯಿಲ್ಲ ...ನಕ್ಸಲೀಯರು ಮತ್ತು ಜನಸಾಮಾನ್ಯರು ಭಾವಿಸಿದರು.

...ಹೊತ್ತಿನಲ್ಲಿ ರಾಜಶೇಖರ್ ರೆಡ್ಡಿ ತಾವು ಚುನಾವಣೆಯಲ್ಲಿ ಗೆದ್ದು ...ಿದರೆ ನಕ್ಸಲೀಯರೊಂದಿಗೆ 'ಶಾಂತಿ ಮಾತುಕತೆ' ನಡೆಸಿ ಸಮಸ್ಯೆಯನ್ನು ...ತವಾಗಿ ಪರಿಹರಿಸುವುದಾಗಿ ಘೋಷಿಸಿದರು. ನಕ್ಸಲೀಯರಿಗೂ ಇದೇ ...ಕತ್ತು ಹಿಸುಕುತ್ತಿದ್ದ ಚಂದ್ರಬಾಬು ತೊಲಗಬೇಕಿತ್ತು. ಈ ಹಿನ್ನೆಲೆಯಲ್ಲಿ ...ವಿಧಾನಸಭಾ ಚುನಾವಣೆಯಲ್ಲಿ ಮೊಟ್ಟ ಮೊದಲ ಬಾರಿಗೆ ನಕ್ಸಲೀಯರು ...ನಾವಣಾ ಕಾರ್ಯತಂತ್ರ ಬದಲಿಸಿದರು. ಈ ಸಂಸದೀಯ ವ್ಯವಸ್ಥೆಯಲ್ಲಿ ...ದ ಅವರು ಪ್ರತೀ ಚುನಾವಣಾ ಸಂದರ್ಭದಲ್ಲೂ 'ಚುನಾವಣಾ ...ಕ್ಕೆ ಕರೆಕೊಡುತ್ತಿದ್ದರು. ಆದರೆ, ಈ ಬಾರಿ ಅದಕ್ಕೆ ಭಿನ್ನವಾಗಿ 'ಟಿಡಿಪಿ-ಬಿಜೆಪಿ ... - ಪ್ರತಿಪಕ್ಷಗಳನ್ನು ಸೋಲಿಸಿ' ಎಂಬ ಕರೆ ಕೊಟ್ಟರು. ಈ ಘೋಷಣೆಯನ್ನು ...ಹಳ್ಳಿಗೆ ಬೀದಿ ಬೀದಿಗೆ ಪ್ರಚಾರಪಡಿಸಿದರು. ಅಂತಿಮವಾಗಿ ಈ ...ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗುದೇಶಂ ಪಕ್ಷವನ್ನು ಸೋಲಿಸ ...ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸಬೇಕು ಎಂಬ ಅರ್ಥವನ್ನು ಪಡೆದುಕೊಂಡು ...ಿತು.





ಮಾವೋವಾದಿ ನಕ್ಸಲರ ದಳಗಳು ತೆಲುಗುದೇಶಂ ಮತ್ತು ಬಿಜೆಪಿ ಸ್ಪರ್ಧಿಗಳು ಚುನಾವಣಾ ಪ್ರಚಾರಕ್ಕೆ ಹಳ್ಳಿಗಳಿಗೆ ಹೋಗದಂತೆ ಓಡಿಸತೊಡಗಿದರು. ಕಾಂಗ್ರೆಸ್ ಅಭ್ಯರ್ಥಿಗಳ ಬೆಂಬಲಕ್ಕೆ ನಿಂತರು. ಅಂತಿಮವಾಗಿ ರಾಜಶೇಖರ್ ರೆಡ್ಡಿ ನೇತೃತ್ವದ ಕಾಂಗ್ರೆಸ್ ಭಾರಿ ಜಯಭೇರಿ ಬಾರಿಸಿ ಆಂಧ್ರದಲ್ಲಿ ಅಧಿಕಾರಕ್ಕೇರಿತು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನಕ್ಸಲೀಯರೇ ರಾಜಶೇಖರ ರೆಡ್ಡಿಯನ್ನು ಮುಖ್ಯಮಂತ್ರಿ ಕುರ್ಚಿಯ ಮೇಲೆ ಕೂರಿಸಿದರು.

ರಾಜಶೇಖರ್ ರೆಡ್ಡಿ ಅಧಿಕಾರಕ್ಕೇರುತ್ತಿದ್ದಂತೆಯೇ ನಕ್ಸಲೀಯರೊಂದಿಗೆ ಮಾತುಕತೆಗೆ ಮುಂದಾದರು. ಆದರೆ, ಪೊಲೀಸರು ಬಂದೂಕಿನ ಮೂಲಕವೇ ನಕ್ಸಲೀಯರನ್ನು ಹೊಸಕಿ ಹಾಕುವುದಕ್ಕೆ ಬಯಸಿದ್ದರಿಂದ ಮಾತುಕತೆ ನಡೆಸದಂತೆ ರಾಜಶೇಖರ್ ರೆಡ್ಡಿಯ ಮೇಲೆ ಒತ್ತಡ ಹೇರಲಾರಂಭಿಸಿದರು. ರಕ್ತಸಿಕ್ತ ರಾಜಕಾರಣದಲ್ಲೇ ಬೆಳೆದ ರಾಜಶೇಖರ್ ರೆಡ್ಡಿ ಕೂಡ ಚುನಾವಣಾ ಪೂರ್ವದಲ್ಲಿ ಮಾಡಿದ್ದ ವಾಗ್ದಾನವನ್ನು ಉಳಿಸಿಕೊಂಡೆ ಎನ್ನಿಸಿಕೊಳ್ಳುವುದಷ್ಟನ್ನೇ ಬಯಸಿದ್ದರೆ ಹೊರತು ನಿಜಕ್ಕೂ ಸಮಸ್ಯೆಯನ್ನು ಮಾತುಕತೆಯ ಮೂಲಕ ಬಗೆಹರಿಸುವುದಕ್ಕೆ ಮನಸ್ಸಿರಲಿಲ್ಲ. ಹೀಗಾಗಿ, ಅರಣ್ಯದ ಅಡಗುದಾಣಗಳಿಂದ ಹೊರಬಂದ ರಾಮಕೃಷ್ಣ ಸುಧಾಕರ್ ಮತ್ತಿತರ ನಕ್ಸಲೀಯ ನಾಯಕರೊಂದಿಗೆ ರಾಜಶೇಖರ್ ರೆಡ್ಡಿ ನಾಮಕಾವಸ್ತೆ ಮಾತುಕತೆ ನಡೆಸಿದರು. ನಕ್ಸಲೀಯರು ಇಟ್ಟ ಯಾವ ಪುಟ್ಟ ಬೇಡಿಕೆಯನ್ನೂ ಬಗೆಹರಿಸದೇ ಮಾತುಕತೆಯಿಂದ ಹಿಂದೆಸರಿದು ನಕ್ಸಲೀಯರನ್ನು ದಮನ ಮಾಡುವುದಕ್ಕೆ ಪೊಲೀಸರನ್ನು ಬಿಟ್ಟರು. ಕೆಲವೇ ತಿಂಗಳಲ್ಲಿ ರಾಜಶೇಖರ್ ರೆಡ್ಡಿಗೂ ಚಂದ್ರಬಾಬು ನಾಯ್ಡುಗೂ ಯಾವುದೇ ವ್ಯತ್ಯಾಸವಿಲ್ಲವೆಂಬಂತೆ ಆಂಧ್ರ ರಾಜಕಾರಣ ಮತ್ತೆ ರಕ್ತಸಿಕ್ತಗೊಂಡಿತು. ಸುಳ್ಳು ಎನ್‌ಕೌಂಟರ್‌ಗಳಲ್ಲಿ ನಕ್ಸಲೀಯರನ್ನು, ನಕ್ಸಲೀಯ ಬೆಂಬಲಿಗರನ್ನು ಜನಸಾಮಾನ್ಯರನ್ನೂ ಪ್ರತಿನಿತ್ಯ ಕೊಂದು ಹಾಕುವುದು ಮಾಮೂಲಿಯಾಗಿಬಿಟ್ಟಿತು. ಕೆಲವೇ ತಿಂಗಳ ಸಾಪೇಕ್ಷ ಶಾಂತಿಯ ನಂತರ ಆಂಧ್ರಪ್ರದೇಶ ತನ್ನ ಕೊಲೆಸುಲಿಗೆಗಳ 'ಸಹಜ ಸ್ಥಿತಿ'ಗೆ ಮರಳಿತು.

ರಾಜಶೇಖರ್ ರೆಡ್ಡಿ ಮುಖ್ಯಮಂತ್ರಿಯಾದ ತಕ್ಷಣವೇ ಮಾಡಿದ ಇನ್ನೊಂದು ಕೆಲಸ ಎಂದರೆ ತನ್ನ ಎದುರಾಳಿಯಾಗಿದ್ದ ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗುದೇಶಂ ಪಕ್ಷವನ್ನು ಬುಡಸಮೇತವಾಗಿ ನಿರ್ನಾಮ ಮಾಡುವ ಘನಂದಾರಿ ಕೆಲಸಕ್ಕೆ ಕೈ ಹಾಕಿದ್ದು. ಈ ಹಿಂದೆ ಚಂದ್ರಬಾಬು ಅಧಿಕಾರದಲ್ಲಿದ್ದಾಗ ತೆಲುಗುದೇಶಂ ಗೂಂಡಾಗಳು ಕಾಂಗ್ರೆಸ್ ಕಾರ್ಯಕರ್ತರನ್ನು, ಎಮ್ಮೆಲ್ಲೆಗಳನ್ನು, ಎಂಪಿಗಳನ್ನು ನೂರಾರು ಸಂಖ್ಯೆಯಲ್ಲಿ ಕಂಡಕಂಡಲ್ಲಿ ಕೊಂದು ಹಾಕಿ ಇಡೀ ಪಕ್ಷವನ್ನೇ ದುರ್ಬಲಗೊಳಿಸಿಬಿಟ್ಟಿದ್ದರು. ಈಗ ರಾಜಶೇಖರ್ ರೆಡ್ಡಿ ಮುಖ್ಯಮಂತ್ರಿಯಾದ ಮೇಲೆ ಅದನ್ನು ಬಡ್ಡಿ ಸಮೇತವಾಗಿ ತೀರಿಸಿದರು. ಇಡೀ ಆಂಧ್ರದಾದ್ಯಂತ, ಅದರಲ್ಲೂ ವಿಶೇಷವಾಗಿ ರಾಯಲಸೀಮೆಯಾದ್ಯಂತ, ದಿನಕ್ಕೆರಡರಂತೆ ತೆಲುಗುದೇಶಂ ಕಾರ್ಯಕರ್ತರ ಹೆಣ ಉರುಳತೊಡಗಿದವು. ಹಳ್ಳಿ ಮಟ್ಟದ ಚಿಕ್ಕ ನಾಯಕನಿಂದ ಹಿಡಿದು ಪರಿಟಾಲ ರವಿಯಂಥ ರಾಜ್ಯ ಮಟ್ಟದ ನಾಯಕರ ತನಕ ನೂರಾರು ಸಂಖ್ಯೆಯಲ್ಲಿ ತೆಲುಗುದೇಶಂ ನಾಯಕರನ್ನು ರಾಜಶೇಖರ್ ರೆಡ್ಡಿಯ ಗೂಂಡಾ ಗ್ಯಾಂಗ್ ಬಲಿತೆಗೆದುಕೊಂಡಿತು. ಯಾರ ಮೇಲೂ ಸರಿಯಾದ ಕೇಸುಗಳಾಗದಂತೆ ರಾಜಶೇಖರ್ ರೆಡ್ಡಿ ನೋಡಿಕೊಂಡರು.

ಹಳ್ಳಿ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಚಂದ್ರಬಾಬು ನಾಯ್ಡುರ ತೆಲುಗುದೇಶಂ ಅಕ್ಷರಶಃ ಛಿದ್ರವಾಗಿ ಹೋಯಿತು. ಕೆಲವರು ರಾಜಶೇಖರ್ ರೆಡ್ಡಿಯ ಗೂಂಡಾ ಗ್ಯಾಂಗ್‌ಗಳಿಗೆ ಬಲಿಯಾದರೆ, ಅಳಿದುಳಿದವರು ಜೀವಭಯದಿಂದ ಕಾಂಗ್ರೆಸ್ ಪಕ್ಷವನ್ನು ಸೇರಿಕೊಂಡು ಬಚಾವಾದರು. ಚಂದ್ರಬಾಬು ನಾಯ್ಡುಗೆ ಎಂಥ ಪರಿಸ್ಥಿತಿ ಎದುರಾಗಿತ್ತೆಂದರೆ ಪೊಲೀಸರು – ರಾಜಶೇಖರ್ ರೆಡ್ಡಿ ಇಬ್ಬರೂ ಸೇರಿಕೊಂಡು ತಮ್ಮ ತೆಲುಗುದೇಶಂ ಪಕ್ಷವನ್ನು ನಾಶ ಮಾಡುತ್ತಿದ್ದಾರೆಂದು ಗೋಗರೆಯಲಾರಂಭಿಸಿದರು. "ನಾನು ಮುಖ್ಯಮಂತ್ರಿಯಾಗಿದ್ದಾಗ ನೀವು ಕೇಳಿದ ಕಡೆಗೆಲ್ಲಾ ಟ್ರಾನ್ಸ್‌ಫರ್ ಮಾಡಿದ್ದೆ. ನಿಮಗೆ ಬೇಕಾದ ಸೌಲಭ್ಯ ಸೌಕರ್ಯ, ಅಧಿಕಾರಗಳೆಲ್ಲವನ್ನೂ ಕೊಟ್ಟಿದ್ದೆ. ಈಗ ನನಗೆ ಅಧಿಕಾರ ಹೋಗಿದೆ ಎಂದು ನನ್ನ ವಿರುದ್ಧವೇ ತಿರುಗಿಬೀಳುವುದು ಎಷ್ಟರಮಟ್ಟಿಗೆ ಸರಿ?" ಎಂದು ಪೊಲೀಸ್ ಅಧಿಕಾರಿಗಳ ಎದುರು ಗೋಗರೆಯುತ್ತಿದ್ದರು.

ತನ್ನ ಅಧಿಕಾರಾವಧಿಯಲ್ಲಿ ರಾಜಶೇಖರ್ ರೆಡ್ಡಿ ಮಾಡಿದ ಇನ್ನೊಂದು ಮಹತ್ವಪೂರ್ಣ ಕೆಲಸ ಎಂದರೆ ಇಡೀ ಆಂಧ್ರ ಪ್ರದೇಶವನ್ನು ವಿಶ್ವಬ್ಯಾಂಕ್‌ಗೆ ಒತ್ತೆಯಿಟ್ಟದ್ದು. ಚಂದ್ರಬಾಬು ನಾಯ್ಡು ಪ್ರಾರಂಭಿಸಿದ ಈ ಕೆಲಸವನ್ನು ರಾಜಶೇಖರ್ ರೆಡ್ಡಿ ಯಶಸ್ವಿಯಾಗಿ ಮುಂದುವರೆಸಿದರು. ಅಮೆರಿಕ ಹಾಕಿದ ಶರತ್ತುಗಳೆಲ್ಲವನ್ನೂ ಒಪ್ಪಿಕೊಂಡು ಸಾಲದ ಮೇಲೆ ಸಾಲ ತಂದು ಇಡೀ ರಾಜ್ಯ ಅಮೆರಿಕ ಮತ್ತು ವಿಶ್ವಬ್ಯಾಂಕ್ ಅಡಿಯಾಳಾಗುವಂತೆ ಮಾಡಿದರು. ಹಾಗಾಗಿಯೇ, ಅಂದಿನ ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್ ಭಾರತಕ್ಕೆ ಬಂದಾಗ ಭೇಟಿ ಕೊಟ್ಟ ಎರಡೇ ನಗರಗಳೆಂದರೆ ಒಂದು ನವದೆಹಲಿ, ಇನ್ನೊಂದು ಹೈದರಾಬಾದ್.

ರಾಜಶೇಖರ್ ರೆಡ್ಡಿ ಕೂಡ ಭಾರತದ ಉಳಿದೆಲ್ಲ ರಾಜಕಾರಣಿಗಳಂತೆಯೇ ಮಹಾ ಭ್ರಷ್ಟಾಚಾರಿ. ದೊರೆತಿದ್ದ ಅಧಿಕಾರವನ್ನು ಬಳಸಿಕೊಂಡು ತನ್ನ ವೈಯಕ್ತಿಕ ಸಾಮ್ರಾಜ್ಯವನ್ನು ಬೆಳೆಸಿಕೊಂಡವರು. ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಪಾಸ್ತಿಯನ್ನು ಮಾಡಿಕೊಂಡವರು. ರಾಜಧಾನಿ ಹೈದರಾಬಾದನ್ನೂ ಒಳಗೊಂಡಂತೆ ಆಂಧ್ರದ ಇನ್ನಿತರ ನಗರಗಳಲ್ಲಿ, ಬೆಂಗಳೂರಿನಲ್ಲಿ ಸಾವಿರಾರು ಕೋಟಿ ಬೆಲೆಬಾಳುವ ಭೂಮಿಯನ್ನು ನುಂಗಿದವರು.


ಇದು ರಾಜಶೇಖರ್ ರೆಡ್ಡಿಯ ಇನ್ನೊಂದು ಮುಖ. ರಕ್ತಸಿಕ್ತ ಮುಖ. ನಮ್ಮ ಮಾಧ್ಯಮಗಳು ಮರೆಮಾಚಿಟ್ಟ ಮುಖ.

ಬಹುವರ್ಷಗಳ ಕಾಲ ಬೆಂಗಳೂರಿನ ಎಚ್.ಎಸ್.ಆರ್.ಲೇಔಟ್‌ನ 9ನೇ ಕ್ರಾಸಿನ ತನ್ನ ಸ್ವಂತ ಬಂಗಲೆಯಲ್ಲಿದ್ದ ವೈಎಸ್‌ಆರ್ ಪುತ್ರ ಜಗನ್‌ರೆಡ್ಡಿ ಅಪ್ಪನ ರಾಜಕೀಯ ಪ್ರಭಾವದಿಂದ ಹಲವಾರು ಕಂಪೆನಿಗಳನ್ನು ಸ್ಥಾಪಿಸಿದ್ದಾನೆ. ಕರ್ನಾಟಕದಲ್ಲೇ ಆತ ಮೂರು ಜಲವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದ. ವೈಎಸ್‌ಆರ್ ಮುಖ್ಯಮಂತ್ರಿಯಾಗುವ ಮೊದಲು 41 ಲಕ್ಷವಿದ್ದ ಜಗನ್‌ರೆಡ್ಡಿಯ ಆಸ್ತಿ ಇತ್ತೀಚಿನ ಎಂ.ಪಿ.ಚುನಾವಣೆ ವೇಳೆಗೆ ಅಧಿಕೃತವಾಗಿಯೇ ಸಾವಿರಕೋಟಿಗಳನ್ನು ದಾಟಿತ್ತು. ಚಂದ್ರಬಾಬು ನಾಯ್ಡು ಪ್ರಕಾರ ಜಗನ್ ಆಸ್ತಿ 10 ಸಾವಿರ ಕೋಟಿ! ಈಗಾತ ಕಡಪಾದ ಎಂ.ಪಿ.ಕೂಡಾ.

ಬಳ್ಳಾರಿಯ ರೆಡ್ಡಿಗಳೊಂದಿಗೂ ವ್ಯವಹಾರದಲ್ಲಿ ಪಾಲುದಾರಿಕೆ ಹೊಂದಿರುವ ಜಗನ್‌ರೆಡ್ಡಿ ಬಳ್ಳಾರಿ ರೆಡ್ಡಿಗಳ ಅಕ್ರಮ ಗಣಿ ಒತ್ತುವರಿಯನ್ನು ಪೋಷಿಸಿಕೊಂಡು ಬಂದಿದ್ದಾನೆ. ಕಳಂಕಿತ ಸತ್ಯಂ ಮತ್ತು ಮೈತಾಸ್ ಕಂಪೆನಿಗಳಲ್ಲೂ ಜಗನ್‌ರೆಡ್ಡಿಯ ಪಾಲಿತ್ತು. ಆತನ ಮೂಲಕವೇ ಮೈತಾಸ್ ಕಂಪೆನಿ ಹೈದ್ರಾಬಾದಿನ ಮೆಟ್ರೊ ರೈಲು ಸೇರಿದಂತೆ ಹಲವಾರು ಬೃಹತ್ ಕಾಮಗಾರಿಗಳನ್ನು ಗಿಟ್ಟಿಸಿತ್ತು. ಸತ್ಯಂ, ಮೈತಾಸ್ ಕಂಪೆನಿಗಳ ನೆರವಿನಿಂದ ಜಗನ್ ತನ್ನ ಬ್ಲ್ಯಾಕ್‌ಮನಿಯನ್ನು ವೈಟ್ ಮಾಡಿಕೊಂಡ ಆರೋಪವನ್ನು ಹೊತ್ತಿದ್ದಾನೆ.

2004ರಲ್ಲಿ ವೈಎಸ್‌ಆರ್ ಮೊದಲಬಾರಿಗೆ ಮುಖ್ಯಮಂತ್ರಿಯಾದ ನಂತರ, ಸಂಡೂರ್ ಪವರ್ ಲಿಮಿಟೆಡ್ ಎಂಬ ಸಣ್ಣ ಕಂಪೆನಿಯನ್ನು ಜಗನ್ ಖರೀದಿಸಿದ. ಮಾರಿಷಸ್‌ನ 2I ಕ್ಯಾಪಿಟಲ್ ಮತ್ತು ಫ್ಲರಿ ಎಂಬ ಕಂಪೆನಿಗಳಿಗೆ 61 ರೂ. ಮುಖಬೆಲೆಯ ಷೇರುಗಳನ್ನು ಮಾರಿದ ಜಗನ್ 125 ಕೋಟಿ ರೂ. ಸಂಗ್ರಹಿಸಿದ್ದ. ಷೇರು ಕಾನೂನುಗಳನ್ನು ಮೀರಿ ವ್ಯವಹಾರ ನಡೆಸಿದ್ದ. ಸಂಡೂರು ಪವರ್ ಕಂಪೆನಿ ಹಲವಾರು ಕಂಪೆನಿಗಳನ್ನು ಹುಟ್ಟುಹಾಕುತ್ತಾ ಬಂದಿತು. ಕ್ಲಾಸಿಕ್ ರಿಯಾಲಿಟಿ, ಕಾರಾಮೆಲ್, ಏಷ್ಯಾ, ಭವತಿ ಸನಿಧಿ ಎಸ್ಟೇಟ್ಸ್ ಮತ್ತು ಹರೀಶ್ ಇನ್‌ಫ್ರಾ ಕಂಪೆನಿಗಳನ್ನು ಸ್ಥಾಪಿಸುವ ಮೂಲಕ ಆಂಧ್ರ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಹಲವಾರು ಪ್ರಾಜೆಕ್ಟ್‌ಗಳನ್ನು ಜಗನ್ ಸಲೀಸಾಗಿ ಪಡೆಯುತ್ತಾ ಬಂದ. ರಾಮೋಜಿರಾವ್‌ನ ಈ ನಾಡು ಪತ್ರಿಕೆ, ಈಟಿವಿ ಚಾನೆಲ್‌ಗಳನ್ನು ಬಗ್ಗು ಬಡಿಯಲು ಸಾಕ್ಷಿ ಎಂಬ ದೈನಿಕ, ಸಾಕ್ಷಿ ಎಂಬ ಟಿವಿ ಚಾನೆಲ್ ಆರಂಭಿಸಿದ ಜಗನ್ ಸರ್ಕಾರದಿಂದ ಸಾವಿರಾರು ಕೋಟಿಗಳ ಜಾಹೀರಾತು ಗಿಟ್ಟಿಸುತ್ತಿದ್ದಾನೆ.

2007ರಲ್ಲಿ ಹೈದ್ರಾಬಾದ್ ಮೂಲದ ರಘುರಾಮ್ ಸಿಮೆಂಟ್ ಕಂಪೆನಿಗೆ ಕಡಪಾ ಜಿಲ್ಲೆಯ ತಿಪ್ಪಾಲೂರು, ನಲ್ಲಿಂಗಪಲ್ಲಿಯಲ್ಲಿ 487.20 ಎಕರೆ ಭೂಮಿ ಕೊಡಿಸಿದ್ದು ಇದೇ ಜಗನ್. ಈತ ಆ ಕಂಪೆನಿಯ ಡೈರೆಕ್ಟರ್‌ಗಳಲೊಬ್ಬ! ಈ ವ್ಯವಹಾರದಲ್ಲೂ ಜಗನ್ ಸಾಕಷ್ಟು ದುಡ್ಡು ಮಾಡಿದ್ದಲ್ಲದೇ, ರಘುರಾಮ್ ಸಿಮೆಂಟ್ ಕಂಪೆನಿಯಿಂದ ಸಾಕಷ್ಟು ಲಾಭ ಮಾಡಿಕೊಳ್ಳುತ್ತಾ ಬಂದ.



ವೈಎಸ್‌ಆರ್ ತಂದೆ ರಾಜಾ ರೆಡ್ಡಿಯ ಕಾಲದಿಂದಲೂ ಸರ್ಕಾರಿ ಭೂಮಿಗಳನ್ನು ಒತ್ತುವರಿ ಮಾಡಿಕೊಂಡು ಬರಲಾಗುತ್ತಿದ್ದು ಜಗನ್ ಅದನ್ನೀಗ ಮುಂದುವರೆಸಿದ್ದಾನೆ. ಸದ್ಯ 2000 ಎಕರೆಗಿಂತಲೂ ಹೆಚ್ಚಿನ ಭೂಮಿ ಈ ಫ್ಯಾಮಿಲಿ ಹಿಡಿತದಲ್ಲಿದೆ.

ಒಂದು ಕಡೆ ಇಡುಪುಲಪಾಯ ಎಸ್ಟೇಟ್ ಹೆಸರಲ್ಲಿ ಕದ್ದಿದ್ದ 310 ಎಕರೆ ಭೂಮಿಯನ್ನು ಸರ್ಕಾರಕ್ಕೆ ವಾಪಸ್ ಮಾಡಿದ ವೈಎಸ್‌ಆರ್, ಇನ್ನೊಂದು ಕಡೆ ಜಗನ್ ಮೂಲಕ ನೂರಾರು ಎಕರೆಗಳ ಭೂಮಿಯನ್ನು ವ್ಯವಹಾರದ ಹೆಸರಲ್ಲಿ ಕಡಿಮೆ ಬೆಲೆಯಲ್ಲಿ ಗಿಟ್ಟಿಸುತ್ತಾ ಬಂದರು.

ಜಗನ್ ಮತ್ತು ಇತರ ವೈಎಸ್‌ಆರ್ ಬೆಂಬಲಿಗರ ಭೂ ಕಬಳಿಕೆಯ ವಿರುದ್ಧ ಕಮ್ಯುನಿಸ್ಟ್ ಪಕ್ಷಗಳು ಹೋರಾಡುತ್ತ ಬಂದಿವೆ. ಬಡವರಿಗೆ ಭೂ ವಿತರಣೆ ಮಾಡಿ ಎಂದು ಕಳೆದ ವರ್ಷ ಖಮ್ಮಮ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರ ಮೇಲೆ ಅನಗತ್ಯವಾಗಿ ಗೋಲಿಬಾರ್ ಮಾಡಿಸಿ ಎಂಟು ಜನರನ್ನು ಬಲಿತೆಗೆದುಕೊಂಡಿದ್ದರು ಅಪ್ಪ-ಮಗ.

1990 ರಲ್ಲಿ ಹೈದ್ರಾಬಾದ್‌ನಲ್ಲಿ ನಡೆದ ಭೀಕರ ಕೋಮುಗಲಭೆ ಹಿಂದೆ ಜಗನ್ ಕೈವಾಡ ಇರುವ ಆರೋಪಗಳೂ ಕೇಳಿಬಂದಿದ್ದವು. ಈಗ ಅಪ್ಪನ ಶವಸಂಸ್ಕಾರಕ್ಕೂ ಮುನ್ನವೇ ಸಿ.ಎಂ ಆಗುವ ಕನಸು ಕಾಣುತ್ತಿದ್ದಾನೆ.

ಹುಟ್ಟುಕಳ್ಳ ಸತ್ಯಮೂರ್ತಿಯ ದೈವಭಕ್ತಿ ನಾಟಕ

ಮಲೆನಾಡಿನ ಕೊಪ್ಪ ತಾಲ್ಲೂಕಿನ ದೊರ್‌ಗಲ್ ನವನಾದ ಸತ್ಯಮೂರ್ತಿ ಫುಲ್ ಟೈಂ ಕಳ್ಳ, ಜೊತೆಗೆ ಪಾರ್ಟ್ ಟೈಂ ದೈವಭಕ್ತ ಕೂಡ. ಹಿರಿಯ ಕೆಎಎಸ್ ಆಫೀಸರ್ ಆಗಿರುವ ಸತ್ಯಮೂರ್ತಿ ಎಲ್ಲೆಲ್ಲಿ ಕೆಲಸ ಮಾಡಿದ್ದಾನೋ ಅಲ್ಲೆಲ್ಲಾ ಒಂದಲ್ಲಾ ಒಂದು ಹಗರಣ ಮಾಡಿಕೊಂಡಿದ್ದಾನೆ. ಇವನೊಮ್ಮೆ ಕೆ.ಎಚ್. ರಂಗನಾಥ್ ಅರಣ್ಯ ಮಂತ್ರಿಯಾಗಿದ್ದಾಗ ಅವರ ಆಪ್ತ ಕಾರ್ಯದರ್ಶಿಯಾಗಿದ್ದ. ಆಗ ಸಿಕ್ಕ ಅಧಿಕಾರ ಚಲಾಯಿಸಿ ತನ್ನ ಊರಿಗೆ ಸಮೀಪವಿರುವ ಚೌಡಿಬನ ಎಂಬ ಗ್ರಾಮದೇವರ ಸ್ಥಳದ ಮೇಲೆ ಕಾಗೆ ಕಣ್ಣು ಹಾಕಿದ. ಆ ಸಣ್ಣ ದೇವಸ್ಥಾನ ಅಭಿವೃದ್ಧಿ ಮಾಡುತ್ತೇನೆ ಅಂತ ಹೇಳಿಕೊಂಡು ಅರಣ್ಯ ಇಲಾಖಾ ಅಧಿಕಾರಿಗಳಿಂದ ಕಾಸು ಕಿತ್ತ. ತನಗೆ ಬೇಕಾದವರನ್ನೆಲ್ಲಾ ಸೇರಿಸಿ ಒಂದು ಕಮಿಟಿ ಮಾಡಿಕೊಂಡ. ಮತ್ತಿಮನೆ ರಸ್ತೆಯಲ್ಲಿ ಅರಣ್ಯ ಇಲಾಖೆಗೆ ಸೇರಿರುವ ೮ ಎಕರೆ ಜಾಗವನ್ನು ದೇವಸ್ಥಾನದ ಉದ್ದೇಶಕ್ಕಾಗಿ ಡಿನೋಟಿಫೈ ಮಾಡಿಸಲು ಈಗ ಲಾಬಿ ನಡೆಸುತ್ತಿದ್ದಾನೆ. ಈ ಚೌಡಿಬನ ಎಂದಿದ್ದ ಸ್ಥಳವನ್ನೇ ಚಾಮುಂಡೇಶ್ವರಿ ಕ್ಷೇತ್ರ ಎಂದು ಬದಲಾಯಿಸಿ ಬೃಹತ್ ಕಲ್ಲಿನ ದೇವಾಲಯ ಎಬ್ಬಿಸುತ್ತಿದ್ದಾನೆ ಸತ್ಯಮೂರ್ತಿ. ಅಲ್ಲೀಗಾಗಲೇ ಒಂದು ಕೋಟಿ ರೂಪಾಯಿಯಷ್ಟು ಬೆಲೆಯ ಕಲ್ಲುಗಳು, ಗ್ರಾನೈಟ್, ಸಿಮೆಂಟು, ಕಬ್ಬಿಣ ಬಂದು ಬಿದ್ದಿದೆ. ಇದೆಲ್ಲಾ ತನ್ನ ಕೈಕೆಳಗಿನ ನೌಕರರಿಂದ ಸತ್ಯಮೂರ್ತಿ ವಸೂಲಿ ಮಾಡಿರುವ ಹಣದಿಂದ ಖರೀದಿಸಿರುವ ವಸ್ತುಗಳು.

ಈ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸುವ ಉದ್ದೇಶದಿಂದಲೇ ಚಿತ್ತಾಪೂರದ ಯಲ್ಲಮ್ಮ ದೇವಿ ವಿಗ್ರಹ ಅಪಹರಿಸಲು ಸತ್ಯಮೂರ್ತಿ ಪ್ಲಾನ್ ಮಾಡಿದ್ದ. ಹೊಸ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಿತ್ಯ ಪೂಜೆ ಮಾಡಲು ಕೊಪ್ಪದ ನಾಗೇಂದ್ರ ಭಟ್ ಎಂಬುವನನ್ನು ಹದಿನೈದು ಸಾವಿರ ಸಂಬಳಕ್ಕೆ ಈಗಾಗಲೇ ನೇಮಿಸಿದ್ದಾನೆ.


ಹೀಗೆ ಒಂದು ಕಡೆ ವಿಪರೀತ ದೈವಭಕ್ತಿ ಪ್ರದರ್ಶಿಸುವ ಸತ್ಯಮೂರ್ತಿ ಮತ್ತೊಂದೆಡೆ ಕ್ರೂರಿಯೂ ಹೌದು. ಇವನು ಬೆಂಗಳೂರಿನಲ್ಲಿದ್ದಾಗ ತನ್ನ ಮನೆ ಕೆಲಸಕ್ಕೆಂದು ಸ್ವಂತ ಗ್ರಾಮದಿಂದ ಹದಿಮೂರರ ವಯಸ್ಸಿನ ಹುಡುಗಿಯೊಬ್ಬಳನ್ನು ಕರೆತಂದು ಇಟ್ಟುಕೊಂಡಿದ್ದ. ಆಮೇಲೆ ಅವಳನ್ನೇ ತನ್ನ ಲೈಂಗಿಕ ತೃಷೆ ತೀರಿಸಿಕೊಳ್ಳಲು ಬಳಸಿಕೊಂಡ ಅಂತ ಪುಕಾರಾಯಿತು. ಅವನ ಮನೆಯಲ್ಲೇ ಇದ್ದ ನರಸಿಂಹಮೂರ್ತಿ ಎಂಬಾತ ಈ ವಿಚಾರ ಬಾಯಿಬಿಟ್ಟ ಪರಿಣಾಮ, ಸತ್ಯಮೂರ್ತಿ ಗಾಬರಿಯಾಗಿ ನರಸಿಂಹನನ್ನೇ ಮನೆಯಿಂದ ಹೊರಹಾಕಿಬಿಟ್ಟ. ಈಗ ಅದೇ ನರಸಿಂಹಮೂರ್ತಿ ಲೋಕಾಯುಕ್ತರಿಗೆ ಲಿಖಿತ ದೂರು ನೀಡಿ ಸತ್ಯಮೂರ್ತಿ ದೇವಸ್ಥಾನದ ವ್ಯವಹಾರ, ಮನೆಕೆಲಸದ ಹುಡುಗಿಯ ದುರ್ಬಳಕೆ, ಅರಣ್ಯ ಭೂಮಿ ಒತ್ತುವರಿ ಬಗ್ಗೆ ತನಿಖೆ ನಡೆಸುವಂತೆ ಕೋರಿದ್ದಾನೆ. ಇದೇ ಸತ್ಯಮೂರ್ತಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ ಸಿಇಓ ಆಗಿದ್ದಾಗ ಕಂಪ್ಯೂಟರ್ ಖರೀದಿ ಹಗರಣ ನಡೆಸಿ ಒಂದು ಕೋಟಿ ರೂಪಾಯಿ ತಿಂದು ಹಾಕಿದ್ದ. ಅದರ ಬಗ್ಗೆ ಈಗಲೂ ತನಿಖೆ ನಡೆಯುತ್ತಲೇ ಇದೆ.

ಈ ಸತ್ಯಮೂರ್ತಿ ಫುಲ್ ಟೈಂ ಕಳ್ಳ, ಪಾರ್ಟ್ ಟೈಂ ದೈವಭಕ್ತ ಅನ್ನಬೇಕಿರುವುದು ಈ ಕಾರಣಕ್ಕೇನೆ.

ಗುಲಬರ್ಗಾ: ಮುಠ್ಠಾಳ ಡಿಸಿಪಿ ಸತ್ಯಮೂರ್ತಿ

ಯಥಾ ರಾಜಾ ತಥಾ ಅಧಿಕಾರಿ ಎನ್ನುವಂತೆ ಯಡಿಯೂರಪ್ಪನ ಸರಕಾರ ಅಧಿಕಾರಕ್ಕೆ ಬರುವುದೊಂದೆ ತಡ, ಗುಡಿ ಗುಂಡಾರ ಸೇರಿದ ಕಾಕಮೂಕ ಅಧಿಕಾರಿಗಳೆಲ್ಲ ಮತ್ತೆ ಚಿಗಿತುಕೊಂಡಿದ್ದಾರೆ. ತಾವು ಮಾಡಿದ ಏನೆಲ್ಲ ಭ್ರಷ್ಟಚಿಂವಾಟುಗಳನ್ನು ಆ ದೇವರ ತಲೆಗೂ ಕಟ್ಟಿ ಆತನ ಶ್ರೀರಕ್ಷೆಯಲ್ಲಿ ಆರಾಮವಾಗಿದ್ದಾರೆ. ಮನೆಯ ಹಿರಿಯ ಮಗನೆ ಎದ್ದು ನಿಂತು ಉಚ್ಚೆ ಹುಯ್ಯುತ್ತಿರುವಾಗ, ಹುಡುಗರೆಲ್ಲ ತಿರುಗಾಡಿ ಹೋಯ್ದರು ಎಂಬಂತೆ ಯಡ್ಡಿಯ ಮನಸ್ಥಿತಿಯನ್ನು ಬಲ್ಲ ಅಧಿಕಾರಿಗಳು ತಾವೂ ಮುಖ್ಯಮಂತ್ರಿಗಳಂತೆ ಎಂಬುದನ್ನು ತೋರಿಸಲು ಮುಂದಾಗಿದ್ದಾರೆ. ಕಲಬುರ್ಗಿ ಜಿಲ್ಲೆಯ ಜಿಲ್ಲಾಧಿಕಾರಿಯಾಗಿರುವ ಕೆ.ಎಸ್. ಸತ್ಯಮೂರ್ತಿ ಇಂಥ ಉಪದ್ವ್ಯಾಪ ಮಾಡಲು ಮುಂದಾಗಿ ಜನರಿಂದ ಇಕ್ಕಿಸಿಕೊಂಡು ಮುದುಡಿ ಮೂಲೆ ಸೇರಿದ್ದಾನೆ

ತಾನು ಮಾಡುವ ಕಾರ್ಯವೇ ಬೆಟ್ಟದಷ್ಟಿದ್ದಾಗ ಇನ್ನೊಬ್ಬರತ್ತ ಬೆಟ್ಟು ಮಾಡಿದರು ಎಂಬಂತೆ ಕಲಬುರ್ಗಿ ಜಿಲ್ಲೆಯ ರೈತರು ಮುಂಗಾರು ಮಳೆಯಿಲ್ಲದೆ ಬರಗಾಲದ ದವಡೆಗೆ ಸಿಕ್ಕು ಒದ್ದಾಡುತ್ತಿದ್ದಾರೆ. ನಗರ ಪಾಲಿಕೆಯ ನೌಕರರು 27 ತಿಂಗಳುಗಳ ಪಗಾರ ಇಲ್ಲದೆ ಹೆಂಡಿರು ಮಕ್ಕಳೊಂದಿಗೆ ಬೀದಿಗೆ ಬಂದು ಪ್ರತಿಭಟಿಸುತ್ತಿದ್ದಾರೆ. ರಸ್ತೆ ಅಗಲೀಕರಣ ಮಾಡುವುದಾಗಿ ಹೇಳಿದ ಮಾತುಗಳು ಬರೀ ಕಚೇರಿಯ ಕಡತಗಳಲ್ಲಿಯೇ ಕೊಳೆಯುತ್ತ ಬಿದ್ದಿವೆ. ಸರಕಾರಿ ಆಡಳಿತವಂತೂ ತುಂಬಾ ಭ್ರಷ್ಟಮಯವಾಗಿ ಗಬ್ಬುನಾರುತ್ತಿದೆ. ಇದೆಲ್ಲಕ್ಕೂ ಸ್ಪಂದಿಸಬೇಕಾದ ಜಿಲ್ಲಾಧಿಕಾರಿ ಸತ್ಯಮೂರ್ತಿ ಚಿತ್ತಾಪೂರ ತಾಲೂಕಿನ ನಾಗಾವಿ ಯಲ್ಲಮ್ಮ ದೇವಿಯ ತಂಟೆಗೆ ಹೋಗಿ ಬೇಜಾನ್ ಒದೆ ತಿಂದು ಬಂದಿದ್ದಾನೆ.



ಸತ್ಯಮೂರ್ತಿ

ರಾಷ್ಟ್ರಕೂಟರ ಕುಲದೇವತೆಯೂ ಆಗಿದ್ದ ಅತ್ಯಂತ ಪುರಾತನವಾದ ಸದರಿ ದೇವಾಲಯ ಯಲ್ಲಮ್ಮಳ ಶಕ್ತಿ



ಸ್ಥಳ ಎಂಬುದು ಇಲ್ಲಿನವರ ನಂಬಿಕೆ. ಇತ್ತೀಚೆಗೆ ಯಡಿಯೂರಪ್ಪ ಈ ಪುರಾತನ ದೇವಾಲಯಕ್ಕೆ ಭೇಟಿ ನೀಡಿದ್ದರು. ಈ ಭಾಗದ ಬಹುತೇಕರು ಯಲ್ಲಮ್ಮಳಲ್ಲಿ ಅಪಾರವಾದ ನಂಬಿಕೆಯನ್ನು ಇಟ್ಟಿದ್ದಾರೆ ಎಂಬುದನ್ನು ಗಮನಿಸಿದ ಯಡ್ಡಿ ಎಂದಿನ ತನ್ನ ಬಗ್ಗಡ ಆಡಳಿತ ಶೈಲಿಯಂತೆ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಒಂದು ಕೋಟಿ ರೂಪಾಯಿ ಕೊಡುವುದಾಗಿ ಭರವಸೆ ನೀಡಿದ್ದರು. ಹೇಗೂ ಚಿತ್ತಾಪೂರ ಮತಕ್ಷೇತ್ರದಿಂದ ತಮ್ಮ ಪಕ್ಷದ ಅಭ್ಯರ್ಥಿ ವಾಲ್ಮೀಕಿ ನಾಯಕ ಗೆಲ್ಲಬೇಕಿತ್ತು, ಮಲ್ಲಿಕಾರ್ಜುನ ಖರ್ಗೆಯ ಮಗ ಪ್ರಿಯಾಂಕನನ್ನು ಸೋಲಿಸಲೇಬೇಕಿತ್ತು. ಹೀಗಾಗಿ ಒಂದು ಸಣ್ಣ ಗಿಮಿಕ್ ಮಾಡಿದರು. ಅದರಲ್ಲಿ ಯಶಸ್ವಿಯೂ ಆದರು, ಆ ಮಾತು ಬೇರೆ.

ಯಡ್ಡಿಯ ಇಂಥ ತಿರುಗಾಟದ ಸಂದರ್ಭದಲ್ಲಿ ಅವರನ್ನು ಹಿಂಬಾಲಿಸಿಕೊಂಡು ಹೋದ ಜಿಲ್ಲಾಧಿಕಾರಿ ಸತ್ಯಮೂರ್ತಿ ನಾಗಾವಿ ಯಲ್ಲಮ್ಮನ ದೇವಸ್ಥಾನದಲ್ಲಿನ ಮೂರ್ತಿ, ಆ ಶಕ್ತಿ ದೇವತೆಯ ಬಗೆಗಿನ ನಾನಾ ಬಗೆಯ ನಂಬಿಕೆಗಳನ್ನು ಕೇಳಿಸಿಕೊಂಡು ಪಿಗ್ಗಿ ಬಿದ್ದಿದ್ದಾನೆ. ಮೊದಲೆ ಇಂಥವುಗಳ ಬಗ್ಗೆ ಅಪಾರ ನಂಬಿಕೆ ಇಟ್ಟು ಕೊಂಡಿರುವ ಸತ್ಯಮೂರ್ತಿ ತನ್ನ ಊರಿನಿಂದ (ಶೃಂಗೇರಿಯಿಂದ) ಅರ್ಚಕರನ್ನು ಕರೆಸಿ ಕೊಂಡು ಈ ನಾಗಾವಿ ಯಲ್ಲಮ್ಮ ದೇವಿಯ ಗುಡಿಯಲ್ಲಿ ಆಶ್ಲೇಷಾಬಲಿ ಹೋಮ ಮಾಡಿಸಬೇಕೆಂದು, ಅದರಿಂದ ತನಗೂ ತನ್ನ ಕುಟುಂಬಕ್ಕೂ ಒಳಿತಾಗುವುದೆಂದು ಭ್ರಮಿಸಿ ಪೂಜೆಗಾಗಿ ಸಜ್ಜಾಗಿದ್ದಾನೆ. ರಾತ್ರಿ 8.30 ರ ಸುಮಾರಿಗೆ ಅಲ್ಲಿನ ಮೂಲ ಅರ್ಚಕರನ್ನು ಹೊರಗೆ ಕಳಿಸಿ, ಬಾಗಿಲು ಹಾಕಿಕೊಂಡು ಹನ್ನೊಂದು ಜನ ಪುರೋಹಿತರೊಂದಿಗೆ ಹೋಮ ಶುರುವಿಟ್ಟುಕೊಂಡಿದ್ದಾನೆ.

ಆದರೆ ಈ ಮೊದಲೆ ನಾಗಾವಿ ಯಲ್ಲಮ್ಮ ದೇವಸ್ಥಾನದಲ್ಲಿದ್ದ ಅರ್ಚಕರಿಗೆ ಜಿಲ್ಲಾಧಿಕಾರಿಗಳ ಮನದಿಂಗಿತ ಸ್ಪಷ್ಟವಾಗಿ ತಿಳಿಯದೆ ಗೊಂದಲಕ್ಕೆ ಈಡಾಗಿದ್ದಾರೆ. ಜಿಲ್ಲಾಧಿಕಾರಿಗಳೊಂದಿಗೆ ಹೋಮ ನಡೆಸಲು ಬಂದ ಅರ್ಚಕರು ಕಾಯಂ ಆಗಿ ಇಲ್ಲೇ ಇದ್ದುಬಿಟ್ಟರೆ ತಮ್ಮ ಕೆಲಸಕ್ಕೆ ಎಳ್ಳು ನೀರು ಬಿಟ್ಟಂತೆಯೆ ಸೈ ಎಂದು ಭ್ರಮಿಸಿದ್ದಾರೆ. ದೇವಸ್ಥಾನ ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಟ್ಟದ್ದರಿಂದ, ಎಲ್ಲಿ ಸರಕಾರವೇ ಬರುಬರುತ್ತ ತ… ಪಾರುಪತ್ಯ ಸ್ಥಾಪಿಸುವುದೊ ಎಂಬ ಸಣ್ಣ ಅನುಮಾ… ಅವರೆಲ್ಲರನ್ನು ಗಾಢವಾಗಿ ಕಾಡಿದೆ. ತಾವು ಇಷ್ಟು ವರ್ಷಗಳವರೆಗೆ ನಡೆಸಿಕೊಂಡು ಬಂದ ಅರ್ಚಕ ವೃತ್ತಿಗೆ ಎಲ್ಲಿ ಸಂಚಕಾರ ಬರುತ್ತದೋ ಎಂಬ ಭ… ಅವರನ್ನೆಲ್ಲ ವಿಹ್ವಲಗೊಳ್ಳುವಂತೆ ಮಾಡಿದೆ. ಹೀಗಾ… ಆ ಅರ್ಚಕ ವರ್ಗದವರು ಗರ್ಭಗುಡಿಯಲ್ಲಿಯ ಯಲ್ಲಮ್ಮ ತಾಯಿಯ ಪ್ರತಿಮೆ ಬದಲಾಯಿಸಲು ಜಿಲ್ಲಾಧಿಕಾರಿ ಸತ್ಯಮೂರ್ತಿ ತಯಾರಿ ನಡೆಸಿದ್ದಾರೆ ಎಂಬ ವದಂತಿ ದಟ್ಟವಾಗಿ ಹಬ್ಬುವಂತೆ ಮಾಡಿದ್ದಾ… ಇದರಲ್ಲಿ ಅವರು ಯಶಸ್ವಿಯೂ ಆಗಿದ್ದಾರೆ.

ಚಿತ್ತಾಪೂರ ಕ್ಷೇತ್ರದ ಮತದಾರರ ಒಲವು ಗಳಿ… ಕೊಂಡು ಆಯ್ಕೆಯಾಗಿ ಬಂದಿರುವ ಬಿಜೆಪಿಯ ವಾಲ್ಮೀಕಿ ಕಮಲೂ ನಾಯಕ, ಜೆ.ಡಿ.ಎಸ್.ನ ಬಸವರಾಜ ಬೆಣ್ಣೂರ್ ಸ್ಥಳಕ್ಕೆ ಬಂದರು ಬಹಿರಂಗವಾಗಿ ಗುಡಿಯ ಅಂಗಳದಲ್ಲಿಯೇ ನಿಂತು ನೀವು ತಿಳಿದುಕೊಂಡಂತೆ ಏನೂ ಆಗುವುದಿಲ್ಲ ಎಂದು ಬೊಂಬಡಾ ಬಜಾಯಿಸಿದರೂ ಜನ ಉದ್ರಿಕ್ತರಾಗಿ ಯಾರ ಮಾತನ್ನೂ ಕೇಳದೆ ಗುಡಿಯ ಒಳಗೆ ನುಗ್ಗಿದ್ದಾರೆ. ಆಕ್ರೋಶಗೊಂಡ ಜನತೆ ಜಿಲ್ಲಾಧಿಕಾರಿ ಸತ್ಯಮೂರ್ತಿಯನ್ನು ಅಕ್ಷರಶಃ ಎಳೆದಾ… ಬಿಟ್ಟಿತು. ಅಂಗಿನ ಕೊರಳ ಪಟ್ಟ ಹಿಡಿದು ನೂಕಾಡಿದರು. ಹೋಮಕ್ಕಾಗಿ ಸಿದ್ದಪಡಿಸಿದ್ದ ಅಗ್ನಿಕುಂಡ ನೋಡನೋಡುತ್ತಿರುವಂತೆ ಚಿಂದಿಚಿಂದಿಯಾಯಿತು. ಅರ್ಚನೆಗಾಗಿ ಇರಿಸಿದ್ದ ಕುಂಕುಮ, ಅರಿಶಿಣ, ತೆಂಗಿನಕಾಯಿ ಮತ್ತಿತರ ಪೂಜಾ ಸಾಮಗ್ರಿಗಳು ಚೆಲ್ಲಾಪಿಲ್ಲಿಯಾದವು. ಕಾರ್ಯಕ್ರಮಗಳಿಗೆ ಸಿದ್ಧಪಡಿಸಿದ್ದ ಮಂಟಪ ಧ್ವಂಸಗೊಳಿಸಿದ್ದಲ್ಲದೆ ಅಲ್ಲಿ ಸೇರಿದ್ದವರ ಮೇಲೂ ಹಲ್ಲೆಗಳು ನಡೆದುಹೋದವು. ನಾಗಾವಿಗೆ ದೂರದ ಸೊಲ್ಲಾಪುರದಿಂದ ದೇವಿಯ ದರ್ಶನಕ್ಕೆ ಬಂದಿದ್ದ ಭಕ್ತರೊಬ್ಬರ ಕಾರಿಗೂ ಬೆಂಕಿ ಇಟ್ಟರು. ಡೋಣಗಾಂ… ಸೇರಿದಂತೆ ಕೆಲವು ಹಳ್ಳಿಗಳಿಗೆ ಪ್ರಯಾಣ ಬೆಳೆಸಿದ್ದ ಸಾರಿಗೆ ಸಂಸ್ಥೆಯ ಬಸ್ಸಿಗೂ ಬೆಂಕಿ ಹಚ್ಚಿ ಜಿಲ್ಲಾಧಿಕಾರಿಯ ಹೋಮದ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಕುರುಡಿಯ ಹಾದರಕ್ಕೆ ಊರೆಲ್ಲ ನಿದ್ದೆಗೇಡು ಎಂಬಂತೆ ಜಿಲ್ಲಾಧಿಕಾರಿಯ ಈ ಅವಿವೇಕ ಹೋಮದ ಘಟನೆಗೆ ಇಡೀ ಜಿಲ್ಲೆಯ ಜನತೆ ನಾಲ್ಕಾರು ದಿನ ತಲ್ಲಣದಲ್ಲಿ ಕಳೆದರು. ಸಾಕಷ್ಟು ಸಾರ್ವಜನಿಕ ಆಸ್ತಿ ನಾಶವಾಯಿತು. ಮೂಢನಂಬಿಕೆಗಳನ್ನು ಹಬ್ಬಿಸುವುದಾಗಲಿ, ಅದಕ್ಕೆ ಪ್ರೋತ್ಸಾಹ ನೀಡುವುದಾಗಲಿ ಸಂವಿಧಾನಬಾಹಿರವಾದ ಕೃತ್ಯ ಎ… ಆಶೋತ್ತರಗಳೆಲ್ಲ ಅಂದು ಅರ್ಥಕಳೆದುಕೊಂಡಿದ್ದವು… ಸರಕಾರಿ ನೌಕರನಾದ ಜಿಲ್ಲಾಧಿಕಾರಿಯೆ ಇಂಥ ಆಶ್ಲೇ… ಹೋಮಗಳನ್ನು ನಂಬುತ್ತ ಅವಿವೇಕಿಯಾದರೆ ಈತನನ್ನು ನಂಬಿಕೊಂಡ ಜಿಲ್ಲಾಡಳಿತದ ಇತರ ನೌಕರರು, ಈ ಪ್ರದೇಶದ ಜನತೆ ಇನ್ಯಾವ ಹೋಮ… ಮಾಡಬೇಕೊ?

● ವಿಶ್ವಾರಾಧ್ಯ ಸತ್ಯಂಪೇ…

ಶಾಲಾ ಮಕ್ಕಳಿಗೆ ಕೋಮುವಾದಿ ಪುಸ್ತಕ

12 ◀◀◀

ಮೊತ್ತ ಎಷ್ಟಾಗಲಿದೆ ಗೊತ್ತೆ?

ಕರ್ನಾಟಕದಲ್ಲಿ ಈಗ ಹತ್ತಿರತ್ತಿರ 59 ಸಾವಿರ ಪ್ರಾಥಮಿಕ ಶಾಲೆಗಳಿವೆ. ಪ್ರತೀ ಶಾಲೆಗೆ ಮುನ್ನೂರು ಪುಸ್ತಕ ಎಂದರೆ ಒಂದು ಪುಸ್ತಕಕ್ಕೆ 50 ರೂ. ಅಂದುಕೊಂಡರೂ ಒಂದು ಶಾಲೆಗೆ ಹದಿನೈದು ಸಾವಿರ ರೂಪಾಯಿ ಆಯಿತು. ಒಂದು ಶಾಲೆಗೆ 15 ಸಾವಿರದಂತೆ ಇಡೀ ರಾಜ್ಯಾದ್ಯಂತ 59 ಸಾವಿರ ಶಾಲೆಗಳಿಗೆ ಲೆಕ್ಕ ಮಾಡಿದರೆ 75 ಕೋಟಿ ರೂ.ಗಳಾಗಲಿದೆ. ಯಡ್ಡಿ ಸರ್ಕಾರದ ತುಘಲಕ್ ದರ್ಬಾರ್ ಹೇಗಿದೆ ನೋಡಿ.

ಬರಗಾಲ ಎಂದು ಒಂದು ಬೋರ್‌ವೆಲ್ ಕೊರೆಸಲಿಲ್ಲ, ಹಂದಿಜ್ವರ ಚಿಕಿತ್ಸೆಗೆಂದು ಒಂದೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಿಲ್ಲ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರಿಗೆ ನಯಾಪೈಸೆ ಪರಿಹಾರಧನ ಕೊಡಲಿಲ್ಲ, ಅದರ ಬದಲಾಗಿ 'ಮಗ ಎಲ್ಲಾ ಬಿಟ್ಟು ಭಂಗಿ ನೆಟ್ಟ' ಎಂಬಂತೆ ಶಾಲಾ ಮಕ್ಕಳಿಗೆ ಕೋಮುವಾದಿ ವಿಷ ಉಣ್ಣಿಸಲು ತಯಾರಾಗಿದೆ ಬಿಜೆಪಿ ಸರ್ಕಾರ.

ಇಷ್ಟಕ್ಕೂ ಈ ಹೆಡ್ಗೇವಾರ್, ಸಾವರ್ಕರ್, ಗೋಳ್ವಾಲ್ಕರ್ ಯಾರು? ಇವರೇನು ಮಹಾತ್ಮಾ ಗಾಂಧಿನಾ? ಕನ್ನಡದ ಮಕ್ಕಳೇಕೆ ಇವರ ಜೀವನ ಚರಿತ್ರೆ ಓದಬೇಕು?

ಅಷ್ಟೇ ಅಲ್ಲ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯ ಹಣವನ್ನು ಕೋಮುವಾದಿ ಪುಸ್ತಕ ಖರೀದಿಸಲು ಯಾಕೆ ಖರ್ಚು ಮಾಡಬೇಕು? ಈ ನಿಧಿಯಿರುವುದು ರಸ್ತೆ, ಚರಂಡಿ, ನೀರು ಪೂರೈಕೆ, ಶಾಲಾ ಕಟ್ಟಡ ನಿರ್ಮಾಣಕ್ಕೆ ಅಲ್ಲವೆ?

ವಿರೋಧ ಪಕ್ಷಗಳಾದ ಕಾಂಗ್ರೆಸ್ ಹಾಗೂ ಜೆಡಿಎಸ್ ಈ ಬಗ್ಗೆ ದನಿಯೆತ್ತಲಿ.

● ಬಿಳಿದಾಳೆ ಪಾರ್ವತೀಶ


ಸಪ್ತಮಿ ಟ್ರಸ್ಟ್ ಎಂಬ ಕೋಮುವಾದಿ ಗುಂಪಿನಿಂದ ಸರ್ಕಾರಿ ಶಿಕ್ಷಕರಿಗೆ ನೀತಿಪಾ…

ಸರ್ಕಾರಿ ಶಿಕ್ಷಕರಿಗೆ ನೀತಿಪಾಠ ಕಲಿಸುವ ಇನ್ನೊಂದು ಹೊಸ ಯೋಜನೆಯ… ಬಿಜೆಪಿ ಸರ್ಕಾರ ಜಾರಿ ಮಾಡುತ್ತಿದೆ. ಬೆಂಗಳೂರಿನ ಮಾಗಡಿ ರಸ್ತೆಯ ಕಾಮಾಕ್ಷಿಪಾಳ್ಯದಲ್ಲಿರು… ಸಪ್ತಮಿ ಟ್ರಸ್ಟ್ ಎಂಬ ಸಂಸ್ಥೆಗೆ ಈ ಕೆಲಸ ವಹಿಸಲಾಗಿದೆ. ಈ ಟ್ರಸ್ಟ್‌ನಲ್ಲಿ ಮಾತಾ… ವಿವೇಕಮಯಿ ಎಂಬಾಕೆ ಮುಖ್ಯಸ್ಥೆಯಾಗಿಯೂ, ಬಿ.ಎಸ್.ಆನಂದ್ ಎನ್ನುವ… ಅಧ್ಯಕ್ಷನಾಗಿಯೂ ಇದ್ದಾರೆ.

ಇದೇ ಸೆಪ್ಟೆಂಬರ್ 4, 5 ಮತ್ತು 6ರಂದು ಈ ಸಪ್ತಮಿ ಟ್ರಸ್ಟ್‌ನವರು ದೇಶ… ರಾಷ್ಟ್ರ ನಿರ್ಮಾಣ, ಸಂಸ್ಕೃತಿ ಎಂಬಿತ್ಯಾದಿ ವಿಚಾರಗಳ ಬಗ್ಗೆ ಬೆಂಗಳೂರು ವಿ.ವಿ.… ಜ್ಞಾನಭಾರತಿ ಆವರಣದಲ್ಲಿ ಶಿಬಿರ ನಡೆಸುತ್ತಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆ ಈ … ಒಂದು ಆದೇಶ ಹೊರಡಿಸಿ ಶಿಕ್ಷಕರೆಲ್ಲರೂ ಭಾಗವಹಿಸುವಂತೆ ಸೂಚನೆ ನೀಡಿದೆ.

ಅಂದಹಾಗೆ, ಶಿಕ್ಷಕರಿಗೆ ನೀತಿಪಾಠ ಹೇಳಲಿರುವ ಮಹಾ ಚಿಂತಕರು ಯಾರಾ… ಗೊತ್ತೆ? ಚಕ್ರವರ್ತಿ ಸೂಲಿಬೆಲೆ, ಲಕ್ಷ್ಮೀನಾರಾಯಣ ಭಟ್ಟ ಮುಂತಾದ ಆರೆಸ್ಸೆಸ್ ಗ್ಯಾಂಗಿನ…

ಗುಲ್ಬರ್ಗಾ: ನಗರಪಾಲಿಕೆ ನೌಕರರ ಕಷ್ಟಗಳು




…ಲಸವಿಲ್ಲದ ಬಡಿಗ ಮಗನ ಕುಂಡೆಕೆತ್ತಿ ಮಣೆ …ಡ ಎನ್ನುವಂತೆ ಏನಕೇನ ಪ್ರಕಾರೇಣ ಗುಲ …ಕ್ಕೆ ತನ್ನ ಪಟಾಲಂದೊಂದಿಗೆ ಬಂದು ಯಡ್ಡಿ …ದಿ ಹೋಗಿದ್ದಾರೆ. ಸಂಪುಟ ಸಭೆಯನ್ನು …ರ್ಗಾದಲ್ಲಿ ಮಾಡಿದ ಮಾತ್ರಕ್ಕೆ … ಹಿಂದುಳಿದ ಭಾಗಗಳಲ್ಲಿ ಒಂದಾ… ಗುಲಬರ್ಗಾ ಜಿಲ್ಲೆ ಒಮ್ಮಿಂ…ಲ್ಲೆ ಅಭಿವೃದ್ಧಿಯಾಗುವುದಿಲ್ಲ. …) ತಿಂಗಳುಗಳ ಹಿಂದೆ ಇದೇ … ತನ್ನ ಮಂತ್ರಿಮಂಡಲದ …ನೊಂದಿಗೆ ಬಂದು ಬಹುದೊಡ್ಡ …ಷೋಸ್‌ನೀಡಿದ್ದರು. ಆದರೆ ಇದು …ಾ ಆ ಯಾವ ಮಾತುಗಳು …ಗೆ ಇಳಿದಿಲ್ಲ. ಯಾದಗಿರಿ ಜಿಲ್ಲೆ …ಡುತ್ತೇನೆ ಎಂಬ ಮಾತು ಇನ್ನೂ …ರದ ಕಡತದಲ್ಲಿ ಕೊಳೆಯುತ್ತಿದೆ. …ಂದೆ ಯಾದಗಿರಿ ಜಿಲ್ಲೆಯಲ್ಲಿ … ಬೇಕಾಗಿದ್ದ ಸೇಡಂ ಹಾಗೂ …ರ್ಜ ತಾಲೂಕುಗಳು ಈ ಮೊದಲಿನ …ರ್ಗಾ ಜಿಲ್ಲೆಯಲ್ಲಿಯೆ ಉಳಿಯುವ ಮೊಂಡು … ಬದ್ಧಿವೆ. ಹೀಗಾಗಿ ಅನಿವಾರ್ಯವಾಗಿ ಯಡ್ಡಿ …ಗಿರಿ ಜಿಲ್ಲೆಯನ್ನು ಸುರಪುರ ಮತ್ತು ಶಹಾಪುರ …ಲೂಕುಗಳನ್ನೊಳಗೊಂಡ ಜಿಲ್ಲೆಯನ್ನಾಗಿ ಮಾಡಿ ತಮ್ಮ …ಸನ್ನು ಪೂರೈಸಿದ್ದಾರೆ ಅಷ್ಟೆ. ಯಾದಗಿರಿ …ಯನ್ನಾಗಿ ಮಾಡಿದ್ದರಿಂದ ಯಡಿಯೂರಪ್ಪ ಮುಂದಿನ …ದನ್ನು ತಮ್ಮ ಪಕ್ಷದ ಬುಟ್ಟಿಗೆ ಹಾಕಿಕೊಂಡು …ಬಹುದೆ ಹೊರತು ಮತ್ತಾವ ಸಾಧನೆಯೂ …ಲ್ಲವೆನಿಸುತ್ತದೆ.

…ಕೆಂದರೆ ಹೇಳಿಕೇಳಿ ಯಾದಗಿರಿ ರಾಜ್ಯದ ಗಡಿಯ …ಕು. ಯಾದಗಿರಿಯಿಂದ ಹತ್ತು ಹದಿನೈದು …ಟರ್ ಮುನ್ನಡೆದರೆ ಇದಿರಾಗುವುದೇ ಆಂಧ್ರ. …ಗಲೆ ನೀರಾವರಿಯ ಹೊಲವನ್ನು ಉಳುಮೆ …ಬು ಸಂಪೂರ್ಣವಾಗಿ ಆಂಧ್ರದ ರೈತರೆ ಯಾದಗಿರ … ಬಂದು ವಿರಾಜಮಾನರಾಗಿದ್ದಾರೆ. ಕರ್ನಾಟಕ …ವದ ಲಾಭಗಳೇನಾದರೂ ಇದ್ದರೆ ಅವು ನೆರೆಯ …ದ ರೈತರ, ವ್ಯಾಪಾರಸ್ಥರ ಪಾಲಾಗುತ್ತದೆ. ಬರುಬರುತ್ತ … ಸಂಖ್ಯೆ ಹೆಚ್ಚದಂತೆಲ್ಲ ಯಾದಗಿರ ಕೂಡ …ದೊಂದು ದಿನ ರೆಡ್ಡಿಮಯವಾಗಿ ಇಲ್ಲಿಯೂ …ಬ್ಬ ರೆಡ್ಡಿ ಚುನಾವಣೆಗೆ ನಿಲ್ಲುವ ಕಾಲ …ಬಿಲ್ಲವೆನಿಸುತ್ತದೆ.


ಮಾತೆತ್ತಿದ್ದರೆ ಕೋಟಿ ಕೋಟಿಗಟ್ಟಲೆ ಹಣ ಬಿಡುಗಡೆ ಮಾಡಿರುವುದಾಗಿ ಹೇಳುವ ಯಡ್ಡಿ ತಾನು ಬಿಡುಗಡೆ ಮಾಡಿದ ಹಣ ಯಾವ ಇಲಾಖೆಯ ಮೂಲಕ ಜನರಿಗೆ ತಲುಪಿದೆ ಎಂಬುದನ್ನು ಪರಾಮರ್ಶಿಸುವ ಎದೆಗಾರಿಕೆ ತೋರಿಸಬೇಕಿದೆ. ತಾನು ಹೋದಲ್ಲಿ ಬಂದಲ್ಲಿ ಅಲ್ಲಿರುವ ಬ್ಲೇಡ್ ಬ್ರ್ಯಾಂಚ್ (ಮಠ) ಗಳಿಗೆ ಹಣ ಬಿಡುಗಡೆ ಮಾಡಿ ಕೆಲವು ಜನರಿಂದ ಸೈ ಎನಿಸಿಕೊಂಡ ಮಾತ್ರಕ್ಕೆ ಎಲ್ಲಾ ಜನವರ್ಗವನ್ನು ಸಂತೈಸಬಹುದೆಂಬ ತಪ್ಪು ಲೆಕ್ಕಾಚಾರದಲ್ಲಿ ಯಡ್ಡಿ ಇರುವಂತಿದೆ.

ಹಾಗಾಗಿಯೇ ಮೊನ್ನೆ ಕಲುಬುರ್ಗಿ ಜಿಲ್ಲೆಯ ಕಾಂಗ್ರೆ ಪಕ್ಷದ ಅಧ್ಯಕ್ಷನಾದ ಅಲ್ಲಮಪ್ರಭು ಪಾಟೀಲ



ಯಡ್ಡಿಯನ್ನು ನೇರವಾಗಿ ತರಾಟೆಗೆ ತೆಗೆದುಕೊಂಡರು. ಒಮ್ಮಿಂದೊಮ್ಮೆ ಬಂದ ಈ ಪ್ರತಿರೋಧಕ್ಕೆ ಅಪ್ರತಿಭರಾದ ಯಡಿಯೂರಪ್ಪ ಬಾಯಿ ಸವರ್‍ಯಾಡ ತೊಡಗಿದರು. ಆಗ ಅವರ ನೆರವಿಗೆ ಬಂದ ಬಜೆಪಿ ಚೆಡ್ಡಿಗಳು ದಾಂಧಲೆ ಉಂಟುಮಾಡಿ ಐವಾನ್ ಇ ಶಾಹಿ ಅತಿಥಿಗೃಹವನ್ನು ಅಕ್ಷರಶಃ ತರಕಾರಿ ಮಾರುಕಟ್ಟೆಯನ್ನಾಗಿ ಮಾಡಿದರು. ಆಗ ಮಾಜಿ ಮಂತ್ರಿ ಧರ್ಮಸಿಂಗ್ ಕೂಡ ಸುಮ್ಮನೆ ಕೂಡದೆ ತಮ್ಮ ಎಂದಿನ ತಣ್ಣಗಿನ ಮಾತುಗಳ ಮೂಲಕ ಮುಖ್ಯಮಂತ್ರಿ ಯಡ್ಡಿಯ ಕಪಾಳಕ್ಕೆ ತಪರಾಕಿ ಹೊಡೆದರು.

"ಅಲ್ರೀ.... ಯಡ್ಯೂರಪ್ಪನವರೇ..... ನಾನು ಮುಖ್ಯ ಮಂತ್ರಿ ಆಗಿದ್ದಾಗ ನಮ್ಮ ಆಡಳಿತದ ವಿರುದ್ಧವೂ ಪ್ರತಿಭಟನೆ ನಡಿತಿತ್ತು. ಆದ್ರ ನಿಮ್ಮಂಗ್ ಅವ್ರಮ್ಯಾಲ (ಚಳವಳಿಗಾರರ ಮ್ಯಾಲೆ) ಪೊಲೀಸರನ ಛೂಬಿಟ್ಟು ಸುಮ್ಕ್ ಅವ್ರ ಬಾಯಿ ಮುಚ್ಚಸತಿರಲಿಲ್ಲ ನೋಡ್ರೀ.... ಮಾಜಿ ಮಂತ್ರಿ ಎಸ್.ಕೆ. ಕಾಂತಾ ಹೋರಾಟಗಾರ. ಅವ್ರ ತಡವಿಕೊಂಡ್ರ, ಇಲ್ಲೀ ಜನ ಸುಮ್ನೀ ಕೂಡೋದಿಲ್ಲ, ಎಲ್ಲಾ ರಾಜಕಾರಣಿಗಳಂಗ್ಹ ಅವ್ರು ಕಚಿಪಿಚಿ ಮನಿಷ್ಯಾ ಅಲ್ಲನೋಡ್ರಿ.... ನೀವು ಬಹಳ ತಪ್ಪ ಮಾಡಾಕ ಹತ್ತೀರಿ.... ಇದು ಸರಿಯಲ್ರೀ.... ಕಲಬುರ್ಗಿ ಪಾಲಿಕೆ ನೌಕರರ ಪಗಾರ ಎರಡು ವರ್ಷದಿಂದಲ್ಲೂ ಸರಕಾರ ಕೊಡೋದು ಆದ ಅಂದ ಮ್ಯಾಲ, ದುಡಿದವರ ರೊಕ್ಕ ಕೊಡೋದು ನ್ಯಾಯದ ಮಾತು ಹೌದಲ್ಲವ್ರೋ?! "



ಧರಂ

ಎಂಬ ಧರ್ಮಸಿಂಗ್‌ರ ಒಂದೊಂದು ಮಾತುಗಳೂ ಅಲ್ಲಿ ಸೇರಿದ್ದ ಎಲ್ಲರನ್ನೂ ದಿಗ್ಮೂಢಗೊಳಿಸಿದ್ದವು. ಯಡ್ಡಿಗಂತೂ ಅನಿರೀಕ್ಷಿತವಾಗಿ ಬಂದ ಧರ್ಮಸಿಂಗ್‌ರ ಮಾತುಗಳು ಅವರನ್ನು ಚುಚ್ಚಿದ್ದವು. ಕಳ್ಳನ ಮುಖ ಉಳ್ಳುಳ್ಳಗೆ ಎಂಬಂತೆ ಯಡ್ಡಿ ಗಪ್ ಚುಪ್ ಕುಳಿತುಕೊಂಡರು. ಇದನ್ನೆಲ್ಲ ಮರೆತವರಂತೆ ಮತ್ತೆ ಕಲಬುರ್ಗಿಗೆ ತನ್ನ ಮಂತ್ರಿಮಂಡಲದ ಸದಸ್ಯರೊಂದಿಗೆ ಬಂದು ಭಾರಿ ಕಡಿದು ಕಟ್ಟೆ ಹಾಕುತ್ತೇನೆ ಎನ್ನುವ ಭರವಸೆಯೊಂದಿಗೆ ಭರಪೂರವಾದ ಆಶ್ವಾಸನೆಗಳನ್ನು ಕೊಟ್ಟು ಹೋದರು.

ಕಲಬುರ್ಗಿ ಮಹಾನಗರ ಪಾಲಿಕೆಯಲ್ಲಿ ದಿನಗೂಲಿ ಮಾಡುವ 470 ಜನ ನೌಕರರ ಪಗಾರ 27 ತಿಂಗಳುಗಳಿಂದಲೂ ಕೊಟ್ಟಿಲ್ಲದ ಸರಕಾರದ ರಣಹೇಡಿ ನೀತಿಯನ್ನು ಮುದ್ದಾಂ ಮರೆತರು. ಆದರೆ ರೊಚ್ಚಿಗೆದ್ದ ಕಲಬುರ್ಗಿಯ ಮಹಾನಗರ ಪಾಲಿಕೆಯ ನೌಕರರು ಮಾತ್ರ ರಾಜಾರೋಷವಾಗಿ ಪೊಲೀಸರ ಸರ್ಪಗಾವಲನ್ನು ಭೇದಿಸಿ ಸರಕಾರಿ ಬಸ್‌ವೊಂದಕ್ಕೆ ಬೆಂಕಿಯನ್ನು ಇಟ್ಟು ತಮ್ಮ ನೋವನ್ನು ವ್ಯಕ್ತಪಡಿಸಿದರು. ಮತ್ತೊಂದು ಆಶ್ಚರ್ಯದ ಸಂಗತಿಯೆಂದರೆ ಹೀಗೆ ಸಾರ್ವಜನಿಕವಾಗಿ ಬಸ್‌ಗೆ ಬೆಂಕಿಯನ್ನು ಹಚ್ಚುವಾಗ ಪಾಲಿಕೆಯ ದಿನಗೂಲಿ ನೌಕರರು ತಮ್ಮ ಹೆಂಡತಿ ಮಕ್ಕಳ ಸಮೇತ ರೋಡ್‌ನಲ್ಲಿ ನಿಂತು ಪೊಲೀಸರನ್ನು - ಅಗ್ನಿಶಾಮಕ ದಳದವರನ್ನು ತಮ್ಮ ಹತ್ತಿರಕ್ಕೂ ಬಿಟ್ಟುಕೊಳ್ಳದೆ, ಸರಕಾರದ ವಿರುದ್ಧ ಆಕ್ರೋಶಗೊಂಡು ಮುರ್ದಾಬಾದ್ ಕೂಗುತ್ತಿರುವುದು ಅವರೆಲ್ಲರ ಸಾತ್ವಿಕ ನೋವಿಗೆ ಹಿಡಿದ ಕನ್ನಡಿಯಾಗಿತ್ತು.

ಆದರೆ ಯಡ್ಡಿಯ ನಿರ್ಧಯಿ ಸರಕಾರ ಕನಿಷ್ಟ ನಾಚಿಕೆಯೂ ಇಲ್ಲದೆ ಅವರನ್ನು ದನಗಳಂತೆ - ಕುರಿಗಳಂತೆ ಭಾವಿಸಿ ಪೊಲೀಸ್ ವ್ಯಾನ್‌ಗಳಲ್ಲಿ ತುರಿಕಿಕೊಂಡು ದೂರದ ಬಳ್ಳಾರಿ ಜೈಲಿಗೆ ಕರೆದೊಯ್ಯಿತು. ಪ್ರಜಾಪ್ರಭುತ್ವ ಪದ್ಧತಿಯ ಸರಕಾರದಲ್ಲಿ ನ್ಯಾಯ ಯುತವಾದ ಬೇಡಿಕೆಗಳಿಗೆ ಪ್ರತಿಭಟಿಸುವುದು, ಸತ್ಯಾಗ್ರಹ ಮುಂತಾದವುಗಳನ್ನು ಮಾಡುವುದು ಜನರ ಹಕ್ಕು ಎಂಬ ಕನಿಷ್ಠ ತಿಳಿವಳಿಕೆಯೂ ಇಲ್ಲದ ಯಡ್ಡಿ ಸಂಪೂರ್ಣ ಕಣ್ಣುಮುಚ್ಚಿಕೊಂಡಿದ್ದರು.

ರೈತರ ಬವಣೆಗಳನ್ನು ಮುಂದಿಟ್ಟು ಹೋರಾಟ ರೂಪಿಸಿದ್ದ ಕೇದಾರ ಲಿಂಗಯ್ಯ ಹಿರೇಮಠ ಎಂಬ ರೈತ ಹೋರಾಟಗಾರನನ್ನು, ಬಿ.ಆರ್. ಪಾಟೀಲ ಎಂಬ ಪ್ರಗತಿಪರ ಚಿಂತಕ, ಶಾಸಕನನ್ನು ಹಾಗೂ ಎಸ್. ಕೆ.ಕಾಂತಾ ಎಂಬ ಮಾಜಿ ಕಾರ್ಮಿಕ ಸಚಿವನನ್ನು ಹಾಗೂ ಕ.ರ.ವೇದಿಕೆಯ ಮುಖಂಡನನ್ನೂ ವಿನಾಕಾರಣ ಬಂಧಿಸಿ ಜೈಲಿಗೆ ಕಳಿಸಿದ ಯಡ್ಡಿ ಸರಕಾರದ ನಿರ್ಲಜ್ಜ ನೀತಿಯನ್ನು ಜನಸಾಮಾನ್ಯರು ಪಕ್ಷ ಭೇದವನ್ನು ಮರೆತು ಟೀಕಿಸುತ್ತಿರುವುದು ಸರಕಾರದ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿತ್ತು. ●



ಭೀಮಾ ತೀರದ ಹಂತಕರ ನೆರಳು

ನಾಲ್ಕು ಸುಫಾರಿ ಕಿಲ್ಲರ್ಸ್ ಅರೆಸ್ಟ್

ಭೀಮಾ ತೀರದ ಅಳಿದುಳಿದ ಹಂತಕರು ಆಗಾಗ ಸುದ್ದಿ ಮಾಡುತ್ತಿದ್ದಾರಾದರೂ ಹೆಚ್ಚೂಕಡಿಮೆ ಆ ತಂಡ ಅಳಿವಿನಂಚಿನಲ್ಲಿದೆ. ಈ ಮಧ್ಯೆ ನಾಗರಾಜ ಜಂಬಗಿ, ಪ್ರವೀಣ್ ಶಿಂತ್ರೆಗಳ ಭಜರಂಗಿ ಗ್ಯಾಂಗು ಸರಣಿ ಹತ್ಯೆಗಳ ಮೂಲಕ ಮುಂಬೈ-ಕರ್ನಾಟಕದ ಜನರಲ್ಲಿ ಭಯ ಹುಟ್ಟಿಸಿತ್ತು. ಕೋರ್ಟು, ಸೇತುವೆ ಸ್ಫೋಟಕ್ಕೆ ಯತ್ನಿಸಿ, ಅಲ್ಪಸಂಖ್ಯಾತರ ಮೇಲೆ ಗೂಬೆ ಕೂರಿಸಲು ಸಂಚು ಮಾಡಿತ್ತು, ಆ ಗ್ಯಾಂಗೂ ಈಗ ಜೈಲು ಪಾಲಾಗಿದೆ.

ಭೀಮಾತೀರದ ಹಂತಕರು, ಭಜರಂಗಿ ಕಿಲ್ಲರ್ಸ್‌ಗಳ ಶೈಲಿಯಲ್ಲೇ ಬಾಗಲಕೋಟೆ, ಬಿಜಾಪುರ, ಬೆಳಗಾವಿ, ಗುಲ್ಬರ್ಗಾ ಜಿಲ್ಲೆಗಳಲ್ಲಿ ಸುಫಾರಿ ಹತ್ಯೆಗಳನ್ನು ಮಾಡುತ್ತ ಜನರಲ್ಲಿ ಭೀತಿ ಹುಟ್ಟಿಸಿದ್ದ ಮತ್ತೊಂದು ಗ್ಯಾಂಗ್ ಬಲೆಗೆ ಬಿದ್ದಿದೆ. ಅದು ಕಾಶೀನಾಥ್ ರಾಮಪ್ಪ ಕಾರಿಕೋಳ ಎಂಬುವವನ ಧನದಾಹಿ ರಕ್ತಪಿಪಾಸು ಗ್ಯಾಂಗ್. ಸದ್ಯದ ವಿಚಾರಣೆಯ ಪ್ರಕಾರ, ಈ ಗ್ಯಾಂಗ್ ಏಳು ಹತ್ಯೆಗಳನ್ನು, ಹಲವಾರು ದರೋಡೆಗಳನ್ನು ಮಾಡಿದೆ. ಈ ಗ್ಯಾಂಗ್ ಪಳಗಿದ್ದು ಭೀಮಾತೀರದ ಹಂತಕರ ತಂಡದ ಶೆಟ್ಟಿ ಎಂಬಾತನ ಕೈಯಲ್ಲಿ.

ಅಥಣಿ ತಾಲ್ಲೂಕಿನ ಐಗಳಿ ಠಾಣಾವ್ಯಾಪ್ತಿಯಲ್ಲಿ ಕೊಳವೆ ಬಾವಿ ತೋಡುವ ಕೆಲಸ ಮಾಡುವ ತಾರಾಸಿಂಗ್ ಲಂಬಾಣಿ ಎಂಬಾತನ ಕುಟುಂಬ ನೆಲೆಗೊಂಡಿತ್ತು. ತಾರಾಸಿಂಗ್ ಮತ್ತು ಪತ್ನಿ ರಾಜಕ್ಕನ ನಡುವೆ ಯಾವುದೋ ಕಾರಣಕ್ಕೆ ಜಗಳವಾಗಿತ್ತು. ರಾಜಕ್ಕ ನೀಡಿದ ಸುಪಾರಿ ಪಡೆದ ಕಾಶೀನಾಥ್ ಕಾರಿಕೊಳ್ಳ, ಬಿಜಾಪುರದ ಶಹಪೇಟೆಯ ಮಹೇಂದ್ರ ಸುನಗಾರ, ದುಂಡಪ್ಪ ಅಂಬಿಗೇರ, ಚಂದ್ರು ಹುಲಗಬಾಳ ಎಂಬ ಕೇಡಿಗಳು ರಾಮಭಾಗ ತಾಲ್ಲೂಕಿನ ಮುಗಳಖೋಡದ ಕಬ್ಬಿನ ಗದ್ದೆಯೊಂದರಲ್ಲಿ ಕೊಳವೆಬಾವಿ ತೋಡಲು ಹೋಗಿದ್ದ ತಾರಾಸಿಂಗ್‌ನನ್ನು ಅಲ್ಲೇ ಬರ್ಬರವಾಗಿ ಕೊಂದು ಹಾಕಿತ್ತು. ಈ ಕೊಲೆಗಾಗಿ ರಾಜಕ್ಕನಿಂದ ಈ ಹಂತಕರಿಗೆ ಸಿಕ್ಕಿದ್ದು 75 ಸಾವಿರ ರೂಪಾಯಿ. ಈ ಮೊದಲು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ರಾಜಶೇಖರ ಎನ್ನುವಾತನನ್ನು ಕೊಂದು, ಹುಕ್ಕೇರಿ ಚೆಕ್‌ಪೋಸ್ಟ್ ಬಳಿ ಪೆಟ್ರೋಲ್ ಸುರಿದು ಸುಟ್ಟುಹಾಕಿದ್ದರು.



ನ್ಯಾಮಗೌಡ

ನಂತರ ಬೆಳಗಾವಿ ಜಿಲ್ಲೆಯ ಯಮಕನಮರಡಿ ಠಾಣಾ ವ್ಯಾಪ್ತಿಯ ಬೆಳ್ಳೂರ ಗ್ರಾಮದಲ್ಲಿ ವಿಜಯಕುಮಾರ್ ಎಂಬುವವನನ್ನು ಪೈಶಾಚಿಕವಾಗಿ ಹತ್ಯೆ ಮಾಡಿದ್ದರು. ಬಿಜಾಪುರ, ಚಡಚಣ, ಸಿಂಧಗಿ, ಇಂಡಿ, ತಾಳಿಕೋಟೆಗಳಲ್ಲೂ ಈ ತಂಡ ಸುಪಾರಿ ಕೊಲೆಗಳನ್ನು ಮಾಡಿದೆ.

ಕಳೆದವಾರ ಸುಪಾರಿ ಕೊಲೆಯೊಂದನ್ನು ಮಾಡಲು ಈ ತಂಡ ಅಥಣಿಗೆ ಬಂದಿತ್ತು. ಇದರ ಸುಳಿವು ಹಿಡಿದ ಅಥಣಿಯ ಸಿಪಿಐ ಜೈಪ್ರಕಾಶ್ ನ್ಯಾಮಗೌಡ ತಂಡ ಈ ನಾಲ್ವರು ಹಂತಕರನ್ನು ಬಲೆಗೆ ಹಾಕಿದ್ದಾರೆ.

ಭೀಮಾ ತೀರದ ಹಂತಕರ ಗ್ಯಾಂಗು ಮತ್ತು ಜಂಬಗಿಯ ರಾಮಸೇನೆ ಗ್ಯಾಂಗುಗಳ ಜೊತೆ ಈ ಕಾರಿಕೋಳ್ಳನ ಗ್ಯಾಂಗಿಗೆ ಸಂಬಂಧವಿತ್ತೇ? ಇವರು ಬರೀ ಹಣಕಾಸಿಗಾಗಿ ಕೊಲೆ ಮಾಡುತ್ತಾ ಬಂದರೋ ಅಥವಾ ಇದರ ಹಿಂದೆ ಹೀಗೆ ಹಿಂದೂತ್ವವಾದಿಗಳ ಚಿತಾವಣಿ ಇದೆಯೋ ಎಂಬುದನ್ನು ಪೊಲೀಸರು ಪತ್ತೆ ಹಚ್ಚಬೇಕಾಗಿದೆ

● ಮಹಾಲಿಂಗಪ್ಪ ಆಲಬಾಳ

…ೇವದುರ್ಗ: ನೀರು ಬಂತು, ಸಾಲ ನಿಂತಿತು...

…ಜುಂಡಪ್ಪ ವರದಿಯಲ್ಲಿ ನಮೂದಿಸಲ್ಪಟ್ಟಿರುವ …ಿದ್ಧ, ಹಿಂದುಳಿದ ತಾಲ್ಲೂಕುಗಳ ಪೈಕಿ …ಊರಿನ ದೇವದುರ್ಗವೂ ಒಂದು. ಇತ್ತೀಚಿನ … ಪ್ರತಿವರ್ಷ ದೇವದುರ್ಗದ ಕೃಷಿ ಕಾರ್ಮಿಕರು …ರಿಗೆ ಗುಳೆ ಹೋಗೋದು ಸಾಮಾನ್ಯವಾಗಿತ್ತು. …ಎರಡು ವರ್ಷಗಳ ಹಿಂದೆ ತುಂಗಭದ್ರೆ ಈ …ಹರಿದಳು. ತುಂಗಭದ್ರಾ ಬಲದಂಡೆ ಕಾಲುವೆ …ಾದ ನಂತರ ಇಲ್ಲಿ ಹತ್ತಿ, ಮೆಣಸಿನಕಾಯಿ …ಬೆಳೆಗಳ ಕೃಷಿ ಜೋರಾಗಿತು. ಆಗಿನಿಂದ ಕೃಷಿ …ಕರು ಗುಳೆ ಹೋಗೋದು ಕಡಿಮೆಯಾಗಿದೆ. …ರ ಇಲ್ಲಾ ರೈತರು ಸಮಸ್ಯೆಗೆ ಸಿಲುಕಿದ್ದಾರೆ. …ೀರು ಬಂತು, ಆದರೆ ನೀರಾವರಿಗೆ ತಕ್ಕಂತೆ …ಬೀಜಗೊಬ್ಬರ, ಕ್ರಿಮಿಕೀಟನಾಶಕಗಳನ್ನು ಕೊಳ್ಳಲು ದುಡ್ಡು … ಸರ್ಕಾರಗಳೇನೋ ರೈತರಿಗೆ ಸುಲಭದ ದರದಲ್ಲಿ …ಸಾಲ ಬಡ್ಡಿಯಲ್ಲಿ ಬೆಂಬಲ ಬೆಲೆ ಘೋಷಿಸಿ … ಮಾಡಿದೆ ಬಿಡುತ್ತವೆ. ಆದರೆ ತಮ್ಮ ಕರ್ತವ್ಯ …ಮರೆತ ಬ್ಯಾಂಕುಗಳು ಕೂಡಾ ಲೋಕಲ್ ಪುಢಾರಿಗಳ ಜೊತೆ ಶಾಮೀಲಾಗಿ ಪ್ರಾಮಾಣಿಕ ರೈತರನ್ನು ಗೋಳು ಹೊಯ್ದುಕೊಳ್ಳುತ್ತಿವೆ. ಅದಕ್ಕೆ ದೇವದುರ್ಗದ ರೈತರ ಸಮಸ್ಯೆಯೇ ನಿದರ್ಶನ.

ಇಲ್ಲೀಗ ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್ (ಎಸ್‌ಬಿಎಚ್) ಮತ್ತು ಪ್ರಗತಿ ಗ್ರಾಮೀಣ ಬ್ಯಾಂಕ್‌ಗಳು ರೈತರಿಗೆ ಸಾಲ ನೀಡುತ್ತಿವೆ. ರೈತರು ನೇರವಾಗಿ ಹೋಗಿ ಸಾಲ ಕೇಳುತ್ತಾರೆ. ಆದರೆ ಬ್ಯಾಂಕ್‌ನವರು ತಿಂಗಳಾನುಗಟ್ಟಲೇ ಕುಂಟುನೆಪ ಹೇಳುತ್ತ ಸತಾಯಿಸುತ್ತಾರೆ. ಕೊನೆಗೆ ಎಂಟ್ರಿ ಹೊಡೆಯುವವರೇ ಬ್ರೋಕರ್‌ಗಳೆಂಬ ಪೊಲಿಟಿಕಲ್ ಪುಢಾರಿಗಳು. ಇವರು ರೈತರನ್ನು ಸಂಪರ್ಕಿಸಿ, ಎಲ್ಲ ಬ್ಯಾಂಕುಗಳಿಂದ ನೋ ಡ್ಯೂ ಸರ್ಟಿಫಿಕೇಟ್ ಕೊಡಿಸುತ್ತಾರೆ. ಇದು ಸಿಕ್ಕ ನಂತರ ರೈತರು ಮತ್ತೆ ಓಡಾಡಿ ಸಾಲ ಪಡೆಯುತ್ತಾರೆ. ಬ್ಯಾಂಕಿನವರೊಂದಿಗೆ ಶಾಮೀಲಾಗಿರುವ ಬ್ರೋಕರ್‌ಗಳು ಒಂದು ಲಕ್ಷ ಸಾಲಕ್ಕೆ ಹತ್ತು ಸಾವಿರ ಕಿತ್ತುಕೊಳ್ಳುತ್ತಾರೆ. ಇನ್ನು ಕಾಗದಪತ್ರಗಳ ತಯಾರಿ, ಓಡಾಟದ ಖರ್ಚು ಮೂರ್‍ನಾಲ್ಕು ಸಾವಿರ. ಇಷ್ಟೆಲ್ಲದರ ನಡುವೆ ಶೇ. 7 ರ ಬಡ್ಡಿಭಾರ.

ಪ್ರಾಮಾಣಿಕವಾಗಿ ಮರುಪಾವತಿ ಮಾಡುವ ರೈತರು ಮಾತ್ರ ಬ್ಯಾಂಕ್ ತಿರುಗಿ ತಿರುಗಿ ಸುಸ್ತಾಗಿ ಹೊರಗಡೆ ಸಾಲ ಮಾಡಿ ಕಷ್ಟಕ್ಕೀಡಾಗುತ್ತಿದ್ದಾರೆ. ರೈತರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ ಯಡಿಯೂರಪ್ಪ, ಕೃಷಿ ಸಮಸ್ಯೆಯೇ ಗೊತ್ತಿರದ ಕೃಷಿ ಸಚಿವ ರವೀಂದ್ರನಾಥ್ ಬರೀ ಭಾಷಣದಲ್ಲೇ ರೈತರುದ್ಧಾರ ಮಾಡುತ್ತಿದ್ದಾರೆ. ಇನ್ನು ಇಲ್ಲಿ ಜೆಡಿಎಸ್‌ನಿಂದ ಗೆದ್ದು ಆಪರೇಷನ್ ಕಮಲದಲ್ಲಿ ಸಗಣಿ ತಿಂದಿರುವ ಶಾಸಕ, ಸಚಿವ ಶಿವನಗೌಡ ನಾಯಕನಿಗಂತೂ ರೊಕ್ಕದ ಹುಚ್ಚು ಹಿಡಿದಿದೆ.

ರೈತಸಂಘ, ಕಮ್ಯುನಿಸ್ಟ್ ಪಕ್ಷಗಳು, ಕವಿರಂಗಳ ನಿರಂತರ ಹೋರಾಟದ ಫಲವಾಗಿ ಇಲ್ಲಿಗೆ ತುಂಗಭದ್ರೆ ಬಂದಿದ್ದಾಳೆ. ಆದರೆ ಈಗ ಕೃಷಿ ಅಧಿಕಾರಿಗಳು, ಬ್ಯಾಂಕ್‌ನವರು ರೈತರನ್ನು ಶೋಷಣೆ ಮಾಡುತ್ತಿದ್ದಾರೆ. ನಿಸ್ತೇಜಗೊಂಡಿರುವ ಚಳವಳಿಗಳು ಈಗಲಾದರೂ ಎಚ್ಚೆತ್ತುಕೊಳ್ಳುವಂತಾಗಲಿ. ●

ವಿಮಾ ಖಾಸಗೀಕರಣ: ಯಾರ ಒಳಿತಿಗೆ?



ಸೆಪ್ಟೆಂಬರ್ 1, 2009 ಕ್ಕೆ ಭಾರತೀಯ ಜೀವವಿಮಾ ನಿಗಮ(ಎಲ್‌ಐಸಿ-LIC) ವು ತನ್ನ ಸಾರ್ಥಕ 53 ವರ್ಷಗಳನ್ನು ಪೂರೈಸುತ್ತಿದೆ. ಸರ್ಕಾರದ ಕೇವಲ 5 ಕೋಟಿ ರೂಪಾಯಿ ಬಂಡವಾಳದೊಂದಿಗೆ ಆರಂಭವಾದ ಈ ಸಂಸ್ಥೆ ಇಂದು ದೇಶದ ಅತಿದೊಡ್ಡ ಅರ್ಥ ಸಂಸ್ಥೆಯಾಗಿ ಬೆಳೆದಿದ್ದು ಒಟ್ಟು 873551.35 ಕೋಟಿ ರೂಪಾಯಿಗಳ ಆಸ್ತಿಯನ್ನು ಹೊಂದಿದೆ. ಈ 53 ವರ್ಷಗಳಲ್ಲಿ ಎಲ್‌ಐಸಿಯ ಸಾಧನೆ ಅತ್ಯಂತ ಶ್ಲಾಘನೀಯ.

1956 ರಲ್ಲಿ ಜೀವವಿಮಾ ವ್ಯವಹಾರವನ್ನು ರಾಷ್ಟ್ರೀಕರಣ ಮಾಡಿದಾಗ ಅದಕ್ಕಿದ್ದ ಕಾರಣಗಳು ಎರಡು. ವಿಮಾ ಪಾಲಿಸಿದಾರರ ಹಣಕ್ಕೆ ಭದ್ರತೆಯೊದಗಿಸುವುದು ಮೊದಲನೆಯದು. ಎರಡನೆಯದು ಈ ದೇಶದ ಮೂಲಭೂತ ಸೌಕರ್ಯ ರಚನೆಗೆ ಹಾಗೂ ಜನಕಲ್ಯಾಣ ಯೋಜನೆಗಳಿಗೆ ಜನತೆಯ ಸಣ್ಣ ಉಳಿತಾಯವನ್ನು ಕ್ರೋಢೀಕರಿಸುವುದು. ಆ ಎರಡೂ ಉದ್ದೇಶಗಳನ್ನು ಎಲ್‌ಐಸಿ ಯು ಅತ್ಯಂತ ಸಮರ್ಥವಾಗಿ ಈಡೇರಿಸಿದೆ. ಇಂದು ಪಾಲಿಸಿ ದಾವೆಗಳ ಪಾವತಿ (Claim settlement) ಎಲ್‌ಐಸಿಯದು ವಿಶ್ವದಾಖಲೆ. ಅದರ ದಾವೆಗಳ ಪಾವತಿಯ ದರ ಶೇ. 97.29. ಹಾಗೆಂದೇ ಅದು ದೇಶದ ಅತ್ಯಂತ ವಿಶ್ವಾಸಾರ್ಹ ಸೇವಾ ಬ್ರಾಂಡ್ ಎಂದು ಆಯ್ಕೆಯಾಗಿದೆ. ಕೆರೆಯ ನೀರನು ಕೆರೆಗೆ ಚೆಲ್ಲಿ ಎಂಬಂತೆ ಜನತೆಯ ಹಣವನ್ನು ಜನಕಲ್ಯಾಣಕ್ಕೆ ಕ್ರೋಢೀಕರಿಸುವಲ್ಲಿ ಎಲ್‌ಐಸಿ ಯು ಅತ್ಯಂತ ನಿಚ್ಚಳ ಸಾಧನೆ ತೋರಿದೆ. ಕಳೆದ ಆರ್ಥಿಕ ವರ್ಷದಲ್ಲಿ ಎಲ್‌ಐಸಿ ಯು ವಿವಿಧ ಸರ್ಕಾರಿ ಠೇವಣಿ (Govt. securities) ಯೋಜನೆ ತೊಡಗಿಸಿರುವ ಮೊತ್ತ 428736 ಕೋಟಿ ರೂ.ಗಳು. ವಿವಿಧ ಜನಕಲ್ಯಾಣ ಯೋಜನೆಗಳಿಂದ ವಿದ್ಯುತ್, ಗೃಹ ನಿರ್ಮಾಣ, ನೀರು ಪೂರೈಕೆ, ನೀರಾವರಿ, ಸಾರಿಗೆ ಇವುಗಳಲ್ಲಿ ತೊಡಗಿಸಿರುವ ಮೊತ್ತ 1,00,789 ಕೋಟಿ ರೂ.ಗಳು. ರಾಷ್ಟ್ರೀಕರಣವಾದಾಗಿನಿಂದ ಇಂದಿನವರೆಗೆ ವಿವಿಧ ಪಂಚವಾರ್ಷಿಕ ಯೋಜನೆಗಳಲ್ಲಿ (ಎರಡನೆ ಪಂಚವಾರ್ಷಿಕ ಯೋಜನೆಯಿಂದ ಇಂದಿನ ಹನ್ನೊಂದನೆ ಪಂಚವಾರ್ಷಿಕ ಯೋಜನೆಯವರೆಗೆ) ಎಲ್‌ಐಸಿ ತೊಡಗಿಸಿರುವ ಒಟ್ಟು ಮೊತ್ತ ರೂ. 8,65,365 ಕೋಟಿ.

ಈ 53 ವರ್ಷಗಳಲ್ಲಿ ದೇಶದಾದ್ಯಂತ ವಿಮೆಯ ಅರಿವನ್ನು ಮೂಡಿಸುವಲ್ಲಿ ಎಲ್‌ಐಸಿಯು ಸತತವಾಗಿ ಕೆಲಸ ಮಾಡಿದೆ. ಪ್ರೀಮಿಯಂನ ರೂಪದಲ್ಲಿ ಎಲ್‌ಐಸಿ ಸಂಗ್ರಹಿಸಿರುವ ಉಳಿತಾಯದ ಹಣ ದೇಶದ ಜಿಡಿಪಿಯ ಶೇ. 4 ರಷ್ಟು. ಇದು ಅಮೆರಿಕೆಯೂ ಸೇರಿದಂತೆ ಎಷ್ಟೋ ಅಭಿವೃದ್ಧಿ ಹೊಂದಿದ ದೇಶಗಳಿಗಿಂತ ಹೆಚ್ಚಿನದು.

ದುರದೃಷ್ಟವಶಾತ್ 90 ರ ದಶಕದಲ್ಲಿ ನಮ್ಮ ಸರ್ಕಾರ ನವಉದಾರೀಕರಣ ನೀತಿಯನ್ನು ಅನುಸರಿಸ ಹೊರಟಾಗಿನಿಂದ ಎಲ್‌ಐಸಿಯನ್ನು ಖಾಸಗೀಕರಣಗೊಳಿಸುವ ಎಲ್ಲ ಪ್ರಯತ್ನಗಳಾಗುತ್ತಿವೆ. 1999 ರಲ್ಲಿ ದೇಶದ ಜನತೆಯ ತೀವ್ರ ವಿರೋಧದ ನಡುವೆಯೂ ಸರ್ಕಾರ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆಯನ್ನು ಸ್ವೀಕರಿಸುವ ಮೂಲಕ ದೇಶದ ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆದಿಟ್ಟಿತು. ಇಂದು ದೇಶದಲ್ಲಿ 21 ಖಾಸಗಿ ಜೀವವಿಮಾ ಸಂಸ್ಥೆಗಳು ಮತ್ತು 20 ಖಾಸಗಿ ಸಾಮಾನ್ಯ ಜೀವವಿಮಾ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ತೀವ್ರ ಪೈಪೋಟಿಯ ನಡುವೆಯೂ ರಾಷ್ಟ್ರೀಕೃತ ಜೀವವಿಮಾ ಸಂಸ್ಥೆಗಳು ವಿಮಾ ಮಾರುಕಟ್ಟೆಯಲ್ಲಿ ತಮ್ಮ ಮೇಲುಗೈ ಸಾಧಿಸಿವೆ. ಇದರಿಂದಾಗಿ ದೇಶದ ಆರ್ಥಿಕತೆಗೆ ಅತ್ಯಂತ ದೊಡ್ಡ ಕೊಡುಗೆ ನೀಡುತ್ತಿವೆ. ಈ ವರ್ಷವೊಂದರಲ್ಲೇ ಎಲ್‌ಐಸಿಯು 1,65,000 ಕೋಟಿ ರೂಪಾಯಿಗಳನ್ನು ದೇಶದ ಆರ್ಥಿಕತೆಯಲ್ಲಿ ತೊಡಗಿಸುವ ನಿರೀಕ್ಷೆಯಿದೆ. ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡಕ್ಕೆ ಮಣಿದು ರಾಷ್ಟ್ರೀಕೃತ ವಿಮಾ ಸಂಸ್ಥೆಗಳನ್ನು ದುರ್ಬಲಗೊಳಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ವಿಮಾ ಉದ್ದಿಮೆಯನ್ನು ಇನ್ನಷ್ಟು ಉದಾರೀಕರಣಗೊಳಿಸಲು ಹೊರಟಿರುವ ಸರ್ಕಾರ ಈ ಎರಡು ಮಸೂದೆಯನ್ನು ಕೈಗೆತ್ತಿಕೊಂಡಿದೆ. ಅದು ರಾಜ್ಯಸಭೆಯಲ್ಲಿ ಸಮಗ್ರ ವಿಮಾ ಕಾಯಿದೆಯನ್ನು ಮಂಡಿಸಿದ್ದು ಸದ್ಯಕ್ಕೆ ಅದು ಸಂಸತ್ತಿನ ಸ್ಥಾಯಿ ಸಮಿತಿ (standing committee) ಯ ಪರಿಶೀಲನೆಯಲ್ಲಿದೆ. ಕಳೆದ ಅಧಿವೇಶನದಲ್ಲಿ ಎಲ್.ಐ.ಸಿ. ತಿದ್ದುಪಡಿ ಮಸೂದೆಯನ್ನು ಮಂಡಿಸಿದೆ.

ರಾಜ್ಯಸಭೆಯಲ್ಲಿ ಮಂಡಿಸಿರುವ ಸಮಗ್ರ ವಿಮಾ ಕಾಯ್ದೆಯು ಈ ಕೆಳಕಂಡ ತಿದ್ದುಪಡಿಗಳಿಗೆ ಅನುವು ಮಾಡಿಕೊಡುತ್ತದೆ. ಮೊದಲನೆಯದು ವಿಮಾ ಉದ್ದಿಮೆಯಲ್ಲಿ ವಿದೇಶೀ ನೇರ ಬಂಡವಾಳ (ಎಫ್.ಡಿ.ಐ.)ವನ್ನು ಶೇ. 26 ರಿಂದ ಶೇ. 49 ಕ್ಕೆ ಏರಿಸುವುದು.

ಸಾಮಾನ್ಯ ವಿಮಾ ಸಂಸ್ಥೆಗಳ ಖಾಸಗೀಕರಣ ರೀ ಇನ್ಶೂರೆನ್ಸ್ ಕಂಪನಿಗಳಲ್ಲಿ ಶೇ. 100 ವಿದೇಶೀ ಬಂಡವಾಳ ಹೂಡಿಕೆಗೆ ಅವಕಾಶ.

ಎಲ್‌ಐಸಿಯಂತೆಯೇ ಸಾರ್ವಜನಿಕ ವಲಯದ ನಾಲ್ಕೂ ವಿಮಾ ಸಂಸ್ಥೆಗಳೂ ಅದ್ಭುತ ಸಾಧನೆಗೈದಿವೆ. ಈ ದೇಶದ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿವೆ. ಈ ಸಂಸ್ಥೆಗಳ ಖಾಸಗೀಕರಣವೆಂದರೆ ಅದು ಖಾಸಗಿ ಬಂಡವಾಳದಾರರಿಗೆ ಲಾಭದ ಲೂಟಿಗೆ ಮಾಡಿಕೊಡುವ ಅವಕಾಶವಾಗಿದೆ. ವಿಮಾ ಉದ್ದಿಮೆಯಲ್ಲಿ ವಿದೇಶೀ ನೇರ ಬಂಡವಾಳದ ಹೆಚ್ಚಳ ಈ ದೇಶದ ಆರ್ಥಿಕತೆಗೆ ಬಹುದೊಡ್ಡ ಪೆಟ್ಟಾಗಲಿದೆ. ವಿದೇಶೀ ನೇರ ಬಂಡವಾಳದ ಹೆಚ್ಚಳದಿಂದ ಈ ದೇಶದ ಜನತೆಯ ಉಳಿತಾಯದ ಹಣವನ್ನು ವಿದೇಶೀ ಬಂಡವಾಳಗಾರರ ಕೈಯಲ್ಲಿಟ್ಟಂತಾಗುತ್ತದೆ. ಯಾವುದೇ ದೇಶದ ಆರ್ಥಿಕತೆಯಲ್ಲಿ ಆ ದೇಶದ ಜನತೆಯ ಉಳಿತಾಯದ ಹಣ ಬಹುದೊಡ್ಡ ಪಾತ್ರ ವಹಿಸುತ್ತದೆ. ಖ್ಯಾತ ಅರ್ಥಶಾಸ್ತ್ರಜ್ಞ ನೊಬೆಲ್ ಪಾರಿತೋಷಕ ವಿಜೇತ ಮೈಖೆಲ್ ಸ್ಪೆನ್ಸ್ ಹೇಳುವಂತೆ "ಉತ್ಕರ್ಷಕ್ಕೇರುತ್ತಿರುವ ಯಾವುದೇ ಆರ್ಥಿಕತೆಯ ಹಣಕಾಸಿನ ಅಗತ್ಯಗಳನ್ನು ಪೂರೈಸುವಲ್ಲಿ ದೇಶದ ಜನತೆಯ ಉಳಿತಾಯಕ್ಕೆ ವಿದೇಶೀ ನೇರ ಬಂಡವಾಳ ಒಂದು ಕಳಪೆ ಬದಲೀ ವ್ಯವಸ್ಥೆ." ಹೀಗಿರುವಾಗ ಸರ್ಕಾರ ತನ್ನ ಬೆಳೆಯುತ್ತಿರುವ ಆರ್ಥಿಕತೆಯ ಅಗತ್ಯಕನುಗುಣವಾಗಿ ವಿಮಾ ಉದ್ದಿಮೆಯಲ್ಲಿ ವಿದೇಶೀ ನೇರ ಬಂಡವಾಳ ಹೆಚ್ಚಳ ಅಗತ್ಯ ಎಂಬ ವಾದ ಹೂಡುವುದರಲ್ಲಿ ಯಾವುದೇ ಹುರುಳಿಲ್ಲ.

LIC भारतीय जीवन बीमा निगम LIFE INSURANCE CORPORATION OF INDIA

ಎಲ್‌ಐಸಿಯಂತೆಯೇ ಸಾರ್ವಜನಿಕ ವಲಯದ ನಾಲ್ಕೂ ವಿಮಾ ಸಂಸ್ಥೆಗಳೂ ಅದ್ಭುತ ಸಾಧನೆಗೈದಿವೆ. ಈ ದೇಶದ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿವೆ. ಈ ಸಂಸ್ಥೆಗಳ ಖಾಸಗೀಕರಣವೆಂದರೆ ಅದು ಖಾಸಗಿ ಬಂಡವಾಳದಾರರಿಗೆ ಲಾಭದ ಲೂಟಿಗೆ ಮಾಡಿಕೊಡುವ ಅವಕಾಶವಾಗಿದೆ.

ಜಗತ್ತಿನಾದ್ಯಂತ ವಿಮಾ ಉದ್ದಿಮೆಯ ಬೆಳವಣಿಗೆ ಸ್ಥಗಿತವಾಗಿದೆ. ಹಲವಾರು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಈ ಬೆಳವಣಿಗೆ ನಕಾರಾತ್ಮಕವಾಗಿದೆ. ಹಾಗಾಗಿ ಭಾರತದ ವಿಮಾ ಮಾರುಕಟ್ಟೆ ಸಹಜವಾಗಿಯೇ ವಿದೇಶೀ ಬಂಡವಾಳಗಾರರಿಗೆ ಆಕರ್ಷಣೀಯವೆನಿಸಿದೆ. ಇಡೀ ಜಗತ್ತಿನ ಕಾಲುಭಾಗ ಯುವ ಜನತೆ ಭಾರತದಲ್ಲಿದ್ದಾರೆ. ಉಳಿತಾಯವೆನ್ನುವುದು ಈ ನಮ್ಮ ಸಂಸ್ಕೃತಿಯ ಅಂಗವೇ ಆಗಿದೆ. ಹಾಗಾಗಿ ಭಾರತದ ವಿಮಾ ಮಾರುಕಟ್ಟೆ ವಿಪುಲವಾದದ್ದು. ಅದನ್ನು ವಿದೇಶೀಯರಿಗೆ ತೆರೆದಿಟ್ಟಲ್ಲಿ ಈ ದೇಶದ ಜನತೆಯ ಅಮೂಲ್ಯವಾದ ಉಳಿತಾಯದ ಹಣವನ್ನು ದೇಶದಿಂದ ಹೊರತೆಗೆದುಕೊಂಡು ಹೋಗಲು ರಹದಾರಿ ಕಲ್ಪಿಸಿದಂತಾಗುತ್ತದೆ. ಜಗತ್ತನ್ನೇ ತತ್ತರಿಸಿದ ತೀವ್ರ ಆರ್ಥಿಕ ಕುಸಿತದಲ್ಲಿ ಜಗತ್ತಿನಾದ್ಯಂತ ಹಲವು ಬೃಹತ್ ವಿಮಾ ಸಂಸ್ಥೆಗಳು ದಿವಾಳಿಯಂಚನ್ನು ತಲುಪಿದ್ದವು. ಅಮೆರಿಕದ ಬೃಹತ್ ವಿಮಾ ಸಂಸ್ಥೆಯಾದ AIG ಸರ್ಕಾರದ 85 ಮಿಲಿಯನ್ bail out ನಿಂದಾಗಿ ಉಸಿರಾಡುವಂತಾಯ್ತು. ಪರಿಸ್ಥಿತಿ ಹೀಗಿರುವಾಗ ಸರ್ಕಾರ ಇಂತಹ ವಿದೇಶೀ ಸಂಸ್ಥೆಗಳಿಗೆ ನಮ್ಮ ವಿಮಾ ಉದ್ದಿಮೆಯನ್ನು ಹೆಚ್ಚು ಹೆಚ್ಚು ಮುಕ್ತಗೊಳಿಸುವುದು "ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತೆಯೇ ಸರಿ."

ಲೋಕಸಭೆಯಲ್ಲಿ ಮಂಡಿಸಿರುವ ಎಲ್‌ಐಸಿ ತಿದ್ದುಪಡಿ ಮಸೂದೆಯು ಈ ಕೆಳಕಂಡ ಬದಲಾವಣೆಗಳನ್ನು ಅನುವು ಮಾಡಿಕೊಡುತ್ತದೆ.

* ಎಲ್‌ಐಸಿಯ ಶೇರು ಬಂಡವಾಳವನ್ನು ಈಗಿನ 5 ಕೋಟಿಯಿಂದ ನೂರು ಕೋಟಿಗೆ ಏರಿಸುವುದು.
* ತನ್ನ ಲಾಭದ (surplus) ಶೇ. 95 ರಷ್ಟನ್ನು ಪಾಲಿಸಿದಾರರಿಗೆ ಬೋನಸ್ ನೀಡುವುದು ಮತ್ತು ಉಳಿದ ಶೇ. 5 ರಷ್ಟನ್ನು ಸರ್ಕಾರಕ್ಕೆ ಲಾಭಾಂಶದ (Dividend) ರೂಪದಲ್ಲಿ ನೀಡುವುದನ್ನು ಬದಲಿಸಿ ಶೇ. 90 ರಷ್ಟನ್ನು ಪಾಲಿಸಿದಾರರಿಗೆ ಬೋನಸ್ ರೂಪದಲ್ಲಿ ನೀಡುವುದು ಮತ್ತು ಸರ್ಕಾರಕ್ಕೆ ನೀಡುವ ಲಾಭಾಂಶವನ್ನು ಶೇ. 10 ಕ್ಕೆ ಏರಿಸುವುದು.
* ಎಲ್‌ಐಸಿಯ ಪಾಲಿಸಿಗಳಿಗೆ ಸಂಪೂರ್ಣ ಭದ್ರತೆ (sovereign guarantee) ಯಿದೆ. ಈ ಭದ್ರತೆಯ ಪ್ರಮಾಣವನ್ನು ಬದಲಿಸಲು ಸರ್ಕಾರಕ್ಕೆ ಅಧಿಕಾರ ನೀಡಬೇಕು.

ಸರ್ಕಾರ ಮಾಡಹೊರಟಿರುವ ಈ ಎಲ್ಲ ತಿದ್ದುಪಡಿಗಳೂ ಸಾರ್ವಜನಿಕ ವಲಯದ ಎಲ್‌ಐಸಿಯನ್ನು ದುರ್ಬಲಗೊಳಿಸುವ ಕ್ರಮಗಳೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇತರ ವಿಮಾ ಕಂಪನಿಗಳಂತೆ ವಿಮಾ ಪ್ರಾಧಿಕಾರ ಮಸೂದೆಯನ್ವಯ ಎಲ್‌ಐಸಿಯ ಬಂಡವಾಳವೂ ನೂರು ಕೋಟಿ ರೂಪಾಯಿಯಷ್ಟಿರಬೇಕೆಂಬುದರಲ್ಲಿ ಯಾವುದೇ ಹುರುಳಿಲ್ಲ. ಏಕೆಂದರೆ ಎಲ್‌ಐಸಿಯ ಒಟ್ಟು ಆಸ್ತಿಯು ಅದರ ಜವಾಬ್ದಾರಿಗಳಿಗಿಂತ ಸುಮಾರು 1.18 ಲಕ್ಷ ಕೋಟಿಗಳಿಗಿಂತ ಹೆಚ್ಚಾಗಿದೆ. ಒಟ್ಟು 8.73 ಲಕ್ಷ ಕೋಟಿಗೂ ಹೆಚ್ಚಿನ ಆಸ್ತಿ ಹೊಂದಿರುವ ಎಲ್‌ಐಸಿಗೆ ಸರ್ಕಾರದ 95 ಕೋಟಿ ರೂ. ಹೆಚ್ಚಿನ ಬಂಡವಾಳದ ಅಗತ್ಯವಿಲ್ಲ. ಸರ್ಕಾರದ ಈ ಕ್ರಮ ವಿಮಾ ಸುಧಾರಣೆಗಾಗಿ ಮಲ್ಹೋತ್ರ ಸಮಿತಿ ನೀಡಿದ್ದ ಶಿಫಾರಸ್ಸಿಗೆ ಅನುಗುಣವಾಗಿದೆ. ಎಲ್‌ಐಸಿಯ ಶೇರು ಬಂಡವಾಳವನ್ನು ನೂರು ಕೋಟಿ ರೂ.ಗಳಿಗೆ ಏರಿಸಿ ಅದರ ಶೇ. 50 ರಷ್ಟನ್ನು ಶೇರು ವಿಕ್ರಯ ಮಾಡಬೇಕೆಂಬ ಶಿಫಾರಸ್ಸನ್ನು ಅಳವಡಿಸಲು ಸರ್ಕಾರ ಇಡುತ್ತಿರುವ ಮೊದಲ ಹೆಜ್ಜೆಯಿದು.

ಎಲ್‌ಐಸಿ ಪಾಲಿಸಿಗಳಿಗೆ ನೀಡಲಾಗುತ್ತಿರುವ ಬೋನಸ್ ಎಲ್‌ಐಸಿ ಪಾಲಿಸಿಗಳನ್ನು ಕೊಳ್ಳಲು ಸಾರ್ವಜನಿಕರಿಗೆ ಉತ್ತೇಜನಕಾರಿಯಾಗಿದೆ. ಈ ದರದಲ್ಲಿ ಬೋನಸ್ ನೀಡಿದ ನಂತರವೂ ಸರ್ಕಾರಕ್ಕೆ ಅಧಿಕ ಲಾಭಾಂಶವನ್ನು ಎಲ್‌ಐಸಿ ನೀಡಿದೆ. ಕಳೆದ ಆರ್ಥಿಕ ವರ್ಷವೊಂದರಲ್ಲೇ ಸರ್ಕಾರಕ್ಕೆ ನೀಡಿರುವ ಲಾಭಾಂಶದ ಮೊತ್ತ 820 ಕೋಟಿ ರೂ.ಗಳು.

ಎಲ್‌ಐಸಿಯ ಎಲ್ಲ ಪಾಲಿಸಿಗಳಿಗೆ ಸರ್ಕಾರದ ಭದ್ರತೆಯಿದೆ. ಕಳೆದ 53 ವರ್ಷಗಳಲ್ಲಿ ಒಂದು ಬಾರಿಯೂ ಸರ್ಕಾರದ ಈ ಭದ್ರತೆಯನ್ನು ಬಳಸಿಕೊಂಡಿಲ್ಲ, ಬದಲಿಗೆ ತನ್ನ ಗಳಿಕೆಯಿಂದಲೇ ಎಲ್ಲ ಕ್ಲೈಮ್‌ಗಳನ್ನೂ ಪಾವತಿ ಮಾಡಿದೆ. ನಾಮಮಾತ್ರವಾದರೂ ಸರ್ಕಾರದ ಭದ್ರತೆ ಪಾಲಿಸಿದಾರರಿಗೆ ಒಂದು ಮಾನಸಿಕ ಭದ್ರತೆ ನೀಡಬಲ್ಲದು. ಎಲ್‌ಐಸಿ ಸರ್ಕಾರದ ಹಲವು ನೀತಿ ಮತ್ತು ಸಾಮಾಜಿಕ ಯೋಜನೆಗಳನ್ನು ಜಾರಿ ಮಾಡುತ್ತದೆ. ಮೇಲಾಗಿ ಸರ್ಕಾರಕ್ಕೆ ಅಮೂಲ್ಯ ಹಣಕಾಸನ್ನು ಒದಗಿಸುತ್ತದೆ. ಹೀಗಾಗಿ ಎಲ್‌ಐಸಿಯ ಪಾಲಿಸಿಗಳಿಗೆ ಸರ್ಕಾರದ ಭದ್ರತೆಯನ್ನು ಈಗಿರುವಂತೆಯೇ ಮುಂದುವರೆಸುವುದು ಸರ್ಕಾರದ ನೈತಿಕ ಹೊಣೆಗಾರಿಕೆಯಾಗಿದೆ.

ಎಲ್‌ಐಸಿಯ ಒಟ್ಟು ಪಾಲಿಸಿದಾರರ ಸಂಖ್ಯೆ
ಕೋಟಿ. ಇಷ್ಟು ಅಗಾಧ ಸಂಖ್ಯೆಯ ಪಾಲಿಸಿದಾರ
ಲಭ್ಯವಿರುವ ಸೌಲಭ್ಯಗಳಲ್ಲಿ ಯಾವುದೇ ಕಡಿತ ಮಾ
ಹಾಗೆಯೇ ಮುಂದುವರೆಯಲು ಅವಕಾಶ ನೀಡುವು
ನ್ಯಾಯಯುತವಾಗಿದೆ.

ಈ ಎಲ್ಲ ಕಾರಣಗಳಿಂದಾಗಿ ಎಲ್‌ಐಸಿ ತಿದ್ದು
ಮಸೂದೆಯ ಮೂಲಕ ಎಲ್‌ಐಸಿಯನ್ನು ದುರ್ಬಲಗೊ
ಲಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಸಾರ್ವಜ
ರಾಷ್ಟ್ರೀಕೃತ ಉದ್ದಿಮೆಗಳು ದುರ್ಬಲವಾದಲ್ಲಿ ಖಾಸಗಿ
ವರಿಗೆ ವ್ಯವಹಾರ ನಡೆಸಲು, ಲಾಭ ಗಳಿಸಲು ಸುಲ
ಸಾಧ್ಯವಾಗುತ್ತದೆ. ನಮ್ಮ ಮುಂದಿರುವ ಮೂಲಭೂ
ಪ್ರಶ್ನೆ ಇದೇ. ಈ ದೇಶದ ಜನತೆಯ ಹಣ ಜನಕಲ್ಯಾ
ಬಳಸುವಂತಾಗಬೇಕೆ ಅಥವಾ ಖಾಸಗಿಯವರ ಲಾಭವ
ರೂಪಾಂತರವಾಗಬೇಕೆ ಎಂಬುದು. ದೇಶದ ಮತ್ತು ಜನತೆ
ಪರಿಸ್ಥಿತಿಯನ್ನು ಗಮನಿಸುವಾಗ ಸಾರ್ವಜನಿಕ ವಿ
ಉದ್ದಿಮೆಯನ್ನು ಇನ್ನಷ್ಟು ಬಲಪಡಿಸುವ ಅಗತ್ಯವಿ
ಯಾವುದೇ ಸಾಮಾಜಿಕ ಭದ್ರತಾ ಯೋಜನೆಗಳಿಲ್ಲದ
ವ್ಯವಸ್ಥೆಯಲ್ಲಿ ಜೀವವಿಮೆಗೆ ಅತ್ಯಂತ ಮಹತ್ವವಿದೆ. ಕೇವ
ಸಾರ್ವಜನಿಕ ವಿಮಾ ಉದ್ದಿಮೆ ಮಾತ್ರವೇ ಸಾಮ
ಜನತೆಗೆ ವಿಮೆಯ ಭದ್ರತೆ ದೊರೆಯಬಲ್ಲದು. ಏಕೆಂ
ಖಾಸಗಿಯವರು ತಮ್ಮ ವ್ಯವಹಾರಗಳನ್ನು ಕೇವ
ಮೇಲುಸ್ತರದ ಶ್ರೀಮಂತರೊಂದಿಗೆ ನಡೆಸುತ್ತಾರೆ. ವಿ
ವ್ಯವಹಾರದ ರೀತಿಯಲ್ಲೂ ವ್ಯತ್ಯಾಸವಿದೆ. ಎಲ್‌ಐಸಿ
ಸಾಂಪ್ರದಾಯಿಕ ವಿಮಾ ಪಾಲಿಸಿಗಳನ್ನು ಹೆಚ್ಚುಹೆ
ಮಾರಾಟ ಮಾಡುತ್ತದೆ. ಹಾಗಾಗಿ ಹೆಚ್ಚು ಮೊತ್ತದ ಹ
ಸಾಮಾಜಿಕ ಯೋಜನೆಗಳಿಗೆ ಲಭ್ಯವಾಗುತ್ತದೆ. ಖಾ
ಯವರು ಹೆಚ್ಚು ಹೆಚ್ಚು ULIP ಪಾಲಿಸಿಗಳನ್ನು ಮಾರ
ಮಾಡುತ್ತಾರೆ. ಇಲ್ಲಿ ತಾನು ನೀಡಿದ ಹಣವನ್ನು
ಹೂಡಿಕೆ ಮಾಡಬೇಕೆಂದು ಪಾಲಿಸಿದಾರನೇ ನಿರ್ಧರಿಸು
ರಿಂದ ಸಾಮಾಜಿಕ ಹೂಡಿಕೆಗೆ ಅದರಲ್ಲಿ ಹಣ ಲಭ್ಯವಾ
ವುದಿಲ್ಲ. ಈ ವ್ಯವಹಾರದ ವೈಖರಿಯ ಬದಲಾವಣೆ
ವಾರ್ಯವಾಗಬಹುದು ಎಂದು ವಿಮಾ ವರದಿ ತಿಳಿಸಿ

ಸಾರ್ವಜನಿಕ ವಿಮಾ ಸಂಸ್ಥೆಗಳ ಶೇರು ವಿಕ್ರ
(disinvestment) ದಿಂದ ದೇಶದ ಅಭಿವ
ಯೋಜನೆಗೆ ಅತ್ಯಗತ್ಯವಾದ ಹಣಕಾಸು ದೊರೆಯುತ
ಎಂಬುದು ಸರ್ಕಾರದ ವಾದ. ಆದರೆ ಸಾರ್ವಜ
ವಲಯದ ವಿಮಾ ಸಂಸ್ಥೆಗಳ ಒಡೆತನದ ಸ್ವರೂ
ಬದಲಿಸದೆ-ಅವರಿಗೆ ಸ್ವಾಯತ್ತತೆ ನೀಡಿದಲ್ಲಿ ಸಾರ್ವಜ
ವಿಮಾ ಸಂಸ್ಥೆಗಳೇ ಈ ಹಣವನ್ನು ಕ್ರೋಢೀಕರಿ
ಕೊಡಬಲ್ಲವು ಎಂಬುದು ವಾಸ್ತವ. ಶೇರು ವಿಕ್ರಯದಿ
ಈ ಸಂಸ್ಥೆಗಳ ಒಡೆತನವನ್ನು ಸಾಮಾನ್ಯ ಜನತೆಗೆ ನೀಡಿದ
ಗುತ್ತದೆ ಎಂದು ಸರ್ಕಾರ ಇನ್ನೊಂದು ಕಾರಣವ
ಮುಂದೊಡ್ಡುತ್ತಿದೆ. ಸಾರ್ವಜನಿಕ ವಿಮಾ ಸಂಸ್ಥೆಗಳ ಒಡೆ
ಸಾರ್ವಜನಿಕರಿಗೆ ಸೇರಿದ್ದು. ರಾಷ್ಟ್ರೀಕರಣವೆಂಬುದು ದೇಶ
ಸಂಪತ್ತಿನ ಸಾಮಾಜೀಕರಣ. ಹಾಗಿರುವಾಗ ದೇಶ
ಮಾರುಕಟ್ಟೆಯಲ್ಲಿ ವ್ಯವಹರಿಸುವ ಕೇವಲ ಶೇ. 3 ರ
ಮಂದಿಗೆ ಈ ಒಡೆತನವನ್ನು ವರ್ಗಾಯಿಸಿದಂತಾಗುತ್ತ

ನವ ಉದಾರೀಕರಣ ನೀತಿಗಳು ಎಡೆಮಾಡಿ
ಜಾಗತಿಕ ಆರ್ಥಿಕ ಕುಸಿತದಿಂದ ಇಡೀ ಜಗತ್ತು ತತ್ತರಿಸುತ್ತಿ
ಈ ಹೊಡೆತಕ್ಕೆ ಸಿಕ್ಕ ಬಹುತೇಕ ರಾಷ್ಟ್ರಗಳಲ್ಲಿ ಒಂದೆ
bail out ನ ರೂಪದಲ್ಲಿ ಇಲ್ಲವೆ ನೇರವಾಗಿ ಆರ್ಥಿ
ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡುತ್ತಿವೆ. ಈ ಜಾಗ
ಆರ್ಥಿಕ ಸುನಾಮಿಯಿಂದ ನಮ್ಮ ದೇಶವನ್ನು ರಕ್ಷಿಸಿ
ರಕ್ಷಣಾ ಕವಚ ಈ ದೇಶದ ಸದೃಢ ರಾಷ್ಟ್ರೀಕೃತ ವಿ
ಸಂಸ್ಥೆ ಮತ್ತು ಬ್ಯಾಂಕ್‌ಗಳು. ಹೀಗೆ ಹಲವು ರಾಷ್ಟ್ರಗ
ಸರ್ಕಾರದ ನಿರ್ಬಂಧ ಮತ್ತು ರಾಷ್ಟ್ರೀಕರಣದ
ಹೆಜ್ಜೆಯಿಕ್ಕಿರುವಾಗ ಭಾರತ ಅದರ ವಿರುದ್ಧ ದಿಕ್ಕಿ
ಹೆಜ್ಜೆಯಿಡುತ್ತಿರುವುದು ವಿಪರ್ಯಾಸವೇ ಸರಿ.

ದೇಶದ ಪ್ರಸಕ್ತ ಪರಿಸ್ಥಿತಿಯಲ್ಲಿ ಸಾರ್ವಜನಿಕ ರಂಗ
ವಿಮಾ ಸಂಸ್ಥೆಗಳು ಸಾರ್ವಜನಿಕ ರಂಗದಲ್ಲೇ ಮುಂ
ವರೆಯುವುದು ಅನಿವಾರ್ಯವಾಗಿದೆ. ವಿಮೆ ಒಂ
ಉದ್ದಿಮೆ ಮಾತ್ರವಲ್ಲ, ಅದೊಂದು ಸೇವೆ ಕೂಡ, ಕೇವ
ಸಾರ್ವಜನಿಕ ರಂಗದ ವಿಮಾ ಸಂಸ್ಥೆಗಳು ಮಾತ್ರ
ಜನತೆಗೆ ಈ ಸಮರ್ಥ ಸೇವೆ ನೀಡಬಲ್ಲವು ಮ
ಸಾಮಾಜಿಕ ಹೊಣೆಗಾರಿಕೆ ನಿರ್ವಹಿಸಬಲ್ಲವು. ವಿ
ನೌಕರರ ತೀವ್ರ ಹೋರಾಟ ಮತ್ತು ಜನತೆ
ಬೆಂಬಲದಿಂದಾಗಿ ಕಳೆದ ಹದಿನೈದು ವರ್ಷಗಳ
ಖಾಸಗೀಕರಣವನ್ನು ತಡೆದು ನಿಲ್ಲಿಸುವುದು ಸಾಧ್ಯವಾಗಿ
ಕಳೆದೈದು ವರ್ಷಗಳಿಂದ ವಿದೇಶೀ ನೇರ ಬಂಡವಾ
ಹೆಚ್ಚಳವನ್ನೂ ತಡೆದು ನಿಲ್ಲಿಸಲಾಗಿದೆ. ಈ ಎಲ್ಲ ವಿಚಾರಗ
ಸಮರ್ಥವಾಗಿ ಮಧ್ಯಪ್ರವೇಶ ಮಾಡಿದ ಎಡ ಮ
ಪ್ರಜಾಸತ್ತಾತ್ಮಕ ಪಕ್ಷಗಳು ತಮ್ಮ ಪಾತ್ರವನ್ನು ಸಮರ್ಥವಾ
ನಿರ್ವಹಿಸಿವೆ. ಈ ದೇಶದ ಸಾರ್ವಭೌಮತೆ ಮತ್ತು ಆರ್ಥಿ
ಸ್ವಾಯತ್ತತೆಯ ರಕ್ಷಣೆಗಾಗಿ ಮುಂದುವರೆ...ವ
ಪ್ರಬಲ ಹೋರಾಟಕ್ಕೆ ಜನತೆ ಇನ್ನೂ ಹೆಚ್ಚಿನ ಬೆಂಬ
ನೀಡಬೇಕು. ಪ್ರಬಲ ಜನಾಂದೋಲನ ಮತ್ತು ಹೋರಾ
ಗಳು ಮಾತ್ರವೇ ಈ ದೇಶವನ್ನು ದೋಷಪೂರಿತ ಆರ್ಥಿ
ನೀತಿಗಳಿಂದ ರಕ್ಷಿಸಬಲ್ಲದು.

● ಎಸ್.ಕೆ.ಗೀ

ಪುಸ್ತಕ ವಿಮರ್ಶೆ

...ಸ್ಥದ ನಿಜವಾದ ಅಂತಃಸತ್ವವೇ ರೂಪು ತಳೆದು ...ರುವ ಡಾ.ಸಿ.ರವೀಂದ್ರನಾಥ್‌ರ ಹಾಯ್ಕುಗಳು ...ಭಿನ್ನ ಪ್ರಕಾರದ ಪರಿಣಾಮಕಾರಿ ಸಾಧ್ಯತೆಯನ್ನು ...ಗೆ ಮತ್ತು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿರುವವರಿಗೆ ...ಕೊಟ್ಟಿವೆ.

...ಕಿನ ಸಂಕೀರ್ಣ ಅನುಭವಗಳನ್ನು ಸ್ಪರ್ಶಿಸುತ್ತಾ, ...ಗೆ ಮುಖಾಮುಖಿಯಾಗುತ್ತಲೇ ಸಹಜವಾಗಿ ...ಯುಸುವ ಕವಿಯ ಆಕಾಂಕ್ಷೆ ಬಹಳಷ್ಟು ಕಡೆ ...ಗಿವೆ. ಜೀವನ ಪಯಣದ ಹೆಜ್ಜೆ ಹೆಜ್ಜೆಯಲ್ಲೂ ...ಟಿಕೊಂಡಿರುವ ದೃಷ್ಟಿಕೋನ ಯಾವ ತೆರನಾದದ್ದು ...ದು ಸಾಮಾನ್ಯ ಮನುಷ್ಯ ಆಲೋಚನೆಯ ದಿಕ್ಕನ್ನು ...ತೆ ತುಡಿಯುವಂತೆ ಮಾಡುತ್ತವೆ ಎಂದರೆ "ಕಡಲ ...ವಾಸಿಪ/ ನದಿ ತನ್ನ ಸಿಹಿಯನ್ನೇ/ ತ್ಯಾಗ ಮಾಡಿತು" ಬದುಕನ್ನು ಪರಿಭಾವಿಸುವ ರೀತಿಗೆ ಪ್ರತಿಯಾಗಿ ಸಹಜ ಪ್ರೀತಿಯನ್ನು ಗೆಲ್ಲುತ್ತಾರೆ. ಇಲ್ಲಿನ ಕೆಲ ...ಗಳ ಲಯ ಮನಸ್ಸಿ... ಹುಟ್ಟಿಸುವ ನಿಯ... ...ಂಗಗಳನ್ನು ಅನುಭವಿ... ...ಸೊಗಸು. ಮೂರ ...ಷ್ಟಿಲ್ಲದ. ಮೂರಕ್ಕಿಂತ ...ಬಲ್ಲದ ಈ ಹಾಯ್ಕು ...ಲ್ಪ ಮನೋಜ್ಞವೂ ...ಎನಿಸುವಂತಿವೆ. ಹಾಯ್ಕು ಎಂಬ ರಚನೆಯನ್ನೇ ...ಮಾಧ್ಯಮವಾಗಿ ಆರಿಸಿಕೊಂಡದ್ದು ಏಕೆ? ಎಂಬ ...ಕೊಂಡರೆ ತನ್ನ ಇಡಿಯಾದ ಸಂವೇದನೆಯನ್ನು ...ವಲ್ಲಿ ಕಟ್ಟಿಕೊಡುವ ಈ ಕವಿಯ ಗಟ್ಟಿವಿಶ್ವಾಸದ ...ವಗಳಲ್ಲಿ ಗೋಚರಿಸುತ್ತದೆ.

...ರ್ಣ ವ್ಯವಸ್ಥೆ ಅತ್ಯಂತ ಗಟ್ಟಿಯಾಗುತ್ತಿರುವುದು ಈ ...ದುರಂತದ ಬಹುದೊಡ್ಡ ಚಹರೆಯಾಗಿದೆ. ಇದು ...ರ್ವಕವಾಗಿ ಬೆಳೆಸುತ್ತಿರುವ ಬ್ರಾಹ್ಮಣ್ಯಕ್ಕೆ ತಮ್ಮ ...ವನ್ನೆಲ್ಲಾ ಉಪಯೋಗಿಸಿ ಹೆಣಗುತ್ತಿರುವವರೂ ...ಧ್ಯದಲ್ಲಿದ್ದಾರೆನ್ನುವುದು ಸೋಜಿಗದ ಅಷ್ಟೇ ಬೌದ್ಧಿಕ ... ಸಂಗತಿಯೂ ಹೌದು. ಅಸ್ಪೃಶ್ಯನ ಆಂತರ್ಯದ ...ಯೆಂಬ ಪ್ರತಿರೋಧದ ಗಟ್ಟಿದನಿ ರವೀಂದ್ರನಾಥ ...ದಲಿತರು ಮುಟ್ಟದೆ ದುಃಖಪಟ್ಟ/ ಕೆರೆ ಮೋಡ .../ ಹಟ್ಟಿಗೆ ಮಳೆಯಾಗಿ ಸುರಿಯಿತು." ಒಂದೇ ...ಭಿನ್ನವಾದ ಎದುರೇಟು ಕೊಡುವ ಸಾಧ್ಯತೆ ಸಾಧ್ಯತೆಯೆಂದರೆ ಕೆಲವೇ ಮಾತ್ರೆಗಳ ಸಮುಯದಲ್ಲಿ ಗಹನವಾದ ವಿಚಾರಗಳನ್ನು ಅಷ್ಟೇ ಸರಳ ಸುಲಭವಾಗಿ ಸ್ಫುರಿಸುತ್ತವೆ. ಈ ಹಾಯ್ಕುಗಳಲ್ಲಿನ ಕೆಲವೇ ಪದಗಳಲ್ಲಿ ಅಡಗಿರುವ ಶಕ್ತಿ ಬೆರಗು ಹುಟ್ಟಿಸುವಂತಿದೆ. "ಹೊಸ ಮನೆಯ ಬಾಗಿಲು/ ತೆರೆದಾಗ/ ಕಾಡಲ್ಲಿ ಮರ ಬಿದ್ದ ಸದ್ದು" ಅತ್ಯಾಧುನಿಕತೆಯ ಭ್ರಮೆಯಲ್ಲಿರುವ ಭೋಗ ಜಗತ್ತಿನ ವಾರಸುದಾರರಾದ ನಮಗೆಲ್ಲ ಸರಳವಾಗಿ ಚುಚ್ಚದಂತಿವೆ ಈ ಸಾಲುಗಳು. ತೀರಾ ನಿಕೃಷ್ಟವೆಂದುಕೊಂಡಿರುವ ಕೆಲವು ವಸ್ತುಗಳಿಗೆ ಈ ಕವಿ ತಂದುಕೊಡುವ ಪ್ರಾಧಾನ್ಯತೆ ವಿರಳವಾದದ್ದು. "ಅರಳಿದ ಸುಂದರ ತಾವರೆ/ಕೆಸರಿಗೆ ಧನ್ಯತೆಯ/ ಭಾವ ಮೂಡಿಸಿದೆ" "ಮೂರು ಸಾಲು ಮರ"ದಲ್ಲಿನ ಜೀವಪರ ತುಡಿತ, ಆಕ್ರೋಶ, ಕನಿಕರ, ಮನುಷ್ಯತ್ವ ಉನ್ನತ ಮೌಲ್ಯಗಳನ್ನು ಶೋಧಿಸುವ ಕ್ರಮ ಹೀಗಿದೆ "ಅವಳು ಸೆರಗು ಹಾಸುತ್ತಾಳೆ/ ದಿನವೂ/ ದುಃಖದ ನಿರಿಗೆಗಳ ಬಿಚ್ಚುತ್ತಾ" ನಿರಿಗೆ ಎಂಬ ಸಂಕೇತದ ಮೂಲಕ ಹೆಣ್ಣಾಗಿ ಹುಟ್ಟಿದ ಕಾರಣಕ್ಕೆ ಅನುಭವಿಸುವ ಅಸಹಾಯಕತೆ ಎಷ್ಟೊಂದು ಕ್ರೂರತನದ್ದು ಎಂಬ ಚಿತ್ರ ಕಣ್ಮುಂದೆ ನಿಲ್ಲುತ್ತದೆ.

ಬದುಕಿನ ಕ್ರುದ್ಧತೆಯ ಮುಖ ಹಲವು. ಅವುಗಳನ್ನು ಇದು ಹೀಗೆ ಎನ್ನಲಿಕ್ಕಾಗದು. ಅದು ಹಾಗಲ್ಲ ಎಂಬ ತರ್ಕವೂ ಸಲ್ಲದು. ಒಂದು ತಳಮಳದ ರೂಪ ಹೀಗಿದೆ. "ನೋವಿನ ಎಳೆ ನನ್ನನ್ನು ತಟ್ಟಿತು/ ತುಂಡರಿಸಿದೆ; ಎರಡಾಯಿತು." ನಾವು ನಮ್ಮ ಒಡನಾಡಿ ಹೆಣ್ಣೆಂಬ ಜೀವದಾಯಿಯನ್ನು ಜೀವನದ ಪ್ರಾಮುಖ್ಯ ಸಂಗತಿಗಳಲ್ಲಿ ಅವಳೆಂಬುವವಳಿಗೆ ಎಷ್ಟೇ ಅಬೇಧದಿಂದ ನೋಡುತ್ತೇವೆಂದರೂ ಬದುಕಿನ ವಿಧಾನದ ವ್ಯಂಗ್ಯವೇ ವಿಚಿತ್ರವಾದುದು ಅದಕ್ಕೆ ಕವಿ "ಎಂದೂ ಬತ್ತದ ಅವಳ/ ಕಣ್ಣೀರ ಕೊಳ/ ಖುಷಿಯಿಂದ ಈಜುತ್ತಿದ್ದಾರೆ" ಇಲ್ಲಿ ಅವಳ ಬತ್ತದ ಕಣ್ಣೀರ ಕೊಳ, ಅವರು ಖುಷಿಯಿಂದ ಮಾತ್ರವಲ್ಲ ಈಜುತ್ತಿದ್ದಾರೆಂಬ ಕ್ರಿಯೆಯ ತಣ್ಣನೆಯ ಕ್ರೌರ್ಯವಿದೆಯಲ್ಲ ಅದು ಗಂಡೆಂಬ ಅಹಮ್ಮಿಗೆ ಖೇದದ ರೂಪಕ.

ಧರ್ಮನಿರಾಕರಣೆಯ ಅಗತ್ಯ ಇಂದು ಬಹುಪ್ರಸ್ತುತ. ಇದು ಸಾರ್ವತ್ರಿಕವಾಗಬೇಕಾದ ಪ್ರಯೋಜನವನ್ನು ಹೀಗೆ ಕಟ್ಟಿಕೊಡುತ್ತಾರೆ "ಎಲ್ಲ ಧರ್ಮಗಳನ್ನು/ ದೂರವಿಟ್ಟಿದ್ದೇನೆ/ ಅವು ರಕ್ತದ ರುಚಿ ಕಂಡಿವೆ." ಸಾಮಾಜಿಕ ಸಂದರ್ಭದ


ಕಾವ್ಯ ಮತ್ತು ಅಂತಃಸತ್ವ”

...ರ್ಣವಾಗಿದೆ. ಕರ್ನಾಟಕದಲ್ಲಿ ಅಮಾನವೀಯ ...ಗಳಲ್ಲಿ "ಕಂಬಾಲಪಲ್ಲಿ" ಒಂದು ಮರೆಯಲಾಗದ ...ವಾಸ್ತವ. ಈ ಘಟನೆಗೆ ಕವಿ ಮುಖಾಮುಖಿಯಾಗಿ ...ಧಿಸುವ ಕೆಲ ಹಾಯ್ಕುಗಳು ಈ ಸಂಕಲನದ ಸಾಲುಗಳು. "ಮನುಷ್ಯರನ್ನು ಸುಟ್ಟ ವಾಸನೆ/ ...ಚಂದ್ರನಿಗೆ ತಲುಪಿತು/ ನ್ಯಾಯದ ...ಗೆ ತಲುಪಲಿಲ್ಲ" ಜೊತೆಗೆ ...ಬಂದ ದಿನ/ ತಾನು ಸಾಕ್ಷಿ ...ವ ಬಗ್ಗೆ/ ಬಾನ ಚಂದಿರ ಖಿನ್ನ ...ಒಂದು ಸಾಮಾಜಿಕ ಘೋರ ...ದ ಘಟನೆ ಕೊನೆಗೊಂಡ ಬಗೆ ...ದೌರ್ಜನ್ಯ ಶಕ್ತಿಗಳ ಮೇಲುಗೈ ...ವಿಡಂಬಿಸುವುದರ ಜೊತೆಗೆ ...ಸಾರ ಪರವಾಗಿದೆ ಎಂಬುದನ್ನು ...ಸೂಕ್ಷ್ಮ ಅಷ್ಟೇ ಗಂಭೀರವಾಗಿ ...ತ್ತಾರೆ. "ದೀರ್ಘ ವಿಚಾರಣೆಯ ...ಎಲ್ಲರೂ ಖುಲಾಸೆಯಾದರು/ ...ಗೆ ನ್ಯಾಯ ಸಿಕ್ಕಿತು."

...ದ ಸಮುದ್ರದಲ್ಲಿ ನಮ್ಮ ಕಣ್ಮುಂದೆ ... ಕೀದಾಸಾದಾ ಸಂದರ್ಭಗಳಿ... ...ಕಾವ್ಯಾತ್ಮಕ ಅನುಭೂತಿಯನ್ನು ...ಪ್ರಯತ್ನವನ್ನು ರವೀಂದ್ರ ನಾಥ್ ...ದೆ. "ಚಳಿ/ಒಲೆಯಲ್ಲಿ ಒಣ ಕಟ್ಟಿಗೆ/ ಖುಷಿಯಿಂದ ...ತ್ತಿದೆ" ಉರಿಯುವಿಕೆಯ ಸಹಜ ಕ್ರಿಯೆ ಒಣ ... ಸ್ವಭಾವಕ್ಕೆ ಕಾವ್ಯದ ಮಾಂತ್ರಿಕಶಕ್ತಿಯನ್ನುವಂತೆ ...ಎಂಬುದನ್ನು ಸೇರಿಸಿದಾಗ ಬಂದಿರುವ ಮೆರಗು ...ದದ್ದು. "ಕಿಂತು ದೀಪದ ಕೆಳಗೆ/ ಮೊಲೆಗಳು ...ತ್ತಿವೆ/ ಮಗು ಅಳುತ್ತಿದೆ" ಜೊತೆಗೆ "ಅವರ ...ರು/ ಇವರ ಕೈಯಲ್ಲಿ ಹಸಿರು/ ಧ್ವಜದ ಬಣ್ಣಗಳು ...ಗೊಂಡಿವೆ." ನಮ್ಮ ಸಹಜೀವಿಗಳ ಮನುಷ್ಯ ...ಬಾಹ್ಯ ಕೃತಿಯ ಪ್ರತೀಕವಾದ ರಾಷ್ಟ್ರೀಯತೆಗೆ ...ರುವ ದುರಂತ ವಾಸ್ತವವನ್ನು ತೀವ್ರವಾಗಿ ಕಟ್ಟಿ...ಕೊಡುತ್ತಿದೆ. ಮನುಷ್ಯರೊಬ್ಬರ ಒಳ್ಳೆಯತನದ ... ಎಂಬುದನ್ನು ಕವಿ ಹೀಗೆ ಕಟ್ಟಿಕೊಡು... ...ಜಗಿದ ದಿನ/ ಜೋಳಿಯ ಹಲಿಗೆ ಬೀಳುತ್ತಿ... ...ಕಗೊಂಡಿದು" ಸಾಹಿತ್ಯದ ಪರಮಸಾರ್ಥ... ...ಗಳನ್ನು.

...ಹಾಯ್ಕುಗಳು, ಪ್ರಕಾರದ ಒಂದು ವಿಶಿಷ್ಟ

ಅವಗುಣಗಳ ಚಿತ್ರ ಹೇಗಿದೆಯೆಂಬುದಕ್ಕೆ "ಹರಿವ ಹೊಳೆಯಲ್ಲಿ/ ಧುತ್ತನೆ ತೇಲಿದ ಹೆಣ/ ಮೊಸಳೆ ಹಬ್ಬ ಆಚರಿಸಿವೆ." ಹಾಗೆಯೇ ಜಿಂಕೆ ಹಸಿರು ಮೇಯುತ್ತಿದೆ/ ಹುಲಿ ಬೇಟೆ ಹಿಡಿದಿದೆ/ ಕಾಡಲ್ಲಿ ಇಂದು ಸ್ವಾತಂತ್ರ್ಯ ದಿನಾಚರಣೆ." ಈ ಕವಿಯ ಅವಗಾಹನೆಗೆ ಹಳ್ಳಿಗಾಡ ಬದುಕು ತುಂಬ ಹತ್ತಿರವಿದೆಯೆನ್ನುವುದಕ್ಕೆ "ಹೊಲದಲ್ಲಿ ದುಡಿವ ಹುಡುಗಿಯ/ ಬೆವರ ವಾಸನೆಗೆ/ ಎಲ್ಲ ಸುವಾಸನೆಗಳು ತಲೆಬಾಗಿವೆ" ಎಂಬುದು ಅಪ್ಪಟ ಜವಾರಿ ಸಾಕ್ಷಿ.



ಮೂರು ಸಾಲು ಮರ(ಹಾಯ್ಕುಗಳು)
ಲೇಖಕರು: ಡಾ.ಸಿ.ರವೀಂದ್ರನಾಥ್
ಪುಟಗಳು : 122, ಬೆಲೆ : 65 ರೂ.
ಪ್ರಕಾಶನ : ಒನ್ ವ್ಹೀಲರ್ ಪಬ್ಲಿಕೇಷನ್ಸ್, ವೆಂಕಟಾಲ, ಯಲಹಂಕ ಅಂಚೆ, ಬೆಂಗಳೂರು - 64

"ಮೂರು ಸಾಲು ಮರದ" 500ಕ್ಕೂ ಹೆಚ್ಚು ಹಾಯ್ಕುಗಳಲ್ಲಿ ಅರ್ಧದಷ್ಟು ಹಾಯ್ಕುಗಳು ವಿಫಲ ಪ್ರಯತ್ನಗಳೆಂದೇ ಹೇಳಬಹುದು. ತೀವ್ರವಾದುದನ್ನು ಹೇಳುವ ಭರದಲ್ಲಿ ಎಡವಿದ ದಟ್ಟ ಉದಾಹರಣೆಗಳಿವೆ. ಹಲವರ ಪ್ರಭಾವಗಳಿಂದ ಕಳಚಿಕೊಳ್ಳಲು ಸಾಧ್ಯವಾಗಿಲ್ಲ, ಮನಸ್ಸಿನ ವಿಕ್ಷಿಪ್ತ ಭಯ ಮತ್ತು ಖಿನ್ನತೆಗಳು ಈ ಕವಿಯ ಪರಿಣಾಮಕಾರಿ ಸಾಧನೆಗೆ ತುಂಬ ತೊಡಕಾಗಿ ಹಲವಾರು ಹಾಯ್ಕುಗಳು ಓದುಗನಲ್ಲಿ ನಿರಾಸೆಯನ್ನು ಹುಟ್ಟಿಸುವುದರ ಜೊತೆಗೆ ನಿರೀಕ್ಷೆಯನ್ನೇ ಬುಡಮೇಲು ಮಾಡುತ್ತವೆ. ವಿಪುಲವಾಗಿ ಬರೆಯುವ ಬಿಮ್ಮುಗಳಿಗೆ ಸಿಕ್ಕು ಕವಿ ಕೆಲವು ಸಂದರ್ಭಗಳಲ್ಲಿ ಹೀನಾಯವಾಗಿ ಸೋತಿದ್ದಾರೆ.

ಈ ಸಂಕಲನದಲ್ಲಿ ಚರ್ಚಿಸಲಾದ ಕೆಲವು ಆರೋಗ್ಯಕರ, ಪ್ರಗತಿದಾಯಕ, ಕೌಶಲ್ಯಪೂರ್ಣ, ಕಾವ್ಯಶ್ರೇಷ್ಠ ಗುಣ ಹೊಂದಿರುವ ಹಾಯ್ಕುಗಳನ್ನು ಹೊರತುಪಡಿಸಿದರೆ ಬಹಳಷ್ಟು ಹಾಯ್ಕುಗಳು ವಾಚ್ಯವಾಗಿದೆಯಲ್ಲದೆ ಏನೂ ಅನ್ನಿಸದಷ್ಟು ದುರ್ಬಲಗೊಂಡಿವೆ. ಮೀನು, ಧ್ಯಾನ, ಕಪ್ಪೆ, ನದಿ, ಕಡಲುಗಳೇ ಇಲ್ಲಿನ ಹಾಯ್ಕುಗಳನ್ನು ಬರೆಸಿವೆ ಎನ್ನುವಷ್ಟರ ಮಟ್ಟಿಗೆ ಧಾರಾಳವಾಗಿ ಈ ಪರಿಕರ ಬಳಕೆಯಾಗಿದೆ. ಬದುಕಿನಲ್ಲೂ ಸೃಜನಶೀಲತೆಯಲ್ಲೂ ನಿರುಮ್ಮಳತೆಯನ್ನಿಟ್ಟುಕೊಂಡು ಪ್ರಧಾನದಿಂದ ನಡೆದರೆ ಈ ಕವಿಯಲ್ಲಿ ಬಹಳಷ್ಟು ನಿರೀಕ್ಷೆಗಳನ್ನಿಟ್ಟುಕೊಳ್ಳಬಹುದು. ಈ ಸಂಕಲನದ ಮುಖಪುಟದ ವಿಕ್ಷಿಪ್ತ ಚಿತ್ರಕ್ಕೆ ಬದಲಾಗಿ ಸಂಕಲನದ ಆಶಯಕ್ಕೆ ತಕ್ಕುದಾದ ಗುಣಾತ್ಮಕ ಚಿತ್ರ ಕೊಡಬಹುದಿತ್ತು.

● ವೀರಣ್ಣ ಮಡಿವಾಳರ

ವಿ.ಕ.ದ ಚೆಡ್ಡಿಗಳ ವೃಥಾ ಆಲಾಪ

ಮೊನ್ನೆ ಆಗಸ್ಟ್ 17 ರಂದು ಮಂಗಳೂರಿನ ಪರಮ ಕುಖ್ಯಾತ ಪೊಲೀಸ್ ಅಧಿಕಾರಿ ವೆಂಕಟೇಶ್ ಪ್ರಸನ್ನರ ಶೃಂಗೇರಿಯಲ್ಲಿರುವ ಮನೆಗೆ ನಕ್ಸಲರು ನುಗ್ಗಿದ್ದಕ್ಕೂ ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ರಾಜ್ಯ ಕಾರ್ಯದರ್ಶಿ ಕೆ.ಎಲ್. ಅಶೋಕ್‌ರವರು ಕಳೆದ ಏಪ್ರಿಲ್ 17 ರಂದು. ಮಾನವಹಕ್ಕು ಹೋರಾಟಗಾರ ನೌಶಾದ್ ಕಾಶಿಂಜಿಯವರ ಹತ್ಯೆಗೆ ಸಂಬಂಧಿಸಿದಂತೆ ನಡೆದ ಸಂತಾಪಸಭೆಯಲ್ಲಿ ಮಾಡಿದ ಭಾಷಣಕ್ಕೂ ಸಂಬಂಧ ಕಲ್ಪಿಸಿ ಅಂತೂಇಂತೂ ಕೋಮುಸೌಹಾರ್ದ ವೇದಿಕೆಯನ್ನು ನಕ್ಸಲ್ ಸಂಘಟನೆಯ ಒಂದು ಭಾಗವೆಂಬಂತೆ ಚಿತ್ರಿಸಲು ವಿಜಯ ಕರ್ನಾಟಕದ ಪತ್ರಕರ್ತರು ಪ್ರಯತ್ನಿಸಿದ್ದಾರೆ. ವಿಜಯ ಕರ್ನಾಟಕದ ಅಂತಹ ಅಲ್ಪತನದ ವರದಿಗೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷರಾದ ಸುರೇಶ್ ಭಟ್‌ರ ವರು ಸಮರ್ಥವಾಗಿ ಪ್ರತಿಕ್ರಿಯೆಯನ್ನು ನೀಡಿದ್ದಾರೆ.



ಏಪ್ರಿಲ್ 17 ರಂದು ಅಶೋಕ್‌ರವರು ಮಾಡಿದ ಭಾಷಣದ ಒಟ್ಟು ತಾತ್ಪರ್ಯವೇನೆಂದು ಜನತೆಗೆ ತಿಳಿಸುವುದು ಅತ್ಯಂತ ಅನಿವಾರ್ಯ. ಯಾಕೆಂದರೆ ಕೋಮು ಸೌಹಾರ್ದ ವೇದಿಕೆಗೆ ನಕ್ಸಲ್ ಚಳವಳಿಯೊಂದಿಗೆ ಸಂಬಂಧವಿದೆಯೆಂಬ ಆರೋಪವನ್ನು ಕಳೆದ ಅನೇಕ ವರ್ಷಗಳಿಂದ ಸಂಘ ಪರಿವಾರ ಮತ್ತದರ ಕರಪತ್ರಗಳಂತಿರುವ ಕೆಲವು ಪತ್ರಿಕೆಗಳು ಮತ್ತು ಕೆಲವು ಹಿಂದೂತ್ವವಾದಿ ಲೇಖಕರು ಹೊರಿಸುತ್ತಾ ಬಂದಿದ್ದಾರೆ. ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಲ್ಲದೇ ರಾಜ್ಯದ ಇನ್ನಿತರ ಪ್ರಗತಿಪರ, ಜನಪರ ಸಂಘಟನೆಗಳೂ ಸಂಘ ಪರಿವಾರದ ಜೀವ ವಿರೋಧಿ ಫ್ಯಾಸಿಸ್ಟ್ ಸಿದ್ಧಾಂತವನ್ನು ಯಾವ ಮುಲಾಜೂ ಇಲ್ಲದೆ ವಿರೋಧಿಸುತ್ತವೆ, ಅಂತೆಯೇ ನಕ್ಸಲರೂ ಕೂಡ ಬಿಜೆಪಿ, ಸಂಘ ಪರಿವಾರದ ಕಟ್ಟಾವೈರಿಗಳೇ ಆಗಿದ್ದಾರೆ. ಸಂಘ ಪರಿವಾರದ, ಬಿಜೆಪಿಯ ವಿರೋಧಿಗಳನ್ನೆಲ್ಲಾ ನಕ್ಸಲರು, ನಕ್ಸಲ್ ಬೆಂಬಲಿಗರು ಎನ್ನುವುದಾದರೆ ಕಾಂಗ್ರೆಸ್, ಕಮ್ಯೂನಿಸ್ಟ್, ಜನತಾದಳ ಮತ್ತಿತರ ಬಿಜೆಪಿ ವಿರೋಧಿ ರಾಜಕೀಯ ಪಕ್ಷಗಳನ್ನೆಲ್ಲಾ ನಕ್ಸಲ್ ಎಂದೋ, ನಕ್ಸಲ್ ಬೆಂಬಲಿಗರೆಂದೋ ಕರೆಯಬೇಕಾಗುತ್ತದೆ.

ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮಾತ್ರವಲ್ಲದೇ ನಮ್ಮ ಇತರೆಲ್ಲಾ ಸಹಭಾಗಿ ಸಂಘಟನೆಗಳಿಗೂ ನಕ್ಸಲರ ಉದ್ದೇಶದ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಆ ಉದ್ದೇಶಗಳ ಈಡೇರಿಕೆಗಾಗಿ ಅವರು ಅನುಸರಿಸುತ್ತಿರುವ ಹೋರಾಟದ ಹಾದಿಯ ಬಗ್ಗೆ ನಮಗೆ ಎಳ್ಳಷ್ಟೂ ಸಹಮತವಿಲ್ಲ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅನುಮದನೀಯವಾಗಿರುವ ಸ್ವರೂಪದಲ್ಲಿ ನಡೆಯುವ ಹೋರಾಟಗಳನ್ನು ನಾವು ಬೆಂಬಲಿಸುತ್ತೇವೆಯೇ ಹೊರತು ಪ್ರಜಾಪ್ರಭುತ್ವ ವಿರೋಧಿಯಾದ ಹಿಂಸಾತ್ಮಕ ಸ್ವರೂಪದ ಹೋರಾಟವನ್ನು ನಾವು ಈ ಹಿಂದೆಂದೂ ಬೆಂಬಲಿಸಿಲ್ಲ ಮುಂದೆಯೂ ಬೆಂಬಲಿಸಲಾರೆವು.

ವಿಜಯ ಕರ್ನಾಟಕ

ಒಂದೇ ಅಜೆಂಡಾದ ಮೇಲೆ ನಾವೂ ಚಳವಳಿ ಕಟ್ಟುತ್ತೇವೆ. ಅದೇ ಅಜೆಂಡಾದ ಮೇಲೆ ನಕ್ಸಲರೂ ಚಳವಳಿ ಕಟ್ಟಬಹುದು. ಜನವಿರೋಧಿ ಕಾರ್ಯಗಳನ್ನು ನಾವು ವಿರೋಧಿಸುತ್ತೇವೆ. ಅವರೂ ವಿರೋಧಿಸುತ್ತಾರೆ. ಅಂದಮಾತ್ರಕ್ಕೆ ನಮ್ಮನ್ನು ನಕ್ಸಲ್ ಬೆಂಬಲಿಗರೆನ್ನುವುದು ಹಾಸ್ಯಾಸ್ಪದ. ನಾವೂ ಅವರೂ ಒಂದೇ ವೇದಿಕೆಯಡಿ ನಿಂತು ಎಂದೂ ಹೋರಾಟ ರೂಪಿಸಿದ್ದಿಲ್ಲ, ಅವರಂತೆ ನಾವೆಂದೂ ಭೂಗತರಾದದ್ದೂ ಇಲ್ಲ, ನಾವು ಜನರ ಮಧ್ಯೆ ಇದ್ದುಕೊಂಡೇ ಹೋರಾಟ ಸಂಘಟಿಸುತ್ತಾ ಬಂದವರು.

ಕಳೆದ ಏಪ್ರಿಲ್ 17 ರಂದು ಮಂಗಳೂರಿನ ಮುಸ್ಲಿಂ ಸಂಘಟನೆಗಳ ಒಕ್ಕೂಟದ ವತಿಯಿಂದ ನೌಶಾದ್ ಕಾಶಿಂಜಿ ಹತ್ಯೆಗೆ ಸಂಬಂಧಿಸಿ ನಡೆದ ಸಂತಾಪಸೂಚಕ ಸಭೆಯಲ್ಲಿ ಕೆ.ಎಲ್. ಅಶೋಕ್ ಸುಮಾರು ಹದಿನೈದು ನಿಮಿಷಗಳ ಕಾಲ ಭಾಷಣ ಮಾಡಿದ್ದರು. ಸುಮಾರು 8000 ಕ್ಕೂ ಮಿಕ್ಕಿದ ಪ್ರತಿಭಟನಾಕಾರರನ್ನು ಉದ್ದೇಶಿಸಿ ಅಂದು ಅಶೋಕ್ ಮಾಡಿದ ಭಾಷಣವನ್ನು ಕನಿಷ್ಠ ಪಕ್ಷ 250 ಪೊಲೀಸರಾದರೂ ಆಲಿಸಿರುತ್ತಾರೆ. ಕಡಿಮೆಯೆಂದರೂ "ಎರಡು ಡಜನ್ ಕ್ಯಾಮೆರಾಗಳಾದರೂ" ಅಶೋಕ್‌ರ ಭಾಷಣವನ್ನು ರೆಕಾರ್ಡ್ ಮಾಡಿದ್ದವು. ಕನಿಷ್ಠ ಪಕ್ಷ 10 ಮಂದಿ ಗುಪ್ತಚರ ಅಧಿಕಾರಿಗಳಾದರೂ ಅಲ್ಲಿದ್ದರು. ಅಂದಿನ ಭಾಷಣದಲ್ಲಿ ಅಶೋಕ್ ಯಾರಿಗೂ ಬೆದರಿಕೆ ಹಾಕಿಲ್ಲ, ಅಂದು ಅಶೋಕ್ ಆಡಿದ ಮಾತುಗಳಲ್ಲೇನೂ ಹೊಸತಿರಲಿಲ್ಲ, ಮಾನವಹಕ್ಕುಗಳ ಉಲ್ಲಂಘನೆ, ಕೋಮುವಾದ, ಪೊಲೀಸ್ ದೌರ್ಜನ್ಯದ ವಿರುದ್ಧ ಅಂದು ಅಶೋಕ್ ಭಾಷಣ ಮಾಡಿದ್ದರು. ಅದರು ಚಳವಳಿಗಳೊಂದಿಗೆ ಗುರುತಿಸಿಕೊಂಡಾಗಿನಿಂದಲೂ ಪ್ರತಿಪಾದಿಸುತ್ತಾ ಬಂದಿರುವುದೂ ಅದೇ ಆಗಿದೆ.

ಅಶೋಕ್‌ರ ಅಂದಿನ ಭಾಷಣದ ಒಟ್ಟು ಸಾರಾಂಶ ಈ ಕೆಳಗಿನಂತಿದೆ. "ಮಾನವ ಹಕ್ಕುಗಳಿಗಾಗಿ ತನ್ನ ಜೀವವನ್ನೇ ಮುಡಿಪಾಗಿಟ್ಟು ಹೋರಾಡುತ್ತಿದ್ದ ನಮ್ಮೆಲ್ಲರ ಸಂಗಾತಿ ನೌಶಾದ್ ಕಾಶಿಂಜಿ ಹುತಾತ್ಮರಾಗಿದ್ದಾರೆ. ಸತ್ಯಕ್ಕಾಗಿ, ನ್ಯಾಯಕ್ಕಾಗಿ ಹೋರಾಡಿ ಹುತಾತ್ಮರಾದ ಕಾಶಿಂಜಿ ಭಗತ್‌ಸಿಂಗ್, ಟಿಪ್ಪು ಸುಲ್ತಾನರ ಹುತಾತ್ಮತೆಯ ವೀರ ಪರಂಪರೆಗೆ ಸೇರಿಬಿಟ್ಟಿದ್ದಾರೆ. ಕರಾವಳಿ ಕರ್ನಾಟಕದಲ್ಲಿ ಮಾನವಹಕ್ಕುಗಳ ಉಲ್ಲಂಘನೆಯ ವಿರುದ್ಧದ ಪ್ರಬಲಧ್ವನಿಯಾಗಿದ್ದ ನೌಶಾದ್‌ರನ್ನು ಕೊಲ್ಲುವ ಮೂಲಕ ಈ ವ್ಯವಸ್ಥೆಯ ಭಾಗವಾದ ಕೆಲವು ದುಷ್ಟರು ನ್ಯಾಯಾಂಗದ ಕಗ್ಗೊಲೆಗೈದಿದ್ದಾರೆ. ಇದನ್ನೆಲ್ಲಾ ಇನ್ನೆಷ್ಟು ದಿನಾ ಅಂತ ಕರಾವಳಿಯ ಜನತೆ ಸಹಿಸಿಕೊಳ್ಳಬೇಕು? ಮುಂದೊಂದು ದಿನ ಇವುಗಳೆಲ್ಲದರ ವಿರುದ್ಧ ಜನ ದಂಗೆ ಏಳಬೇಕಾಗಬಹುದು. ಅಂತಹ ಉಸಿರು ಕಟ್ಟಿಸುವ ವಾತಾವರಣವನ್ನು ಆಳುವ ವರ್ಗ ಮತ್ತು ಇಲ್ಲಿನ ಕೆಲವು ಪೊಲೀಸರು ಸೇರಿ ಸೃಷ್ಟಿಸಿದ್ದಾರೆ. ಭೂಗತ ದೊರೆ ಪುಕ್ಕಲ ರವಿಪೂಜಾರಿ, ತಾಕತ್ತಿದ್ದಲ್ಲಿ ಮುಂದೆ ಬರಲಿ. ಹೇಡಿಗಳ ತರಹ ಎಲ್ಲೋ ಭೂಗತನಾಗಿದ್ದುಕೊಂಡು ಜಂಭ ಕೊಚ್ಚಿಕೊಳ್ಳೋದು ಗಂಡಸರ ಲಕ್ಷಣ ಅಲ್ಲ, ಇವತ್ತು ನಾವಿಲ್ಲ, ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದೇವೋ? ಇದು ಅನ್ಯಾಯವನ್ನು ನಾವಿನ್ನು ಸಹಿಸಲಾರೆವು ಎಂಬುವುದರ ಸಂಕೇತ. ಅನ್ಯಾಯದ, ಅಕ್ರಮ ವಿರುದ್ಧದ ನಮ್ಮ ಈ ಬೃಹತ್ ಪ್ರತಿರೋಧ ಪ್ರತಿಗಾಮಿ ಶಕ್ತಿಗಳ ಎದೆಯಲ್ಲಿ ಖಂಡಿತ ನಡುಕ ಹುಟ್ಟಿಸುತ್ತದೆ. ವೆಂಕಟೇಶ್ ಪ್ರಸನ್ನನಂತಹ ಪರಮ ಕುಖ್ಯಾತ ಮಾನವ ಹಕ್ಕುಗಳ ಉಲ್ಲಂಘಕರಿಗೆ ಖಂಡಿತವಾಗಿಯೂ ನಮ್ಮ ಈ ಸಂಘಟಿತ ಪ್ರತಿರೋಧ ನಿದ್ರೆಗೆಡಿಸುತ್ತದೆ. ನೌಶಾದ್ ಕೊಲೆ ಆತನನ್ನು ದುಸ್ವಪ್ನವಾಗಿ ಕಾಡುತ್ತದೆ.."

ವಿಜಯ ಕರ್ನಾಟಕ ಮಂಗಳೂರು ಆವೃತ್ತಿಯಲ್ಲಿ ವರದಿ ಮಾಡಿದಂತೆ "ವೆಂಕಟೇಶ್ ಪ್ರಸನ್ನನಿಗೆ ನಿದ್ರೆ ಮಾಡಲು ಬಿಡಲಾರೆ" ಎಂದು ಅಶೋಕ್ ಹೇಳಿದ್ದಕ್ಕೆ ವಿಜಯ ಕರ್ನಾಟಕವಾಗಲೀ ಪೊಲೀಸ್ ಇಲಾಖೆಯಾಗಲೀ ಒಂದೇ ಒಂದು ಸಾಕ್ಷಿ ತೋರಿಸಲಿ. ಅಶೋಕ್ ಬೆದರಿಕೆ ಹಾಕಿದ್ದರು ಎಂಬರ್ಥದ ವರದಿ ಮಾಡಿದ ವಿಜಯ ಕರ್ನಾಟಕ ಆ ವರದಿಯಲ್ಲಿ ಕೂಡಾ ತನ್ನ ಕುತಂತ್ರ ನಿಲುವನ್ನು ತೋರಿಸಿದೆ. ಹೇಗೆಂದರೆ "ವೆಂಕಟೇಶ್ ಪ್ರಸನ್ನ 'ಅನೌಪಚಾರಿಕವಾಗಿ' ಪತ್ರಿಕೆ ಪ್ರತಿನಿಧಿ ಮುಂದೆ ಪ್ರತಿಕ್ರಿಯೆ ನೀಡಿದ್ದರು." ಅನೌಪಚಾರಿಕ ಮಾತುಗಳನ್ನು ವರದಿಯಲ್ಲಿ ಪ್ರಕಟಿಸುವುದು ವೃತ್ತಿಧರ್ಮವೇ ಎಂದು ಮಹಾ ಮಾಧ್ಯಮ ಪಂಡಿತರುಗಳಾದ ವಿಜಯ ಕರ್ನಾಟಕದ ಸಂಪಾದಕರು ಉತ್ತರಿಸಲಿ.

'ಇನ್ಸ್‌ಪೆಕ್ಟರ್ ತಂದೆ ಮನೆಯಲ್ಲಿಯೇ ನಕ್ಸಲರ ಅದಾಲತ್' ಎಂಬ ಶೀರ್ಷಿಕೆಯಡಿ ಪ್ರಕಟವಾದ ವರದಿಯ ಕೊನೆಯ ಪ್ಯಾರಾದಲ್ಲಿ "ನನ್ನ ಮಗ ಪೊಲೀಸ್ ಇಲಾಖೆಯಲ್ಲಿ ಇದ್ದಾನೆ." ಎಂದು ವೆಂಕಟೇಶ್ ಪ್ರಸನ್ನರ ತಂದೆ ನರಸಿಂಹಮೂರ್ತಿಯವರೇ ನಕ್ಸಲರಿಗೆ ನೆನಪು ಮಾಡಿದ್ದಾಗಿ ತಿಳಿದುಬಂದಿದೆ ಎಂದು ಪ್ರಕಟಿಸಲಾಗಿದೆ. ಅಂದರೆ ನರಸಿಂಹಮೂರ್ತಿಯವರು ನೆನಪಿಸುವವರೆಗೆ ನಕ್ಸಲರಿಗೆ ಅದು ವೆಂಕಟೇಶ್ ಪ್ರಸನ್ನರ ಮನೆ ಎಂಬುದು ಗೊತ್ತೇ ಇರಲಿಲ್ಲ ಎಂಬುವುದು ವಿಜಯ ಕರ್ನಾಟಕದ ವರದಿಯಿಂದಲೇ ತಿಳಿದುಬರುತ್ತದೆ. ಕೆ.ಎಲ್. ಅಶೋಕ್‌ರನ್ನು ಏನಾದರೂ ಮಾಡಿ ನಕ್ಸಲ್ ಸಂಪರ್ಕವಿರುವವರು ಎಂದು ಬಿಂಬಿಸಲು ವಿಜಯ ಕರ್ನಾಟಕ ಮಾಡುತ್ತಿರುವ ಸರ್ಕಸ್ ನೋಡಿದರೆ ಅಯ್ಯೋ ಪಾಪ ಎನಿಸುತ್ತದೆ.

ಇಸ್ಮತ್ ಫಜೀರ್, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ

ಚಿದಾನಂದ ಸಾಲಿ

ತಲೆಮಾರಿನ ಲೇಖಕರಲ್ಲಿ ಒಬ್ಬರಾದ ಚಿದಾನಂದ ಸಾಲಿ ರಾಯಚೂರು ಜಿಲ್ಲೆಯ ಸಿರಿವಾರದವರು. ವೃತ್ತಿಯೋದ್ಯಮ ಎಂಎ ಒಳಗೊಂಡಂತೆ ಹಲವಾರು ಪದವಿಗಳನ್ನು ಪಡೆದಿರುವ ಸಾಲಿ ಕೆಲಕಾಲ ಪತ್ರಕರ್ತರಾಗಿದ್ದರು. ಟ್ಯಾಬ್ಲಾಯಿಡ್ ಪತ್ರಿಕೆಯೊಂದಕ್ಕೆ ಉಪಸಂಪಾದಕರಾಗಿದ್ದರು. ಪತ್ರಿಕೆಗಳಿಗೆ ಅಂಕಣ ಬರೆಯುತ್ತಿದ್ದರು. ಆಕಾಶವಾಣಿಯಲ್ಲಿ ಅನೌನ್ಸರ್ ಆಗಿದ್ದರು. ಸದ್ಯ ಅವರು ಪ್ರೌಢಶಾಲೆಯಲ್ಲಿ ಗಣಿತ ಕಲಿಸುವ ಶಿಕ್ಷಕರಾಗಿದ್ದಾರೆ. ಒಟ್ಟಿನಲ್ಲಿ ಸಾಲಿಯವರು ಭುಜಂಗಯ್ಯನ ದಶಾವತಾರ. ಈ ಬಹುತ್ವದ ಹಿನ್ನೆಲೆಯು ಅವರಿಗೆ ಕತೆ, ಕವಿತೆ, ಅನುವಾದ, ವ್ಯಕ್ತಿಚಿತ್ರ, ಅಂಕಣ ಬರಹದಂತಹ ಹಲವು ಪ್ರಾಕಾರಗಳಲ್ಲೂ ಕೆಲಸ ಮಾಡಲು ಪ್ರೇರೇಪಿಸಿದಂತಿದೆ ಅಥವಾ ಹಲವು ದಿಸೆಯಲ್ಲಿ ಶಕ್ತಿಚದುರಿಹೋಗಿ, ಫೋಕಸ್ಸಾಗಿ ಒಂದು ಪ್ರಕಾರದಲ್ಲಿ ತೊಡಗಿಸಿಕೊಳ್ಳದಂತೆ ಕೂಡ ಮಾಡಿದಂತಿದೆ.



ಸಾಲಿಯವರ ಐದು ಪುಸ್ತಕಗಳು ಈತನಕ ಬಂದಿವೆ. ಆದರೂ ಅವರ ನಿಜವಾದ ಪ್ರತಿಭೆಯ ಪ್ರಕಟಣೆ ಸಣ್ಣಕತೆಯಲ್ಲೇ ಆಗಿರುವುದು. ಅವರಿಗೆ ಬಂದಿರುವ ಬಹುಮಾನಗಳಲ್ಲಿ ಹೆಚ್ಚಿನವು ಕತೆಗಳಿಗೇ ಬಂದಿವೆ. 1988ರಲ್ಲಿ ಅವರ ಕಥಾಸಂಕಲನ 'ಧರೆಗೆ ನಿದ್ರೆಯು ಇಲ್ಲ' ಪ್ರಕಟವಾಯಿತು. ಅದನ್ನು ಓದಿದ ಹೊಸತರಲ್ಲಿ ನಾನು ಅವರಿಗೆ ಬರೆದಿದ್ದ ಪತ್ರವನ್ನು (ಅವರ ಅನುಮತಿ ಪಡೆದು) ಒಂದೆರಡು ಪದ ಬದಲಿಸಿ ಇಲ್ಲಿ ಕೊಟ್ಟಿದೆ.

ಪ್ರಿಯ ಚಿದಾನಂದ ಸಾಲಿ,

ನಿಮ್ಮ ಕಥಾಸಂಕಲನವನ್ನು ಓದಿದ ಮೇಲೆ ನನಗಾಗಿರುವ ಸಂತೋಷವನ್ನು ಈ ಪತ್ರದ ಮೂಲಕ ಹಂಚಿಕೊಳ್ಳುತ್ತಿರುವೆ. ಇದು ತಕ್ಷಣದ ಪ್ರತಿಕ್ರಿಯೆ. ಇದನ್ನು ವಿಮರ್ಶೆ ಎಂದು ಭಾವಿಸುವ ಅಗತ್ಯವಿಲ್ಲ.

ನನಗೆ ಬಹಳ ಇಷ್ಟವಾಗಿದ್ದು, ನೀವು ವಸ್ತುವನ್ನು ಆರಿಸಿಕೊಳ್ಳುವ ಮತ್ತು ಅದನ್ನು ಟ್ರೀಟ್ ಮಾಡುವ ವಿಧಾನ. ನುಗಡೋಣಿ ಅವರಂತೆ ನಿಮಗೆ ಕತೆ ಬರೆಯಲು ಗ್ರಾವಿಟಿ ಇರುವ ವಸ್ತುವೇ ಬೇಕಿಲ್ಲ, ಚಿಕ್ಕಪುಟ್ಟ ಎನ್ನಬಹುದಾದ ವಸ್ತುವಿನಲ್ಲೂ ಗಂಭೀರವಾದ ತೊಡಗುವಿಕೆ ಮತ್ತು ಸೂಕ್ಷ್ಮ ವಿಸ್ತರಿಸುವಿಕೆಯಿಂದ ಬಾಳಿನ ಲಯವನ್ನು ಶೋಧಿಸಲು ನಿಮಗೆ ಸಾಧ್ಯವಾಗಿದೆ. ಇದನ್ನು ನಾನು ಜಯಂತ್ ಕಾಯ್ಕಿಣಿ ಅವರಲ್ಲೂ ನಿಮ್ಮ ಭಾಗದ ನೀರಮಾನ್ವಿಯವರಲ್ಲೂ ಕಂಡಿದ್ದೇನೆ. ಇದರಿಂದ ಕತೆಯ ರೂಪದ ಬಗ್ಗೆ ಹೆಚ್ಚು ಹಿಡಿತ ಪಡೆಯಲು ಸಾಧ್ಯವಾಗಿದೆ.

ನಿಮ್ಮ ಹೆಚ್ಚಿನ ಕತೆಗಳು ಮನೋವಿಶ್ಲೇಷಣಾತ್ಮಕ ಆಗಿದ್ದು ನವ್ಯದ ಕತೆಗಳನ್ನು ನೆನಪಿಸುತ್ತವೆ. ಪಾತ್ರಗಳನ್ನು ಸಾವಧಾನವಾಗಿ ಕಟೆಯಲು ಇದರಿಂದ ಸಾಧ್ಯವಾಗಿದೆ. ಆದರೆ ನವ್ಯದ ಈ ಅಂತರ್ಮುಖೀ ವಿಧಾನವು ಜೀವನ ದೃಷ್ಟಿಕೋನದಿಂದ ಕೆಲವು ಮಿತಿಗಳನ್ನು ಒಡ್ಡುತ್ತದೆ. ಕತೆಗಳು ಕೆಲವೊಮ್ಮೆ ನಿರುದ್ದಿಶ್ಯವಾಗಿ ಮುಗಿಯುವಂತಾಗಿರುವುದು ಇದರಿಂದಲೇ ಅನಿಸಿತು. ಆದರೆ ಈ ಅಪಾಯದಿಂದ ಉಳಿಸಿರುವುದು ನಿರೂಪಕ ಪಾತ್ರದ ಆತ್ಮವಿಮರ್ಶೆ. ಅಂದರೆ ತನ್ನ ಸಣ್ಣತನ ವಿಕ್ಷಿಪ್ತತೆಗಳನ್ನು ತಾನೇ ಕಂಡುಕೊಳ್ಳಲು ಹಿಂಜರಿಯದ ಕಾರಣದಿಂದ ಆ ಪಾತ್ರದಲ್ಲಿ ಸಂಭವಿಸಿರುವ ಪ್ರಾಮಾಣಿಕತೆ ಮತ್ತು ಬ್ಲಾಕ್‌ಹ್ಯೂಮರ್.

ಕಾಮಿಕ್ ಶೈಲಿ ನಿಮ್ಮ ಕತೆಗಳ ಮತ್ತೊಂದು ಶಕ್ತಿಗಳಲ್ಲಿ ಒಂದು. ಇದರಲ್ಲಿ ನಮ್ಮ ಕಾಲದ ಪ್ರಭಾವಶಾಲಿ ಕತೆಗಾರರಾದ ಕುಂವಿಯವರ ಪ್ರಭಾವವೂ ಇರಬಹುದು. ಆದರೆ ಈ ವೈನೋದಿಕತೆ ಕುಂವಿಯವರಲ್ಲಿ ಇರುವಂತೆ ಸ್ವೇಚ್ಛೆಯಾಗಿಲ್ಲ ಅಥವಾ ನುಗಡೋಣಿಯವರಲ್ಲಿ ಇರುವಂತೆ ವಿನೋದ ರಹಿತವಾಗಿಲ್ಲ, ಸಮತೋಲನದಲ್ಲಿದೆ. ಈ ವಿನೋದದಿಂದ ಜೀವನದ ಮುದುಕುಮೂಲೆಗೂ ಹೋಗಿ ಅಲ್ಲಿನ ಚಿತ್ರಗಳನ್ನು ನೋಡಲು ನಿಮಗೆ ಸಾಧ್ಯವಾಗಿದೆ. ಅದರಲ್ಲೂ ಅಧೋಲೋಕಗಳನ್ನು ಚಪ್ಪರಿಕೆ ಮತ್ತು ಶೀಲಾಶ್ಲೀಲದ ಹಂಗಿಲ್ಲದೆ ನೋಡುವ ರೀತಿಯು ಚೆನ್ನಾಗಿ ಬಂದಿದೆ.

ನಿಮ್ಮಲ್ಲಿ ಭಾಷೆಯ ಜತೆಗೆ ಆಟವಾಡುವ ಕುಶಲತೆಯಿದೆ. ಅದರಲ್ಲೂ ದೋಆಬ್ ಪ್ರದೇಶದ ಭಾಷೆಯ ಅದ್ಭುತವಾದ ಪ್ರಯೋಗವಿದೆ. ನೈಜಾಂ ಕರ್ನಾಟಕದ ಉರ್ದುಗನ್ನಡದ ಝಲಕಿದೆ. ಕಥನದ ತುಂಬ ಇರುವ ಶಬ್ದಚಿತ್ರಗಳು ಸಹಜವಾಗಿವೆ ಮತ್ತು ಪರಿಣಾಮಕಾರಿಯಾಗಿವೆ.

ನನಗೆ ಇಲ್ಲಿ ಪ್ರಿಯವಾದ ಕತೆಗಳೆಂದರೆ, 'ಅಂಬರದೊಳಗಾಡುವ ಗಿಳಿ', 'ಕಾಗೆಯೊಂದಗಳು ಕಂಡರೆ'; ಬಹುಶಃ ಆತ್ಮಕಥನಾತ್ಮಕ ಧಾಟಿಯಲ್ಲಿ ನಿರೂಪಕನ ಬಾಲ್ಯಕ್ಕೆ ಹೋಗಿಬರುವ ಎಲ್ಲ ಕತೆಗಳಲ್ಲೂ ನೀವು ತುಂಬ ಪವರ್‌ಫುಲ್ ಆಗಿ ಕಾಣಿಸುತ್ತೀರಿ. ನಾಗ್ಯಾ ಚೆನ್ನಪ್ಪಮಾಸ್ತರ, ಅಲ್ಲಮ ಮುಂತಾದ ಪಾತ್ರಗಳು ತುಂಬ ಜೀವಂತವಾಗಿವೆ.



ಆದರೆ 'ಕಂಡುದ ಹಿಡಿಯದೆ' ಕತೆಯ ನಾಟಕೀಯತೆ ಕೊಂಚ ಅತಿ ಮತ್ತು ಕೃತಕ ಅನಿಸಿತು. ಈ ವಿನೋದ ಧಾಟಿ ಕೊಂಚ ಮಿತಿಮೀರಿದರೆ, ಕತೆಗಳನ್ನು ಕಟ್ಟಿಹಾಕುವ ಅಪಾಯವಿದೆ. ಹಾಗೆ ತನ್ನ ಶೈಲಿಯಲ್ಲಿ ತಾನೇ ಬಂಧಿತರಾದ ಕುಂವಿ 'ಅರಮನೆ' ಕಾದಂಬರಿಯಲ್ಲಿ ಸೋಲುವಪಡೆದುದನ್ನು ನಾವೆಲ್ಲ ನೋಡಿದ್ದೇವಷ್ಟೆ. 'ಕಾಗೆಯೊಂದಗಳು ಕಂಡರೆ' ಕತೆಯ ಕೊನೆಯಲ್ಲಿ ಒಂದು ಬಗೆಯ ಗೊಂದಲವಿದೆ ಅನಿಸಿತು.

ಕರ್ನಾಟಕದ ಒಂದೇ ಪ್ರದೇಶದಿಂದ ಬಂದ ನಾಲ್ವರು ಕತೆಗಾರರೆಂದರೆ ಶಾಂತರಸ, ನೀರಮಾನ್ವಿ, ನುಗಡೋಣಿ ಮತ್ತು ನೀವು. ನಾಲ್ಕನೆಯ ತಲೆಮಾರಿಗೆ ಸೇರಿದ ನೀವು ಇವರೆಲ್ಲರಿಗಿಂತ ನಿಮ್ಮದೇ ಆದ ವಿಶಿಷ್ಟತೆಯನ್ನು ಸಾಧಿಸಲು ಯತ್ನಿಸಿದ್ದೀರಿ. ಅದು ಬಹುಮಟ್ಟಿಗೆ ಸಾಧ್ಯವಾಗಿದೆ. ನೀವೊಬ್ಬ ಒಳ್ಳೆಯ ಗದ್ಯ ಬರೆಹಗಾರ. ನಿಮ್ಮ ಗಜಲುಗಳಿಗಿಂತಲೂ ನನಗೆ ನಿಮ್ಮ ಗದ್ಯ ಶಕ್ತವಾದುದು ಅನಿಸಿತು. ಬದುಕಿನ ಅರ್ಥವನ್ನು ಶೋಧಿಸುವ ದೃಷ್ಟಿಯಿಂದಲೂ ನಿಮ್ಮ ಕಾವ್ಯಕ್ಕೆ ಇಲ್ಲದ ಸಾಮರ್ಥ್ಯವನ್ನು ಗದ್ಯವು ಪ್ರಕಟಿಸುತ್ತಿದೆ. ನಿಮ್ಮಲ್ಲಿ ಅಪಾರ ಶಕ್ತಿಯಿದೆ. ಅದನ್ನು ಪ್ರಕಟಿಸಿರಿ. ನಮಸ್ಕಾರ.

ಸ್ನೇಹದ

ರಹಮತ್ ತರೀಕೆರೆ

ಮತ್ತೊಮ್ಮೆ ಓದುವಾಗ, ಸಾಲಿ ಅಗತ್ಯಕ್ಕಿಂತ ಹೆಚ್ಚಾಗಿಯೇ ಅಧೋಲೋಕಕ್ಕೆ ಹೋಗಿ ಅಲ್ಲಿನ ವಿಕ್ಷಿಪ್ತ ಲೋಕಗಳನ್ನು ಹಿಡಿಯುತ್ತಿದ್ದಾರೇನೊ ಅನಿಸಿತು. ಅವರದು ಮೂಲತಃ ವ್ಯಕ್ತಿಗಳ ಒಳಹೊಕ್ಕು ಅವರ ತಲ್ಲಣಗಳನ್ನು ಹೆಕ್ಕಿನೋಡುವ ಮನುಷ್ಯ ವರ್ತನೆಗಳ ಹುಡುಕಾಟದ ಬರೆಹ. ಅವರ ಕಥೆಗಳಲ್ಲಿ ಒಂದು ಪರಿಸರಕ್ಕಿಂತ ಇಂಡಿವಿಜುಯಲ್‌ಗಳು ಎದ್ದು ಕಾಣುತ್ತಾರೆ. ಈ ಇಂಡಿವಿಜ್ಯುಯಲಿಸಂ ಅವರ ಗಜಲುಗಳಲ್ಲೂ ಇದೆ. ಈ ವಿಷಯದಲ್ಲಿ ಅವರೇ ಅನುವಾದಿಸಿರುವ ಮೆಹಜಬೀನಳ ಕಾವ್ಯದಿಂದ ಅವರ ಬರೆಹ ಕಲಿಯುವುದಿದೆ ಅನಿಸುತ್ತದೆ. ವ್ಯಕ್ತಿಗತ ಹುಡುಕಾಟಗಳು ಒಂದು ಬಗೆಯಲ್ಲಿ ನಮ್ಮ ಪರಿಸರದ ತಲ್ಲಣಗಳನ್ನು ಹಿಡಿಯುವ ವಿಷಯ... ಬಿಟ್ಟುಕೊಡುವಂತೆ ಮಾಡುತ್ತಿವೆಯೇನು? ಇದು ಇದೇ ಭಾಗದ ಕಲಿಗ... ನುಗಡೋಣಿ, ನವಲಕಲ್ ಅವರ ಕತೆಗಳಿಗೆ ಹೋಲಿಸುವಾಗ ಹುಟ್ಟುವ ... ಸಾಲಿ ಕತೆಗಳಲ್ಲಿ ಬಳಸುತ್ತಿರುವ ವಿನೋದ ಕೂಡ ಎಕ್ಸಸ್ ಆಗುತ್ತಲಿದ್ದು ಮುಂ... ಸಂಕಲನದಲ್ಲಿ ಅದು ಹೇಗೆ ಹೊರಳಿಕೊಳ್ಳುತ್ತದೆಯೊ ನೋಡಬೇಕು.

ಹೈದರಾಬಾದ್ ಕರ್ನಾಟಕದ ಲೇಖಕರಿಗೆ, ಅದರಲ್ಲೂ ರಾಯಚೂರು ಸೀ... ಯವರಿಗೆ, ಪರಿಸರದಿಂದಲೇ ಸಹಜವಾಗಿ ಉರ್ದು ಮತ್ತು ತೆಲುಗು ಒದ... ಸಿಕ್ಕಿಬಿಡುತ್ತದೆ. ರಾಯಚೂರು ಶಾಂತರಸ ಮುಕ್ತಾಯಕ್ಕ, ಮುದ್ದಣ್ಣ ಮಂ... ಅಮರಚಿಂತ ಮುಂತಾದ ಗಜಲ್ ಕವಿಗಳ ಊರು. ಉರ್ದು ಕವಿಗಳೂ ಇ... ಊರು. ಇಂತಹ ಬಹುಭಾಷಿಕ ಪರಿಸರದಲ್ಲಿ ಬೆಳೆದ ಸಾಲಿಯವರು ಗ... ಬರೆಯಲು ಮತ್ತು ತೆಲುಗಿನಿಂದ ಅನುವಾದ ಮಾಡಲು ಸಾಧ್ಯವಾಗಿದೆ. ಸಾಲಿಯ... ಗಜಲ್‌ಗಳು (ಮೌನ) ನಿಜಕ್ಕೂ ಚೇತೋಹಾರಿಯಾಗಿವೆ. ಅಲ್ಲಿಂದ ಸುಂದರ... ಸಾಲುಗಳನ್ನು ಎತ್ತಿ ಉಲ್ಲೇಖಿಸಬಹುದು. ಆದರೆ 'ಪರ್ಸನಲ್' ಎನ್ನಬಹುದಾ... ಅಂತರಂಗದ ರೊಮ್ಯಾಂಟಿಕ್ ಭಾವ ಮತ್ತು ದುಗುಡಗಳನ್ನು ಹಿಡಿಯುವ, ಲೋ... ಕೋಲಾಹಲಗಳನ್ನು ಅಷ್ಟಾಗಿ ಒಳಗೊಳ್ಳದ ಈ ಪ್ರಕಾರದಲ್ಲಿ, ಸಾಲಿ ಇನ್ನು ... ದೂರ ಹೋಗುವರೊ ಹೇಳಲಾಗದು.

ನಿಜಕ್ಕೂ ಖುಷಿಯಾಗುವುದು ಮತ್ತು ಅಭಿನಂದಿಸಬೇಕು ಅನಿಸುವ... ಸಾಲಿಯವರ ಮಹಜಬೀನ್ ಅನುವಾದಕ್ಕೆ (ಎಲೆಯುದುರೊ ಕಾಲ); ತೆಲು... ವಿಶಿಷ್ಟ ಸಂವೇದನೆಯ ಕವಿಯಾದ ಮೆಹಜಬೀನ್ ಕಾವ್ಯವನ್ನು ಅವರು ಬ... ಆಪ್ತವಾಗಿ ತನ್ಮಯತೆಯಲ್ಲಿ ಅನುವಾದಿಸಿದ್ದಾರೆ. ಮೆಹಜಬೀನ್ ಕಾವ್ಯದಲ್ಲಿ ಇ... ಫ್ರೆಶ್ ಎನಿಸುವ ಹೆಣ್ಣ... ಭಾವನೆಗಳನ್ನು ಅದ್ಭುತ... ತಂದಿದ್ದಾರೆ. ಹಿಂದೆ ... ಭಾಗದ ಎಂ.ಲಕ್ಷ್ಮಣ ಅ... ತೆಲುಗಿನಿಂದ ಚೆರಬಂಡರಾ... ಕಾವ್ಯವನ್ನು ತಂದಿದ್ದ... ಆದರೀಗ ಹೊಸತಲೆಮಾ... ಲೇಖಕರ ಆಯ್ಕೆ ಬದಲಾ... ಇದಕ್ಕೆ, ನಮ್ಮ ನಾ... ಬದಲಾದ ಸನ್ನಿವೇಶಗ... ಪ್ರೇರಕವಾಗಿವೆ. ಇಷ್ಟಂತೂ ನಿಜ. ಕವಿಯಾದ ಸಾಲಿಯವರ ಸುಂದರವ... ಗಜಲುಗಳನ್ನೂ ಪಕ್ಕಸರಿಸುವಂತೆ, ಅವರ ಈ ಅನುವಾದವು ಮಹತ್ವದ್ದಾಗಿ ಕಾಣು...

ಸಾಲಿ ಈಚೆಗೆ ಸಂದರ್ಶನದಲ್ಲಿ ಮಾತಾಡುತ್ತ ತಮ್ಮ ಬರೆಹದ ಸವಾಲುಗಳೇ... ಎಂಬ ಪ್ರಶ್ನೆಗೆ ಉತ್ತರಿಸುತ್ತ "ಅಸಮಾನತೆ, ಕೀಳರಿಮೆ, ಅವಮಾನ ಮತ್ತು ನಿಲ... ಇವುಗಳಿಂದಾಗಿಯೇ ಹೆಚ್ಚುಹೆಚ್ಚು ಬರೆಯುವ ಹುಮ್ಮಸ್ಸು ತನ್ನೆಲ್ಲ ಶಕ್ತಿಯ... ಪುಟಿದೇಳುವುದು" ಎಂದಿರುವರು. ಒಬ್ಬ ಯುವಲೇಖಕನ ಈ ತಲ್ಲಣಗ... ಹೇಗೆ ಅರ್ಥಮಾಡಿಕೊಳ್ಳುವುದು? ಈ ಹತಾಶ ವಾತಾವರಣ ಸಾಮಾಜಿಕವಾದದ್ದಾ... ಗಂಭೀರ ಅರ್ಥಬರುತ್ತದೆ; ಸಾಹಿತ್ಯಕವಾದುದಾದರೆ ಸೀಮಿತ ಅರ್ಥ ಬರು... ಕರ್ನಾಟಕದಲ್ಲಿ ಮಾಸ್ ಮೂವ್‌ಮೆಂಟುಗಳು ಕ್ಷೀಣಿಸಿರುವ ಸನ್ನಿವೇಶದಲ್ಲಿ ಅ... ಇರುವ ಚಳವಳಿಗಳಲ್ಲಿ ಭಾಗವಹಿಸದ ಕಾರಣದಿಂದ ಲೇಖಕರಲ್ಲಿ ಇಂತಹ ತುಮುಲ... ಹುಟ್ಟಿಕೊಳ್ಳುತ್ತಿವೆಯೇ? ಗೆಲುವು ಮತ್ತು ಸೋಲುಗಳೇ ದೊಡ್ಡ ಮೌಲ್ಯಗಳಾಗಿ... ಮಾರುಕಟ್ಟೆಯ ಸಂಸ್ಕೃತಿ ಲೇಖಕರನ್ನೂ ಹೀಗೆ ಕ್ಯಾರಿಯರಿಸ್ಟ್ ಮಾಡುತ್ತಿದೆಯೆ... ಮಾಧ್ಯಮಗಳು ತಮಗೆ ಬೇಕಾದ ಲೇಖಕರನ್ನು ಸೃಷ್ಟಿಸುತ್ತ ತಮ್ಮನ್ನು ಹೊರಗಿಟ್ಟಿವೆಯೆ... ಬೆಂಗಳೂರಿನಾಚೆಯ ಲೇಖಕರಲ್ಲಿ ತಲ್ಲಣವಿದೆಯೊ? ಅಥವಾ ಇಂತಹದ್ದನ್ನೆಲ್ಲ ಮೀ... ಮೆಚ್ಯುರಿಟಿಯನ್ನು ನಮ್ಮ ಲೇಖಕರು ತಣ್ಣಗೆ ಪಡೆದುಕೊಳ್ಳುವ ಜರೂರನ್ನು ... ಸೂಚಿಸುತ್ತಿದೆಯೊ? ತಿಳಿಯದಾಗಿದೆ.



ತಿಳಿನೀರ ಹೊಳೆ ದಾರಿಯಲ್ಲಿ

• ಬಿ. ರಾಜಣ್ಣ

ನಿದ್ದೆ ಬರಲಿಲ್ಲವಂತೆ
ವಂಗ ನಾಡಿನ ಬೇಲೂರು
ಮಠದಯ್ಯನಿಗೆ
ಹಾಸಿಗೆ ಅಡಿಯ ಕಾಸಿನಿಂದಾಗಿ!

ಉಳ್ಳವರು ಕಟ್ಟಿಸಿದ
ಪ್ರೀತಿ ವಿಹಾರಗಳಲ್ಲಿ
ಬಿಡಾರಿಸಿದರೂ, ಬಿಡಲಿಲ್ಲವಂತೆ
ಬೀದಿ ಭಿಕ್ಷೆಯನು
ವೈಶಾಖದ ಪೂರ್ಣಿಮಯ್ಯ!

ದುಡ್ಡುದುಗ್ಗಾಣಿರಾಜ ರಾಶಿಯಲಿ
ಬಿದ್ದು ಒದ್ದಾಡಿದರು
ಕಿಲುಬು ದಮ್ಮಡಿಯೂ
ಅಂಟಲಿಲ್ಲವಂತೆ
ಕಪ್ಪಡಿ ಸಂಗನ ಸಹವಾಸದವನ
ಮೈಗೆ!

ಮೂಗಿನ ಮುಸುರೆಯೂ ಹುಟ್ಟದವನ
ಮಡದಿ ಮೂಗುತಿಯ ಮಾಯ
ಮೂತಿಗೆ ತಿವಿಯಲು, ಹೇಸಿ
ತಿರುಪೆ ದಾಸನಾದನಂತೆ
ನವಕೋಟಿ ನಾರಾಯಣ!

ರಕ್ತದೋಕುಳಿಯ
ಕತ್ತಿಖಡ್ಗಗಳಾಟಕ್ಕೆ ತತ್ತರಿಸಿ
ತಾಳತಂಬೂರಿ ಹಿಡಿದನಂತೆ
ದಿಮ್ಮನೆಗದ್ದುಗೆಯ ತಿಮ್ಮನಾಯಕ!
(ತಟ್ಟೆಕಾಸಿನ ಜನ, ಅವಗೆ ಕೊಟ್ಟ ಕಾಟದ ಕತೆಯೇ
ಬೇರೆ)

ನಟುವಾಂಗದ ಪಟುವೊಬ್ಬ
ಬಯಲ ಜೋತಿರ್ಲಿಂಗವ ಧರಿಸಿ
ಹೊಲೆ-ಹದಿನೆಂಟು 'ಜನಶಿವ'ರಿಗಿತ್ತ
'ವಚನ' ಮಂಟಪದ ಉರಿಗದ್ದಿಗೆ ಮೇಲೆ
ವಿರಾಜಿಸಿದನಂತೆ: ಕರಿ ನೆಲದನುಡಿಯ
ಬಗೆಬಗೆ ಬೆಡಗು ಬಣ್ಣದ ಬನಿದನಿಗಳ
ಆಲಿಸುತ್ತ!

ಶಿಶುನಾಳದ ಕಬೀರನನ್ನು
ದಾರಭಾರಗಳ ಹಂಗಿರದ, ಭಟ್ಟನ
ಶ್ರೀಪಾದ, 'ಗೋವಿಂದ' ಮಾಡಿ
ಅಲ್ಲಾನ ತೋರಿತಂತೆ!

ಅಹುದಹುದು, ಎಲ್ಲಾರು 'ನಮ್ಮವರೆ'
ಎಂದು ಅಪ್ಪಣೆಸಿದರು
ಜಗಮಗಿಸುವ ವೇದಿಕೆ ಮೈಕಲ್ಲಿ;
ಸಕಲ ಜೀವಕೋಟಿಯ ಲೇಸಮಂತ್ರದ
ಅತುಲ ಸಿರಿಸಂಪದದ
ಸ್ವಕುಲ ಜಗತ್ತಿನ ಗುರುವರ್ಯರು!
(ಪೂಜ್ಯರ ವಿದ್ಯೆ ಅಂಗಡಿ ನಫೆಯ ಹಂಗಿನನ್ನದ್ದು,
ಬೇರೆಯದೇ ಮಾತು)

ಸುಭದ್ರ, ಮಠಕೋಟೆ ಅಂತಃಪುರದಲ್ಲಿ
ಬುದ್ಧೋರು, ಹೊಸೆದಿಟ್ಟ ಸಿಡಿಮದ್ದ
ಬತ್ತಿ, ಬಿಟ್ಟ ಬಾಣಗಳ ಗುರಿ;
ಆ 'ಅವನಾರವ'ನೆ ಅಂತೆ!

ಅಧ್ವಾನ ಸೌಧದಾವರಣದಲ್ಲಿ
ಬಿಕ್ಕುತ್ತಿದ್ದರೆ ಅನಾಥ ಜಂಗಮ
ಕೋಟಿತೀರ್ಥ ಸಾಧುಕೊಟ್ಟ ಸ್ಥಾವರಕ್ಕೆ
ರಣಕೇಕೆ! ಸಿರಿಸಂಭ್ರಮ!
ಗರ್ಭಗುಡಿಯಲ್ಲಿ!

...ಡೂರಪ್ಪ ಚೀನಾ ದೇಸಕ್ಕೆ ಯಾಕೋದ ಗೊತ್ತೇನ್ಲ?

...ನ್ನು ಮುಂದೆ ಪಂಚಾಯ್ತಿಗಳಲ್ಲಿ ಶೇ. ಐವತ್ತು ...ಮಹಿಳೆಯರೇ ತುಂಬಿರುತ್ತಾರೆಂಬ ಚರ್ಚೆ ...ರಿತ್ತು. ಇದನ್ನು ಒಪ್ಪದ ಸೀರ,

...ಲ್ಲಾ ಯಲ್ಲಾ ಹೆಂಗುಸ್ರು ಪಂಚಾತಿವಳಗಿದ್ರೆ ಅಡುಗೆ ...ನ್ಯಾರು? ಆಡು, ದನ, ಕರ ನೋಡೊರ್ನಾರೂ?" ... ಕೊರಗಿದ.

...ನ್ನ ಬಾಯಲೆ ಬತ್ತು ನೋಡು ನಾವೇಟು ಕ್ಯಲಸ ...ದ್ಮೊ ಅಂತ" ಎಂದಳು ಜುಮ್ಮಿ.

...ನ್ನಬಳೆ ಏನು ಮಾಡದಿಲ್ಲ ತಗೊ. ನಂಜುಂಡಪ್ಪನೂ ...ವಿ. ಅವುನೆ ಇಲ್ದೆಯಿದ್ರೆ ನೀನು ರಾಜಕಾರಣ ...ಯಿತ್ತೆ?"

...ಯ ಲು ಸೀ ಮೆ

...ಕಟ್ಟೆಪುರಾಣ

▸ ಬಿ. ಚಂದ್ರೇಗೌಡ

...ವುನು ನನ್ನ ಕ್ಯಲಸ ಏನೂ ಮಾಡದಿಲ್ಲ ಕಣೊ. ...ತಿ ಮೀಟಿಂಗ್ ನ್ಯಡಿಯೊ ದಿನ ನಾನು ನನ್ನ ...ಲ್ಲ ಮುಗಿಸಿ ಅವುನಿಗೂ ಅಡುಗೆ ಮಾಡಿ ...ಬುಟ್ಟು ಹೋಯ್ತಿನಿ ಗೊತ್ತೆ?" ಎಂದು ಜುಮ್ಮಿ ...ದಿದಳು.

...ಜ ಬುಡೆ. ಹೆಂಗಸರಿಗೆ ಐವತ್ತು ಪರಸೆಂಟು ...ಾತಿ ಕೊಟ್ಟದ್ದೇನೋ ಸರಿ. ಆದ್ರೆ ಅದರಿಂದ ...ಮನೆಲಿ ಮಾಡೊ ಕ್ಯಲಸೇನೂ ಕಡಿಮಾಗಲಿಲ್ಲ, ...ವಸಿ ಜಾಸ್ತಿನೆ ಆಯ್ತು" ಎಂದ ಉಗ್ರಿ. ಆಗ ಕಾಳ ... ಯಾವುದೊ ಉದಾಹರಣೆ ಕೊಡಲು ತಯಾರಾ

...ಮ್ಮ ಕ್ಯಾತಗಳ್ಳಿ ನಂಜಪ್ಪನ ಮಗಳವುಳಲ್ಲಾ ಅವುಳು ...ಮೆಂಬ್ರು ಕಂಡ್ಯೆ. ನಾಕು ಮಕ್ಕಳವೆ, ಅವುನೂ ...ಯಿಸಿಗಂಡು, ಮೆಂಬ್ರು ಕ್ಯಲಸನೂ ಮಾಡ್ತ ಅವುಳೆ"

...ಅವುಳು ನನಿಗೂ ಗೊತ್ತು ಕಣಮಾವ. ವಸಂತಕ್ಕ ... ಅವುಳೆಸುರು. ಪಂಚಾತಿ ಮೆಂಬರಾದ ಮ್ಯಾಲೆ ...ದಿನದಲ್ಲಿ ಬೀರು ತರಿಸಿ ಯಲ್ಲಾರಿಗೂ ಕೊಟ್ಟು ...ಬಂಚೂರು ಕುಡಿತಿದ್ಲು. ಈಗ ಹಾಟನೆ ಕುಡಿತಳೆ ... ಎಂದ ಉಗ್ರಿ.

...ಏನು ಕುಡಿಯದಿಲವೇನ್ಲ? ಅಂಗೆ ಆವುಳುವೆ" ...ದು ಜುಮ್ಮಿ.

...ಅಂಗಲ್ಲ ಕಣೆ ನಾನೇಳಿದ್ದು. ಮಯಿಳೇರು ಪುರುಸುನ ...ಬತ್ತಾ ಅವುಳೆ ಅಂತ ನಾನೇಳಿದ್ದು."

"ಅದ್ನೆ ಸಯಿಸಕ್ಯಾಯ್ತಾಯಿಲ್ಲವಲ್ಲ ಹೇಳು."

"ನಾನು ಸಯಿಸ್ತಿನಿ ಕಣೆ. ನಾನು ಮಯಿಳೇರ ಮುಂದಕೆ ತರಬೇಕು ಅಂತ ಎಷ್ಟು ಹೋರಾಟ ಮಾಡಿದ್ದಿನಿ ಗೊತ್ತೆ?"

"ಬಾಳ ಮಾಡಿದ್ದಿ ಬುಡು ಮುಂದುತ್ತರಕ್ಕೆ" ಎಂದು ಜುಮ್ಮಿ ತನ್ನ ಹೊಟ್ಟೆ ಮುಂದಕ್ಕೆ ಕೈ ಆನಿಸಿ ಅಣಕಿಸಿ ನಕ್ಕಳು. ಉಗ್ರಿ ಗಹಗಹಿಸಿ ನಕ್ಕ. ಕಾಳಮಾವನ ತುಟಿ ಯಂಚಿನಲ್ಲಿ ನಗು ಮಿಂಚಿತು.

"ಆ ವಸಂತ ಏನು ಮಾಡೋಳು ಅಂದ್ರೆ, ವತ್ತರಲೆ ಎದ್ದು ಎತ್ತು ಯಮ್ಮೆ ಈಚೆಗೆ ಕಟ್ಟಿ, ಕಸ ಹೊತಗಂಡೋಗಿ ವಲಕಾಕಿ, ಬತ್ತಲೆ ಹುಲ್ಲ ಕಿತಗಂಡು ಬರೋಳು. ಬಂದು ರೊಟ್ಟಿ ಹಾಕಿ, ಹುಡುಗರನ್ನಲ್ಲಾ ಕಳಿಸಿ, ಅಮ್ಯಾಲೆ ಹಿಟ್ಟು ಸಾರು ಮಾಡಿ, ತಿರಗ ಯಮ್ಮೆ ದನ ವಡಕಂಡೋಗಳು. ಮೇಯಿಸಿಕಂಡು ಬರುವಾಗ ಸುಮ್ಮನೆ ಬತ್ತಿರಲಿಲ್ಲ, ಒಂದು ಮನ ಸೌದೆ ತರಳು. ತಿರಗ ರಾತ್ರಿಕೆ ಅಡುಗೆ ಮಾಡಿ ಯಲ್ಲಾರಿಗೂ ಇಕ್ಕಿ ಮನಿಕಳೋಳು....." ಎಂದು ಕಾಳಮಾವ ಹೇಳುತ್ತಿದ್ದಾಗ ಮಧ್ಯೆ ನುಗ್ಗಿದ ಉಗ್ರಿ,

"ಆಗ ಅವುಳಗಂಡ ಅತ್ಯಕೋಗನು. ಏಟೇ ಸುಸ್ತಾದ್ರು ಗಂಡನ್ನ ದೂರ ನೂಕಕ್ಯಾಯ್ತಿರಲಿಲ್ಲ; ಅಲವೆ ಮಾವ?" ಎಂದ.

"ಅದಲ್ಲ ಕಂಡ್ಯ ನಾನೇಳಿದ್ದು. ಅವುಳು ಒಂದೇ ಒಂದಿನ ಕೂತು ಸುಧರಾಯಿಸಿಗಂಡ್ನೆ ನೋಡಲಿಲ್ಲ ನಾನು."

"ನಾನೇಳಕ್ಕೆ ವಂಟಿದ್ದು ಸಾಬರ ನ್ಯಾಯ ಕಣಮಾವ."

"ಸಾಬರ ನ್ಯಾಯಬ್ಯಾರೆ ಇದ್ದತೆ? ಅವುರು ನಮ್ಮಂಗೇ ಅಲವೇನ್ಲ?"

"ಇದೊಂದು ವಿಸಿಯದಲ್ಲಿ ಅವುರು ನಮ್ಮಂಗೆಯ. ಆದ್ರೆ ಅದ್ನೂ ಕುರಾನಲ್ಲಿ ಬರದು ಹೆಂಗಸರು ತಿರಗ ಮಾತಾಡದಂಗೆ ಕಾನೂನು ಮಾಡಿದ್ದರಂತೆ."

"ಅದೇನು ಕಾನೂನು ಮಾಡಿದ್ದರ್ಲ?"

"ಹೆಂಡತಿಗೆ ಮೈ ಸರಿಯಿಲ್ದೆಯಿದ್ರುವೆ, ಮನುಸು ಸರಿಯಿಲ್ದೆಯಿದ್ರುವೆ, ಗಂಡ ಅತ್ಯಕೆ ಬಂದಾಗ ನಿರಾಕರಸಂಗಿಲವಂತೆ. ಇದೇ ನೋಡಾ ಕಾನೂನು."

"ಅದೇನು ಸುಳ್ಳೇಳತಿಲ. ಇಂತೆದ್ನು ಕಾನೂನು ಮಾಡ್ಯರೆ?"

"ಮಾಡಿದ್ದರಂತೆ ಕಣೇ. ಕುರಾನ್ನಳಿಗೆ ಇದ್ದತಂತೆ. ನಜೀರ್‌ನೆ ಅಂಗಂದ. ನನಿಗೇನು ಗೊತ್ತು."

"ಗಂಡ ಬೇಜಾರಾಗಿ ಬ್ಯಾರೆ ಮದಿವಾದನು ಅಂತ ಅಂಗೆ ಮಾಡಿರಬೇಕು ಬುಡ್ಯ" ಎಂದ ಕಾಳಮಾವ.

"ಸರಿಕಣ ಮಾವ ನೀನೇ ಹೇಳು. ಹಡತಿಗೆ ಉಸಾರಿಲ್ದೆಯಿದ್ರು ಕರದೇಟಿಗೆ ಮನಿಕಬೇಕು ಅಂತ ಕಾನೂನು ಮಾಡೋರು ಗಂಡ ತಲೆನವ್ವ ಪಟ್ಟೆನವ್ವ ಅಂತ ನರಳಿದಾಗ ಹೆಡತಿ ಕರಿಬೇಕು. ಕರದಾಗ ಅವುನು ಬರಬೇಕು ಅಂತ ಕಾನೂನು ಮಾಡಕ್ಯೇನಾಗಿತ್ತು?" ಎಂದಳು ಜುಮ್ಮಿ.

"ನಿನ್ನ ತರ್ಕವ ಮುಲ್ಲಾಗಳತ್ರ ಮಾಡು. ನಮಿಗೆ ಯಾರೋ ಹೇಳಿದ್ನ ನಾವು ಹೇಳಿದೊ" ಎಂದು ಉಗ್ರಿ ಸಾಬರ ಕಾನೂನು ಗೋಜಲಿಂದ ಬಿಡಿಸಿಕೊಳ್ಳುವವನಂತೆ ಮಾತನಾಡಿದ.

"ಅದೇನು ಸಾಬರ ಸುದ್ದಿ ಮಾತಾಡ್ತಿ ಬುಡ್ಯ ಅವು ಹೋದೊ ಹಾಳಾಗಿ" ಎಂದು ಸೀರ ರೋಸಿದವನಂತೆ ಹೇಳುವಾಗ ಕಾಣಿಸಿಕೊಂಡ ವಾಟಿಸ್ಸೆ,

"ಉಳುವಾ ಯೋಗಿಯ ನೋಡಲ್ಲಿ, ರಾಜ್ಯಗಳುಳಿಯಲಿ ರಾಜ್ಯಗಳಲಿಯಲಿ, ಬಿತ್ತುಳುವುದನವ ಬಿಡುವುದೆ ಇಲ್ಲ. ಉಳುವಾ ಯೋಗಿಯ ನೋಡಲ್ಲಿ, ಕೇಳಿಸಿಗಂಡ ದ್ವಡಪ್ಪ ಹಾಡ?" ಎಂದ.



"ಚನಾಗ್ಯದೆ."

"ಅದ್ಕೆ ಮತ್ತೆ ಕುವೆಂಪು ಬರದಿರೋ ಈ ಹಾಡ ರೈತ ಬ್ಯಳದ ಅನ್ನ ತಿನ್ನೊರ್ಯಲ್ಲ ಹಾಡಿ ಅಂತ ಯಡ್ಯೂರಪ್ಪ ಕಾನೂನು ಮಾಡಿ ಚೀಣಾ ದೇಶಕ್ಕೆ ಹೋದನಂತೆ."

"ಚೀಣಾ ದೇಸಕ್ಕೆ ಯಾಕೋದುನ್ಲ?" ಎಂದ ಸೀರ.

"ಅಲ್ಲಿ ಟೆಂಡರ್ ಇತ್ತಂತೆ ಚಿಗಪ್ಪ, ಗಣಿ ರೆಡ್ಡಿಗಳ್ಯಲ್ಲ ಕಬ್ಬಣದ ಅಧರ ಮಾರ್ಕಂಡವುರಲ್ಲಾ, ಅದ ಚೀಣಾ ದೇಶದೋರು ಅಲ್ಲಿ ಗುಡ್ಡೆ ಹಾಕಿ ಹರಾಜು ಮಾಡ್ತರಂತೆ. ಅದ ತಂದು ಭದ್ರಾವತಿ ಕಬ್ಬಣದ ಕಾರ್ಖಾನೆಯ ಮದ್ದಿದ್ದಂಗೆ ಮಾಡನ ಅಂತ ಟೆಂಡರ್ ಕೂಗಕ್ಕೆ ಹೋಗಿದ್ದನಂತೆ" ಎಂದ ವಾಟಿಸ್ಸೆ.

"ಭದ್ರಾವತಿ ಕಬ್ಬಣದ ಕಾರಕಾನೆ ಸ್ವಡಿತಾಯಿಂದೇನ್ಲ?" ಎಂದ ಸೀರ.

"ಸ್ವಡಿತಾ ಅದೆ ಚಿಗಪ್ಪ, ವಿಶ್ವೇಶ್ವರಯ್ಯನ ಕಾಲದಲ್ಲಿ ಮುಪ್ಪತ್ತೆರಡು ವಿಭಾಗ ಇದ್ದವಂತೆ. ರೈಲು ಕಂಬಿ, ಲೈಟ್ ಕಂಬದಿಂದ ಹಿಡದು ಕುಡ್ಳು, ಕತ್ತರಿ, ಲೋಟನೂ ಮಾಡೋರಂತೆ. ಕಬ್ಬಣದ ಅಧುರು ಸಾಕಾಗದೆ ಅವ್ನಲ್ಲ ಮುಚ್ಚಿದವಂತೆ. ಈಗ ಎಡೂರ ಚೀಣಾದಿಂದ ಅದುರ ತಂದು ಅವುನ್ಯಲ್ಲ ಓಪನ್ ಮಾಡನ ಅಂತ ಹೋಗಿದ್ದನಂತೆ."

"ಇಲ್ಲೆ ಅದುರಿತ್ತಲ್ಲ ತಗಳಕ್ಯೇನೂ?"

"ಅದಂಗಾಗದಿಲ್ಲ, ಪರೆಗ್ ಜಾಂಪಲ್ ಮಂಡ್ಯದಲ್ಲಿ ಸುಗರ್ ತಯಾರಾಯ್ತಾ ಅದೆ. ಆದ್ರೆ ನೀನು ತಿಂತಾಯಿರೊ ಸುಗರು ಎಲ್ಲಿದು ಗೊತ್ತ?"

"ಸೊಸೈಟಿದು ಕಂಡ್ಯ."

"ಸೊಸೈಟಿಗೆ ಎಲ್ಲಿಂದ ಬಂದದೆ ಗೊತ್ತಾ ಚಿಗಪ್ಪ? ಬೆಳಗಾಯಿಂದ ಬಂದದೆ. ಇದು ಈ ಲೋಕದ ವ್ಯವಹಾರ. ಆ ಬಗ್ಗೆ ಯಕನಾಮಿಸ್ಟ್ ಉಗ್ರಿ ಕೇಳು ಹೇಳ್ತನೆ."

"ಅವುನಾಮ್ಯಾಲೇಳ್ತನೆ, ಎಡೂರ ಚೀಣಾ ದೇಸಕೆ ಯಾಕೋದ ಅಂತ ಸರಿಯಾಗೇಳ್ಯ."

"ನೋಡು ಚಿಗಪ್ಪ ಹಂದಿಜ್ವರ ಹಕನಾಯಿಸಿಗಂಡದೆ. ಅದ ಪತ್ತೆಹಚ್ಚಬೇಕು ಅಂತ ತಂದಿರೊ ಮಿಷಿನ್ ಹೆಸರ ರಾಮುಲುಗೆ ಹೇಳಕ್ಕೇ ಬರದಿಲವಂತೆ. ಯರಡ್ನೆದೇಸಪ್ಪ ಅಂದ್ರೆ ಅತ್ತು ಕರದು ಅಟ್ಟಕ್ಯಕ್ಕೆ ಹೇಳಿಸಿಗಂಡ್ರು ಅಂತ ಸೋಮಣ್ಣನ ರಾಜೀನಾಮೆ ತಗಂಡ ಮ್ಯಾಲೆ ಅವುನ ಮಕ ನೋಡಕ್ಯಾಗಲಿಲವಂತೆ. ಇನ್ನ ಪೊರ್‌ಟ್ಟಂಟಿ ಸುಧಾಕರ "ನಾನು ರಾಜೀನಾಮೆ ಕೊಡದಿಲ್ಲ. ನಾನೇನು ಯಾರೂ ಮಾಡದ ಕ್ಯಲಸ ಮಾಡಿಲ್ಲ, ಅನಂತಕುಮಾರ ಹೌಸಿಂಗ್ ಬೋರ್ಡ್‌ನಲ್ಲಿ ನೂರಾರು ಕೋಟಿ ನುಂಗಿದ್ದ ಮರತಬುಟ್ರ?" ಅಂದನಂತೆ. ಇನ್ನ ಈಶ್ವರಪ್ಪನ ಇಂಧನ ಖಾತೆ ಹಿಡತಕ್ಕೆ ಸಿಗದೆ ರೈತರಿಗೇ ಕರಂಟಿಲ್ಲದಂಗೆ ಮಾಡಿದನಂತೆ. ಸರಿ ಅವುರ್ಯಲ್ಲ ನಂಜುಂಡಸ್ವಾಮಿ ಕಾಲ್ದಲಿ ಮಡಚಿ ಮಡಗಿದ್ದ ಹಸರ ಟವಲ್‌ನ್ಯಲ್ಲ ಕೊಡವಿ, ಹ್ಯಗಲಿಗಾಯ್ಕಂಡು ಬೆಂಗಳೂರಿಗೆ ಹ್ವಂಟರಂತೆ. ಇದನ್ಯಲ್ಲ ಹೆದರಸಕ್ಯಾಗದ ಎಡೂರಪ್ಪ ಶೋಭಾ ಕರಂದ್ಲಾಜೆ ಕರದು ಮಸಿದಿನ ಚೀಣಾದೇಸಕೋಗಿ ಮಜ ಮಾಡಿಕಂಡು ಬರನ ಅಂದನಂತೆ. ಅವುಳು ಮೈಸೂರು ದಸರನು ಬುಟ್ಟು ಎಡೂರಪ್ಪ ಜ್ವತೆ ವಂಟೋದ್ಲಂತೆ. ದಿಸೀಸ್ ಪ್ಯಾಕ್ಟ್!"


"ತಗ್ಗಳಪ್ಪ ಇದು ಆಡಳತ ಅಂದ್ರೆ."

"ಇವುರಿಂಗಾಯ್ತಾಯಿರದರಿಂದ್ಲೆ ಚಿಗಪ್ಪ ದ್ಯಾವೇಗೌಡ ಜೆಡಿಎಸ್ಸ ತಿರಗ ಪವರ್‌ಗೆ ತಂದು ಕಣ್ಣುಮುಚ್ಚತಿನಿ ಅಂತ ತಿರುಪ್ತಿ ಯಾತ್ರೆ ಮಾಡ್ತ ಅವುನೆ. ಅಂತೂ ಅವುನು ಸುಮ್ಮನೆ ಕಣ್ಣುಮುಚ್ಚದಿಲ್ಲ ಬುಡು."

"!"

■


PERHAPS



ಶೂದ್ರನಿಗೆ ಈಚೆಗೆ ಕವಿಗೋಷ್ಠಿಗಳೆಂದರೆ ಪ್ರಾಣ. ಯಾರಾದರೂ ಆಕ್ಷೇಪಿಸಿದರೆ ಇದರ ಪೂರ್ತಿ ಹೊಣೆಯನ್ನು ನನ್ನ ಮೇಲೆ ಹಾಕುತ್ತಾನೆ. ವೀರಭದ್ರಪ್ಪನವರ ಪುಸ್ತಕದ ಬಿಡುಗಡೆ ಸಂದರ್ಭದಲ್ಲಿ ಕವಿಗಳನ್ನು ಕರೆದ, ಅವರಿಂದ ಪದ್ಯ ಓದಿಸಿದ. ಅಲ್ಲಿ ಓದಿದ ಮೂವರು ಹೆಣ್ಣುಮಕ್ಕಳೂ ಕವಿಗಳೆನ್ನಿಸಿತು; ಅಗ್ರಹಾರ ಕೃಷ್ಣಮೂರ್ತಿ ಈಚೆಗೆ ವಿಚಿತ್ರ ರೀತಿಯಲ್ಲಿ ಅರ್ಥಪೂರ್ಣವಾಗಿ ಕವನ ಬರೆಯುತ್ತಾನೆ. ಜಟ್ಟಿ ಜನಾಂಗದ, ಅಲ್ಪಸಂಖ್ಯಾತ ಕೋಮುಗಳಲ್ಲಿ ಅಲ್ಪಸಂಖ್ಯಾತ ಗುಂಪಿಗೆ ಸೇರಿದ ಈ ಕೃಷ್ಣಮೂರ್ತಿಯ ಬೆಳವಣಿಗೆ ಗಮನಿಸುವುದು ನನ್ನ ಖುಷಿಗಳಲ್ಲೊಂದು. ಆರು ವರ್ಷ ಮದ್ರಾಸ್‌ನಲ್ಲಿದ್ದ ಈತ ತಮಿಳರೊಂದಿಗೆ ಓಡಾಡಿದ. ಅವರ ಸಣ್ಣತನ, ...ರ್ಮ, ಸಂಸ್ಕೃತಿಯ ವಿವರಗಳನ್ನು ಗ್ರಹಿಸಿದ. ನಮ್ಮೆಲ್ಲರಂತೆ ಸಮಾಜವಾದಿಯಾದ ಈತ ...ಜನರೆಲ್ಲರ ಆಳದ ತಳಮಳಗಳನ್ನು, ವ್ಯಾಮೋಹಗಳನ್ನು, ಗೊತ್ತುಗುರಿಗಳನ್ನು ಪತ್ತೆಹಚ್ಚುವ

...ಧಿರಲಿ. ಅವತ್ತು ನಡೆದ ಕವಿಮೇಳದ ಬಗ್ಗೆ, ನಾನು ಈ ಕವಿಗೋಷ್ಠಿಗಳ ಬಗ್ಗೆ ತುಂಬ ... ಅನುಭವಿಸುತ್ತಾ ಕವನವಾಚನ ಕೇಳುತ್ತಿರುತ್ತೇನೆ. ನಟರಾಜ್ ಹುಳಿಯಾರ್ ಎಂಬ ಸ್ವಲ್ಪ ...ರಳಿಯ ಹುಡುಗ ಒಂದು ಕವನ ಓದಿದ; ಈತ ಬರೆದದ್ದು ಬಡತನ ಮತ್ತು ಕವಿ, ಕಲಾವಿದರ ...ಬಡತನ ಹೇಗೆ ಕವಿಗಳ, ಕಲಾವಿದರ ವಸ್ತುವಾಗಬಲ್ಲದು ಎಂಬ ಯಥಾಪ್ರಕಾರದ 'ಐಡಿಯಾ' ಈ ...ದ ವಸ್ತು, ಕವಿಗಳಿಗೆ ಬಡವರ ಗುಳಿಬಿದ್ದ ಕಣ್ಣು, ಸುಕ್ಕು, ಮುಖ, ದಾರಿದ್ರ್ಯದ ಹಿನ್ನೆಲೆ ಉಪಯುಕ್ತ ... ಎಂದು ಹೇಳುವ ಕವಿಗೆ ಸ್ವಲ್ಪವಾದರೂ ಸಿನಿಕತನದೊಂದಿಗೆ ಆ ಸಿನಿಕತನದ ಬಗ್ಗೆ ಅನುಮಾನ ...ರುವ ಜಾಣತನ ಇದ್ದಿದ್ದರೆ, ತಮಾಷೆಗೆ ವಿಷಾದ ಬೆರೆಸುವ ಅಭಿರುಚಿ ಇದ್ದಿದ್ದರೆ ಇದು ನಿಜಕ್ಕೂ ...ವಾಗುತ್ತಿತ್ತು, ಯಾಕೆಂದರೆ ಎಲಿಯಟ್ ಎಂಬ ಮಹಾಕವಿಯ ಈ ಅನುಮಾನ, ಹಿಂಜರಿಕೆ, ...rhaps ಅವನ ಕಾವ್ಯಕ್ಕೆ ಅರ್ಥ ತರುವ ನಿಲುವು. Perhaps ಎನ್ನುವುದನ್ನು 'ಬಹುಶಃ' ಎಂದು ...ಳೆದುಬಿಟ್ಟರೆ ಆಗುವುದಿಲ್ಲ... ಕವಿಗಳಿಗೆ ನಾನು ಹೇಳುವುದು ಅರ್ಥವಾದೀತು.

ಕೌ. ನಿಂಗವ್ವ



ಮೊನ್ನೆ ಒಂದು ಪುಸ್ತಕ ಬಂತು. ಧಾರವಾಡದ ಹುಡುಗನೊಬ್ಬ 'ಶ್ರೀಕೃಷ್ಣ ಪಾರಿಜಾತ' ಕುರಿತು ಮಾಡಿದ ಸಂಶೋಧನೆಯ ಪುಸ್ತಕ. ಎಲ್ಲ ಮಹಾಪ್ರಬಂಧಗಳಂತೆಯೇ ಇದೂ ಗಂಭೀರ ಪುಸ್ತಕ; **serious, start immediately** ಎನ್ನುವ ಪುಸ್ತಕ. ಇದರಲ್ಲಿ ಕೃಷ್ಣ ಪಾರಿಜಾತವನ್ನಾದರೂ ಅಚ್ಚು ಮಾಡಿದ್ದರೆ ಓದಬಹುದಿತ್ತು. ಅವರ ಬಗ್ಗೆ ಉದ್ದುದ್ದ ಲೇಖನಗಳು, ಅಡಿ ಟಿಪ್ಪಣಿಗಳು ಇವೆ. ಆದರೆ ಈ ಗಂಭೀರ, ಮೋಡ ಕವಿದ ಪುಸ್ತಕದಲ್ಲಿ ಒಂದು ವ್ಯಕ್ತಿ ತನ್ನ ಹೊಳಪಿನಿಂದ ಹಿಗ್ಗಿನ ನಮ್ಮ ಮನ ತುಂಬುತ್ತಾಳೆ. ಆಕೆ ಕೌಜಲಗಿ ನಿಂಗವ್ವ.

ಸುಮಾರು ನೂರು ವರ್ಷದ ಹಿಂದೆ ತನ್ನದೇ ನಾಟಕದ (ಇಲ್ಲಿ ಸಣ್ಣಾಟದ) ಕಂಪನಿ ಕಟ್ಟಿಕೊಂಡು ವಿಚಕ್ಷಣೆಯಿಂದ ನಡೆಸುತ್ತಿದ್ದ ನಿಂಗವ್ವ ದೊಂಬರ ಜಾತಿಯಲ್ಲಿ ಹುಟ್ಟಿದವಳು; ಆಗಿನ ಮಾಸ್ತರುಗಳಿಗೆ ದುಂಬಾಲುಬಿದ್ದು ಅಭಿನಯ, ನಿರ್ದೇಶನ ಕಲಿತು ಶ್ರೀಕೃಷ್ಣ ಪಾರಿಜಾತದಲ್ಲಿ ಸತ್ಯಭಾಮಾ ಪಾರ್ಟ್ ಹಾಕಿ ಲಕ್ಷಾಂತರ ಜನರ ಹೃದಯ ಗೆದ್ದವಳು. ಆಕೆ ನಾಟಕದಲ್ಲಿ ಪಾರ್ಟ್ ಹಾಕಿದ ಮೊದಲನೆ ಹೆಣ್ಣುಮಗಳೆಂಬ ಕಾರಣಕ್ಕೆ, ಚೆಂದವಾಗಿ ನಟಿಸುತ್ತಿದ್ದಳು ಎಂಬ ಕಾರಣಕ್ಕೆ, ಕಂಪನಿಯ ಯಜಮಾನಿ ಎಂಬ ಕಾರಣಕ್ಕೆ ತುಂಬ ಪ್ರಸಿದ್ಧಳಾಗಿದ್ದಳು. ನಾಟಕದಲ್ಲಿ ಪಾರ್ಟ್ ಹಾಕಿದಂತೆಯೇ ಕುದುರೆಯ ಮೇಲೆ ಪ್ರಯಾಣ ಮಾಡುತ್ತಿದ್ದ ಮೊದಲನೆ ಹೆಂಗಸಿರಬೇಕು. ಈಕೆ ಪುರಾಣದ ವ್ಯಕ್ತಿಯಂತೆ ಖ್ಯಾತಿ ಪಡೆದಿದ್ದಳು.

ಬಿಜಾಪುರ, ಧಾರವಾಡದ ಕಡೆ ಈಗಲೂ ನಿಂಗವ್ವನ ಕತೆ ಹಬ್ಬಿವೆ. ಈಕೆಗೆ ಅಕ್ಷರ ಜ್ಞಾನವಿತ್ತು ಅನ್ನುವವರೂ, ನಿರಕ್ಷರಕುಕ್ಷಿ ಅನ್ನುವವರೂ ಇದ್ದಾರೆ. ಇದು ಅಪ್ರಸ್ತುತ. ಮುಖ್ಯವೇನೆಂದರೆ ಈಕೆಯ ಜ್ಞಾಪಕಶಕ್ತಿ, ಜಾಣತನ ಮತ್ತು ಅಭಿನಯ ಪ್ರತಿಭೆ. ಈ ನಿಂಗವ್ವ ಇನ್ನೊಂದು ಕಾರಣಕ್ಕೆ ಪ್ರಸಿದ್ಧಳು. ಈಕೆ ಕುಡಿಯುತ್ತಿದ್ದಳು. ಶ್ರೀಕೃಷ್ಣನ ಪಾರ್ಟ್ ಹಾಕುತ್ತಿದ್ದವನು "ಸತ್ಯಭಾಮೆ ಕುಡಿದು ಪಾರ್ಟ್ ಮಾಡಿದರೆ ಚಲೋ ಇರಲ್ಲ ಕುಡಿಬ್ಯಾಡ" ಅಂದರೂ ಬಿಡಲಿಲ್ಲ. ಈ ಕಾರಣಕ್ಕಾಗಿಯೇ ಕೃಷ್ಣನ ಪಾತ್ರ ಮಾಡುತ್ತಿದ್ದವ ತನ್ನ ಮೂವರು ಸಹನಟರೊಂದಿಗೆ ಬೇರೆ ಕಂಪನಿ ಸೇರಿದ. ಒಮ್ಮೆ ನಿಂಗವ್ವನನ್ನು ಬಿಟ್ಟು ಶ್ರೀಕೃಷ್ಣ ಪಾರಿಜಾತ ಪ್ರದರ್ಶಿಸಿದಾಗ ಈ ಸುದ್ದಿ ಕೇಳಿದ ನಿಂಗವ್ವ ಅಲ್ಲಿಗೆ ಹೋಗಿ ಸತ್ಯಭಾಮೆ ಹಾಕಿದ್ದ ಗಂಡಸನ್ನು ಅಣಕಿಸುತ್ತಾ ನಿಂತಳು!

ಸಾಂಸ್ಕೃತಿಕವಾಗಿ ಎಷ್ಟು ಈ ಶ್ರೀಮಂತ ಈ ಧಾರವಾಡ, ಬಿಜಾಪುರ, ಬೆಳಗಾವಿ ಜಿಲ್ಲೆಗಳು! ಆದರೆ ಈಗ ಎಷ್ಟು ದಿವಾಳಿ! ಬಿಜಾಪುರದ ಅಶೋಕ್ ಬಾದರದಿನ್ನಿ ಸಿನಿಮಾಗಳಲ್ಲಿ ಅಡಿಗೆಯವನ ಪಾತ್ರ ಮಾಡುತ್ತಿರುವುದಕ್ಕೂ, ಈ ನಿಂಗವ್ವ ಕುದುರೆ ಮೇಲೆ ಹೋಗಿ ಸತ್ಯಭಾಮೆಯಾಗಿ ಎಲ್ಲರನ್ನೂ ಖುಷಿಯಿಂದ ಕುಣಿಸುತ್ತಿದ್ದುದಕ್ಕೂ ಎಷ್ಟು ವ್ಯತ್ಯಾಸ!

—ನವೆಂಬರ್ 24,1991

ಶಾಸಕದ್ವಯರಿಗೆ ಬೈಗುಳ ಶ್ರೀಪ್ರಶಸ್ತಿ!

ಬೈಗುಳಗಳಿಗೂ ಜಾತಿ ಇದೆಯ?

ಇದೆ ಅನ್ನುತ್ತಾರೆ ಪಾ.ವೆಂ. ಆಚಾರ್ಯ.

ಅದು ಹೇಗೆ?

ಅವರ 'ಪದಾರ್ಥ ಚಿಂತಾಮಣಿ' ಪುಸ್ತಕ ನೋಡಿ.

'ಬೋಳೀಮಗ', 'ಮುಂಡೇಮಗ' ಸಾಮಾನ್ಯ ಬೈಗುಳ ನಿಜ. ಆದರೆ ಅವು ಯಾವ ಜಾತಿ?

ವಿಧವೆಯರ ಮಂಡೆ ಬೋಳಿಸಿ ಅವಳನ್ನು ಮುಂಡೆ ಅಥವಾ ಬೋಲಿ ಮಾಡಿಸುವುದು ಬ್ರಾಹ್ಮಣರು ತಾನೆ. ಇತರ ಜಾತಿ, ಧರ್ಮಗಳಲ್ಲಿ ಈ ಅನಿಷ್ಟ ಪದ್ಧತಿ ಇಲ್ಲ, ಆದುದರಿಂದ ಇದು ಬ್ರಾಹ್ಮಣ ಬೈಗುಳ!

ಅಣಕ

▸ ಎಚ್.ಎಲ್. ಕೇಶವಮೂರ್ತಿ

ಇದರಲ್ಲಿ ಇನ್ನೂ ಒಂದು ವಿಶಿಷ್ಟತೆ ಇದೆ. ಇವು ಒಂದು ರೀತೀಲಿ **three in one** ಬೈಗುಳ. ಬೋಳೀ ಎಂದರೆ ತಾಯಿಯನ್ನು ವಿಧವೆ ಎಂದು ಜರಿದಂತಾಯಿತು. ಬೋಳೀಮಗ ಎಂದಾಗ ಅವಳು ಗಂಡ ತೀರಿಕೊಂಡ ನಂತರ ಗರ್ಭ ಧರಿಸಿದವಳು ಎಂದು ನಿಂದಿಸಿದಂತಾಯಿತು. ಮಗನನ್ನು ಜಾರಪುತ್ರ ಎಂದು ಹಳಿದಂತಾಯಿತು!


ಇದೆಲ್ಲ ಯಾಕೆ ನೆನಪಿಗೆ ಬಂತು ಅಂದರೆ ಗೌರವಾನ್ವಿತ ವಿಧಾನಸಭಾ ಸದಸ್ಯರಿದ್ದಾರಲ್ಲ.... ಅಲ್ಲ ಅಲ್ಲ, ವಿಧಾನಸಭೆಯ ಗೌರವಾನ್ವಿತ ಸದಸ್ಯರಿದ್ದಾರಲ್ಲ... ಅದೇ ನರ್ಸ್ ರೇಣುಕ ಮತ್ತು ಎಸ್.ಆರ್. ವಿಶ್ವನಾಥ್ ಅವರು ವಿಧಾನಸೌಧದ ಆವರಣದಲ್ಲಿ ಯದ್ವಾತದ್ವಾ ಕಚ್ಚಾಡಿದರಂತೆ. ಏನು ವಿಷಯ ಅಂದರೆ ರೇಣುಕಾಚಾರ್ಯರನ್ನು ಪಕ್ಷದಿಂದ ಉಚ್ಚಾಟಿಸಿ ಅಂತ ಒಂದೇಳೆಂಟು ಜನ ಸದಸ್ಯರು ರಾಜ್ಯದ ಅಧ್ಯಕ್ಷರಿಗೆ ಮನವಿ ಪತ್ರ ಸಲ್ಲಿಸಿದ್ದರಂತೆ. ಅದರಲ್ಲಿ ಈ ವಿಶ್ವನಾಥ್ ಅನ್ನೋರೂ ಇದ್ರಂತೆ. ಇದು ತಿಳೀತಿದ್ದಂಗೆ ವಿಶ್ವನಾಥ್‌ಗೆ ರೇಣುಕಾ ಧಮಕಿ ಹಾಕಿದರಂತೆ. ಅದಕ್ಕೆ ಅವರು 'ನೀನು ಬೆಂಗಳೂರಿಗೆ ಬಾ ನೋಡ್ಕಳ್ತೀನಿ' ಅಂದಿದ್ರಂತೆ. ಬೆಂಗಳೂರು ಅಂದರೆ ಒಂದು ರೀತಿ ರೌಡಿಗಳ ರಾಜ್ಯ ಅಲ್ಲವಾ. ಇವರೂ ಅಂತಹವರಿಗೆ ಲೀಡ್ರೋ ಏನೋ ಗೊತ್ತಿಲ್ಲ, ಅಂತೂ ಹಂಗಂದ್ರಂತೆ.... ಬೆಂಗಳೂರು ನಮ್ಮಪ್ಪನ ಮನೆ ಆಸ್ತಿ ಅನ್ನೋ ರೀತೀಲಿ. ಅದಕ್ಕೆ ರೇಣುಕ ಪ್ರತಿಕ್ರಿಯೆ ತಿಳಿದು ಬಂದಿಲ್ಲ.

ಇದೆಲ್ಲ ದೂರವಾಣಿ ಜಗಳ ಅನ್ನಿ. ಹೋಗಿಹೋಗಿ ವಿಧಾನಸೌಧನೇ ರಣರಂಗಕ್ಕೆ ಆಯ್ಕೆ ಮಾಡಿಕೊಂಡರು ಅಂದರೆ ಇಷ್ಟೆಲ್ಲ ದೂರವಾಣಿ ರಂಪ ಆದ ಮೇಲೆ ಅವರ ಮುಖಾಮುಖಿಯಾದದ್ದು ಅಲ್ಲೇ ಅಂತೆ. ಒಬ್ಬರನ್ನು ಒಬ್ಬರು ನೋಡಿದ ತಕ್ಷಣ ಅವರ ಮೈಗೆ ಹೆಂಗೆಂಗೋ ಆಯ್ತಂತೆ. ವಿಧಾನಸೌಧವಾದ ವಿಧಾನಸೌಧವೇ ಕಳಚಿ ಬೀಳೋ ಹಾಗೆ ಕಿರುಚಾಡಿದರಂತೆ. ಇವೆಲ್ಲ ಪತ್ರಿಕೆಗಳಲ್ಲಿ ಬಂದಿವೆ. ಇವರು ಯಾವಾಗಲೋ ಪುರುಷನಾದವನು ಪ್ರಸಿದ್ಧಿಗೆ ಬರಬೇಕು. ಒಳ್ಳೆಯ ಮಾರ್ಗದಿಂದ ಬರಲಾಗದಿದ್ದರೆ ವಿದ್ವಾಂಸರ ಸಭೆಯಲ್ಲಿ ಕತ್ತೆಯಂತೆ ಕಿರುಚಾದರೂ ಪ್ರಸಿದ್ಧನಾಗಬೇಕು ಅನ್ನೋ ಸುಭಾಷಿತ ಓದಿರಬೇಕು. ನರ್ಸ್ ರೇಣುಕ ಬಿಡಿ. ಇಂತಹವುಗಳಿಗೆ ಹೇಳಿ ಮಾಡಿಸಿದವರು. ಯಾವ ಯಾವ್ದೋ ಕಾರಣಕ್ಕೆ ಪತ್ರಿಕೆಗಳಲ್ಲಿ ಸುದ್ದಿಯಾಗ್ತಾನೆ ಇರ್ತಾರೆ. ವಿಶ್ವನಾಥ್ ಇದಾರಲ್ಲ, ಸರಿಯಾಗಿ ನಾಲಿಗೆ ಹೊರಳದ ಜನ 'ವಿಸ್ವನಾತ' ಅಂತಾರೆ. ಹಂಗಾಗೇ ಪ್ರಸಿದ್ಧಿಗೆ ಬರಬೇಕು ಅನ್ನಿಸಿರಬೇಕು. ವಿಧಾನಸೌಧದಲ್ಲಿ ಜಗಳ ಆಡಿಯಾದರೂ ಪತ್ರಿಕೆಗಳಲ್ಲಿ ಮಿಂಚಬೇಕು ಅಂತಾನೋ ಏನೋ... ಒಟ್ಟಿನಲ್ಲಿ ಇಬ್ಬರೂ ಬೈಗುಳಗಳ ಸುರಿಮಳೇನೆ ಹರಿಸಿದರಂತೆ. ಎಂತಹ ವೈನಾದ ಬೈಗುಳ ಅಂತೀರಿ. ಅಂತಹವುಗಳನ್ನು ಅವರಿವರಲ್ಲಿರಲಿ 'ಗಟಾಣಿ ಹೆಂಗ್ಸು' ಅನ್ನಿಸಿಕೊಂಡವರ ಬಾಯಲ್ಲೂ ಕೇಳಿರಲಿಕ್ಕಿಲ್ಲ. ಇಂತಹ ಅಪರೂಪ ಪ್ರದರ್ಶನ ನೋಡಲು ಪ್ರೇಕ್ಷಕರ ದಂಡೇ ಸೇರಿತ್ತಂತೆ.

ಇವೆಲ್ಲ ಪತ್ರಿಕೆಗಳಲ್ಲಿ ರೋಚಕವಾಗಿ ವರದಿಯಾಗಿದೆಯಾದರೂ ಅವರು ಬಳಸಿದ ಪದಪುಂಜಗಳನ್ನು ಯಾಕೋ ಏನೋ ಯಾವ ಪತ್ರಿಕೆಯೂ ವರದಿ ಮಾಡಿದಂತಿಲ್ಲ. ಹಾಗೆ ಮಾಡಿದ್ದರೆ ಯಾರ ಬಾಯಿಂದ ಯಾವ ಜಾತಿಯ ಆಣಿಮುತ್ತುಗಳು ಉದುರಿದವು ಎಂಬುದು ತಿಳಿಯುತ್ತಿತ್ತು. ಒಂದೇ ಬೈಗುಳದಲ್ಲಿ ಹಲವಾರು ಬೈಗುಳಗಳನ್ನು ಸೇರಿಸಿದ್ದರೆ 'ಬೈಗುಳ ಶ್ರೀ' ಪ್ರಶಸ್ತಿಗೆ ಅರ್ಹವಾಗುತ್ತಿದ್ದರೆ ಎಂಬುದರ ಅರಿವಾಗುತ್ತಿತ್ತು. ಜೊತೆಗೆ ಬೈಗುಳಗಳ ಕಣಜಕ್ಕೆ ಗೌರವಾನ್ವಿತರ ಕೊಡುಗೆಯೂ ಸೇರಿ ಅದು ಇನ್ನು ಶ್ರೀಮಂತ ಆಗುತ್ತಿತ್ತು. ಇರಲಿ. ಸದ್ಯಕ್ಕೆ ಇವನ್ನ 'ಹೊಲಸು ಜಾತಿ'ಯವು ಎಂದೇ ಇಟ್ಟುಕೊಳ್ಳೋಣವಂತೆ!

ಸ್ವಲ್ಪ ನಿಲ್ಲಿ, ಆತುರಬೇಡಿ.

ಇಂತಹ ತೀರ್ಮಾನ ತೆಗೆದುಕೊಳ್ಳುವಲ್ಲೇ ನಾವು ಎಡವುವುದು ಅನ್ನಿಸುತ್ತೆ. ಪಾಪ ಅವರು ಹಸುವಿನಂತಹ ಪ್ರಾಣಿಗಳಂತೆ ಕಣ್ರಿ. ಅವರು ಜಗಳಾನೆ ಆಡಿಲ್ಲವಂತೆ. ಅದೇ ಇಲ್ಲ ಅಂದಮೇಲೆ ಬೈಗುಳ ಎಲ್ಲಿಂದ ಬರುತ್ತೆ ಹೇಳಿ. ದೇವರ ಮೇಲೆ ಆಣೆ ಇಟ್ಟು ಹೇಳ್ತಾರೆ ಈ ಮಾತನ್ನ. ಅವರ ಜಗಳ ನೋಡೋಕೆ ಜನ ಸೇರಿದ್ರಂತಲ್ಲಾ ಅಂದ್ರಾ..... ಅವರು ಹಳ್ಳಿಯೋರು ನೋಡಿ, ಗಂಟಲು ಜೋರಂತೆ. ಹೆಗಲ ಮೇಲೆ ಕೈ ಹಾಕಿಕೊಂಡು ಕುಶಾಲು ಮಾತಾಡ್ತಿದ್ರೂ ಪಟ್ಟಣದ ಜನ ಇದು ಜಗಳ ಅಂತ ನೋಡ್ತಿದ್ರಂತೆ. ಇದನ್ನು ಗೌರವಾನ್ವಿತ ಸದಸ್ಯರಿಬ್ಬರೂ ಹೇಳಿದ್ದಾರೆ. ಜನಾನೇನು ಹಾಲು ಕುಡಿಯೋ ಮಕ್ಕಳು ಅಂದುಕೊಂಡ್ರಾ ಇಂತಹ ಮಾತನ್ನೆಲ್ಲ ನಂಬೋಕೆ ಅಂದ್ರೆ ನಾವೇನು



ಮಾಡೋಕಾಗಲ್ಲ. ಸತ್ಯವಂತರಿಗಿದು ಕಾಲ್ಲವಲ್ಲಾ....?

'ಇದೇನ್ಸಾರ್ ನಿಮ್ಮ ಪಕ್ಷದ ಶಾಸಕರ ಹಾದಿರಂಪ ಬೀದಿರಂಪ' ಅಂತ ಯಡ್ಯೂರಪ್ಪನವರನ್ನ ಕೇಳಿದ್ರೆ 'ಬಿಸಿರಕ್ತ ಅದರಲ್ಲೇನೂ ಇಲ್ಲ, ಕೋಳಿ ಜಗಳ ಅಷ್ಟೆ' ಅಂತಾರೆ. ಇದು ನಿರೀಕ್ಷಿಸಿದ ಉತ್ತರವೇ ಅನ್ನಿ. ಯಾಕೇಂದರೆ ರಾಹುಲ್ ಮಹಾಜನ್ ಎಂಬ ಪಡ್ಡೆಹೈದ ಅದೇ ಪ್ರಮೋದ್ ಮಹಾಜನ್ ಮಗ ದೆಹಲಿಯಲ್ಲಿದ್ದಾಗ ಮಾದಕ ವಸ್ತು ಸೇವಿಸಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಗ...... ಅವನ್ನ ಆಸ್ಪತ್ರೆಗೆ ಸೇರಿಸಿದ್ದರಲ್ಲಾ..... ಆಗ ವಾಜಪೇಯಿ ಹೇಳಿದ್ದನ್ನು ನೆನಪಿಸಿಕೊಳ್ಳಿ. ಅವರೇನಂದಿದ್ರು..... 'ಯೌವನಕ್ಕೆ ಇವೆಲ್ಲ ಸಹಜ' ಅಂತ ತಾನೆ. ಅವರ ಶಿಷ್ಯ ಯ... ಯಡ್ಡಿ ಶಿಷ್ಯರು ಇವರು. ಕಂತೆಗೆ ತಕ್ಕ ಬೊಂತೆ!

ಅಧಿಕಾರಕ್ಕೆ ಬಂದ್ರೂ ಮುರುಕಲು ಮನೇಯೆ?

'ಪ್ರತಿ ಮಂತ್ರಿಯೂ ಇಪ್ಪತ್ತೈದು ಲಕ್ಷ ಕೊಡ್ಬೇ... ಅಂತ ಮುಖ್ಯಮಂತ್ರಿಗಳು ಅಂದ್ರು. ಅವರ ಮಾ... ಅಂದರೆ ಆಜ್ಞೆ ಅಂತ ಬೇರೆ ಹೇಳಬೇಕಾಗಿಲ್ಲ. ಅದನ್ನೇನು ಅವರ ಮನೆಗೆ ಹೊತ್ತುಕೊಂಡು ಹೋಗಲು ಕೇಳಿರಲಿಲ್ಲ. ಅಧಿಕಾರಕ್ಕೆ ಬಂದ್ರೂ ಮುರುಕು ಮನೇಲೇ ಇದ್ದೀವಲ್ಲ, ಪಕ್ಷಕ್ಕೆ ಅಂತ ಒಂದು ಕಟ್ಟಡ ಇಲ್ವಲ್ಲ ಅನ್ನೋ ಸಂಕಟ ಕಾಡ್ತು. ಕಟ್ಟಿಸೋದು ಕಟ್ಟಿಸ್ತೀವಿ ಸರಿಯಾದ್ಕೆ ಕಟ್ಟಿಸೋಣ ಅಂದುಕೊಂಡರು. ಮಂತ್ರಿಗಳು ಅಂತ ಆಗೋದು ಸನ್ಯಾಸಿ ತರ ಜೀವಿಸೋಕಲ್ಲ, ಒಂದೆರಡು ತಲೆಮಾರಿಗಾದರೂ ಆಗುವಷ್ಟು ಆಸ್ತಿ ಸಂಪಾದನೆ ಮಾಡೋದು ಪ್ರತಿಯೊಬ್ಬನ ಗುರಿ ಅನ್ನೋದು ತಿಳಿದಿರೋವೇಯ. ಅದಕ್ಕೇ ಹಿಂಗಂದ್ರು.

ಅದು ಜನರಲ್ಲಿ ವಿಚಿತ್ರ ಸಂವೇದನೆಗಳನ್ನುಂಟುಮಾಡಿತು... ಪಕ್ಷೇತರ ಮಂತ್ರಿಗಳಿಗೆ ಇವರ ತೆವ್ಲಿಗೆ ನಾವ್ಯಾಕೆ ಹಣ ಸುರಿಬೇಕು ಅನ್ನಿಸಿತಂತೆ; ವಲಸೆ... ಮಂತ್ರಿಗಳಿಗೆ ಯಾವತ್ತು ಯಾ... ಪಾರ್ಟೀಲಿರ್ತೀವೋ ಗೊತ್ತಿಲ್ಲ ನಾವ್ಯಾಕೆ ಕೊಡಬೇಕು ಅಂತ ಗುಸುಗುಸು ಮಾಡಿದ್ರಂತೆ. ಮೂಲ ಪಕ್ಷದವರಿಗೆ ತಾವು ತಿಂದ ಹಣಕ್ಕೆ ಇವ್ರೂ ಬಾಯಿ ಹಾಕ್ತಾವಲ್ಲ ಅಂತ ಮನಸ್ಸಿಗೆ ಬಲೇ ನೋವಾಯಿತಂತೆ; ಅಧಿಕಾರಿಗಳು 'ವರ್ಗ ತೆರಿಗೆ,' 'ಹುಟ್ಟುಹಬ್ಬ ತೆರಿಗೆ' ಜೊತೆಗೆ 'ಕಟ್ಟಡ ತೆರಿಗೆ' ಬೇರೆ ಸೇರಿಕೊಳ್ತಲ್ಲ ಅಂತ ತಲೆ ಮೇ... ಕೈ ಹೊತ್ತುಕೊಂಡು ಕುಳಿತಿದ್ದಾದರಂತೆ.

ಜನಾಭಿಪ್ರಾಯ ಅನ್ನೋದು ಯಾಕೋ ಇದರ ವಿರುದ್ಧ ಇತ್ತು. 'ಮಂತ್ರಿ ಏನು ಅವರ ಅಪ್ಪನ ಮನೆಯಿಂದ ತಂದು ಕೊಡ್ತಾನ? ಭ್ರಷ್ಟಾಚಾರಕ್ಕೆ ಮುಖ್ಯಮಂತ್ರೀನೆ ನಾಂದಿ ಹಾಡಿದ ಹಾಗಾಯ್ತು' ಅಂತೆಲ್ಲ ಕೂಗಾಡ ಹತ್ತಿದ್ದು ಯಡ್ಡಿ ಕಿವಿಗೆ ಬತ್ತು. ಅಯ್ಯೋ ಪೆದ್ದುಪೆದ್ದಾಗಿ ಗುಟ್ಟನಲ್ಲಿ ಹೇಳೋ ಮಾತ ಬಹಿರಂಗಪಡಿಸಿದೆನಲ್ಲ ಅಂತ ಚಡಪಡಿಸಿದರಂತೆ. 'ಮಂತ್ರಿಗಳು ಅಂತ ಹೇಳಿಲ್ಲ' ಅಂತ ಮಾಮೂಲಿ ರಾಜಕಾರಣಿ ವರಸೆ ತೆಗೆದರು 'ಪಕ್ಷದ ಕಾರ್ಯಕರ್ತರು ದೇಣಿಗೆ ನೀಡ್ತಾರೆ' ಅಂ... ತಿಪ್ಪೆ ಸಾರಿಸಿದರಂತೆ. ಈಗ ಕಾರ್ಯಕರ್ತರಿಗೆ ಬ... ಆನಂದ ಆಗಿದೆಯಂತೆ- ಕಟ್ಟಡ ದೇಣಿಗೆ ಹೆಸರಿನ... ಹಣ ದೋಚಬಹುದಲ್ಲಾ ಅಂತ.....

ಮುಂಡರಗಿ: ನೀರಿಲ್ಲದೂರಿಗೆ ಬರಲೊಲ್ಲರು ನೀರೆಯರು....

ಈ ವಾರ ಗೌರಿಯವರು 'ಕಂಡಹಾಗೆ'ಯಲ್ಲಿ ಬರೆದ 'ಮದುವೆಗೆ 'ರಸ್ತೆ' ಯಾವುದಯ್ಯಾ?' ಓದಲಾರಂಭಿಸಿದ ಕೂಡಲೇ ಥಟ್ಟನೆ ಕಣ್ಮುಂದೆ ಬಂದಿದ್ದು ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ನತದೃಷ್ಟ ಹಳ್ಳಿಗಳು.



ಜೊತೆಯಲ್ಲೇ ನೆನಪಿಗೆ ಬಂದಿದ್ದು ಯುವಕವಿ ಮುಂಡರಗಿಯ ವೀರಣ್ಣ ಮಡಿವಾಳರ. ಕಳೆದ ವರ್ಷ ದಾವಣಗೆರೆಯ ಕೋಮು ಸೌಹಾರ್ದ ಸಮಾವೇಶಕ್ಕೆ ಬಂದಿದ್ದ ಅವರು ಒಂದು ಬಾಟಲು ನೀರನ್ನು ಗಟಗಟ ಕುಡಿದಾಗ, 'ನಮ್ಗ ಸಲ್ಪ ಉಳಿಸೋ ಮಾರಾಯ' ಎಂದು ವರದಿಗಾರ ಮಿತ್ರ ಆಲಬಾಳ ತಮಾಷೆ ಮಾಡಿದರು. 'ಇದು ಶತಶತಮಾನಗಳ ದಾಹ ಮಾರಾಯ' ಎಂದ ವೀರಣ್ಣ ತನ್ನೂರಿನ ನೀರಿನ ಸಮಸ್ಯೆಯನ್ನು ತೆರೆದಿಟ್ಟರು.

ಹೌದು, ಮುಂಡರಗಿಯ ಸುತ್ತಮುತ್ತಲಿನ ಹಳ್ಳಿಗಳಿಗೆ ಹೆಣ್ಣು ಕೊಡಲು ಯಾರೂ ಮುಂದೆ ಬರುವುದಿಲ್ಲ. ಅಲ್ಲೇ ಅಕ್ಕಪಕ್ಕದ ಊರುಗಳ ನಡುವೆಯೇ ಹೆಚ್ಚಿನ ಸಂಬಂಧಗಳು ಏರ್ಪಟ್ಟಿವೆ, ಏರ್ಪಡುತ್ತಿವೆ. ತುಂಗಭದ್ರೆ ಒಲಿದರೂ ರಾಜಕಾರಣಿಗಳು ಅವಳನ್ನು ಈ ಜನರಿಂದ ದೂರ ಮಾಡುತ್ತಲೇ ಇದ್ದಾರೆ. ರಾಮೇನಹಳ್ಳಿ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಕುಡಿಯುವ ನೀರೇ ಅಲಭ್ಯ. ಒಂದರಿಂದ ಎರಡು ಕಿ.ಮೀ. ದೂರ ನಡೆದುಹೋಗಿ ತರಬೇಕು. 'ಈ ಭಾಗದಲ್ಲಿ ಒಂದು ವರ ಐತಿ' ಅಂತಾ ಹೇಳಿದರೆ, ಗದಗಿನ ಇತರ ತಾಲ್ಲೂಕಿನ ಜನ, 'ಬೇಡವಾ ಯವ್ವ, ನನ್ಮಗಳು ನೀರ್ ಹೊತ್ ಹೊತ್ತ ಸಾಯಬೇಕ್ ಆಕ್ಕೈತಿ' ಎಂದು ಹೇಳುವುದು ಕಾಮನ್ ಆಗಿಬಿಟ್ಟಿದೆ.

ಈ ಸಮಸ್ಯೆಗಿಂತ ಭೀಕರವಾದದ್ದು ವಿರುಪಾಪುರ, ತಿಪ್ಪಾಪುರ, ಮುಷ್ಟಿಕೊಪ್ಪ, ಕಲಕೇರಿ ಗ್ರಾಮಗಳದ್ದು. ಇಲ್ಲಿ ಲಭ್ಯವಿರುವ ನೀರಿನಲ್ಲಿ ಗರಿಷ್ಠ ಪ್ರಮಾಣದಲ್ಲಿದೆ ಅಪಾಯಕಾರಿ ಫ್ಲೋರೈಡ್ ರಾಸಾಯನಿಕ. ಇದರಿಂದ ಎಲುಬುಗಳು ಸವಕಳಿಯಾಗಿ, ಅತಿಬೇಗ ಮುದುಕರಂತೆ ಬಗ್ಗಿ ನಡೆಯತೊಡಗುವಂತಾಗಿದೆ. ಈ ಹಳ್ಳಿಗಳಿಗೆ ಹೆಣ್ಣು ಕೊಡುವುದಿರಲಿ, ಈ ಹಳ್ಳಿಗಳ ಹೆಣ್ಣುಗಳನ್ನು ಮದುವೆಯಾಗಲೂ ಹಿಂದೇಟು ಹಾಕುತ್ತಾರೆ.

ಈ ಎಲ್ಲ ಹಳ್ಳಿಗಳ ಜನ ಬೇರೆ ತಾಲ್ಲೂಕುಗಳಿಗೆ ಬಂದಾಗ ಅಡಬರ್ಸಿ ನೀರು ಕುಡಿಯುವುದನ್ನು ನೋಡಿ ಜನ ತಮಾಷೆ ಮಾಡುತ್ತಾರೆ. 'ಏನ್ ಮಾಡೋದು, ದಿನಾ ಚೊಲೋ ನೀರ್ ಕುಡಿಯಾದು ನಮ್ ಹಣೆಯಾಗ ಬರದಿಲ್ರಪಾ' ಎಂದು ನಕ್ಕು, ಸುಮ್ಮನಾಗುತ್ತಾರೆ ಈ ಹಳ್ಳಿಗಳ ಜನ.


ಇಲ್ಲಿವರೆಗೆ ಶುದ್ಧ ಕುಡಿಯುವ ನೀರು ಒದಗಿಸಲು ಯಾವ ರಾಜಕಾರಣಿಯೂ ಪ್ರಾಮಾಣಿಕ ಯತ್ನ ಮಾಡಲಿಲ್ಲ. ಎಚ್.ಕೆ. ಪಾಟೀಲ್ ಜಲಸಂಪನ್ಮೂಲ ಸಚಿವರಾಗಿದ್ದಾಗ ಸಿಂಗಟಾಲೂರು ಏತ ನೀರಾವರಿ ಯೋಜನೆ ಜಾರಿಗೆ ತರಲು ಯತ್ನಿಸಿದರು. ಆದರೆ ಇಲ್ಲೂ ರಾಜಕೀಯ ನುಸುಳಿ ಅದು ನೆನೆಗುದಿಗೆ ಬತ್ತು.

ಹೊಗಳಿಕೆ ತೆಗಳಿಕೆ

ತುಂಗಭದ್ರೆ ಇದ್ದರೂ ಇಲ್ಲದಂತಾಗಿದ್ದಾಳೆ ಈ ಹಳ್ಳಿಗಳ ಜನರಿಗೆ. ಬಿಹಾರ... ಬರ್ವಾನ್ ಕಾಲಾ ಗ್ರಾಮದ... ಜನರು ತಾವೇ ರಸ್ತೆ ನಿರ್ಮಾಣಕ್ಕಿಳಿದರು. ಅವರ... ಇಲ್ಲೂ ಜನ ಮಾಡಲಾಗುವುದಿಲ್ಲ. ಏಕೆಂದರೆ ಇದು ನೀರಿನ ಸಮಸ್ಯೆ.

ಉಳಿದಿರುವ ದಾರಿಯೆಂದರೆ, ಈ ಹಳ್ಳಿಗಳ ಜನ ಒಟ್ಟಾಗಿ ನಿಂತು ರಾಜಕಾರಣಿಗಳು, ಅಧಿಕಾರಿಗಳನ್ನು ಬಹಿಷ್ಕರಿಸಬೇಕು. ಒಂದು ಸುದೀರ್ಘ ಸಂಘರ್ಷಕ್ಕೆ ತಯಾರಾಗಬೇಕು.

-ಮಲ್ಲಿ, ಗದ...



ಕತ್ತಲ ಕರಿಯ-50

ಒಬ್ಬ ನಟನಾಗಿ ದಲಿತ, ಹಿಂದುಳಿದವನ ಪಾತ್ರಗಳಲ್ಲಿ ನಟಿಸುತ್ತಾ ಸಾಂಸ್ಕೃತಿಕ ಲೋಕದಲ್ಲಿ ಶೋಷಿತರ ಪ್ರತಿನಿಧಿಯಾಗಿರುವ, ಕರಿಬಸವಯ್ಯನವರಿಗೆ ಈಗ 50ರ ಹರೆಯ. ಮೊನ್ನೆಯಷ್ಟೇ 'ರೂಪಾಂತರ'ದ ಸ್ನೇಹಿತರೆಲ್ಲ ಸೇರಿ ನೆಚ್ಚಿನ ಗೆಳೆಯನಿಗೆ 'ಕರಿಯ ವಿ ಲವ್ ಯು' ಎಂದು ಹೇಳಿ 50ರ ಅಭಿನಂದನೆ ಹೇಳಿದ್ದಾರೆ. ಈ ಹೊತ್ತಿನಲ್ಲಿ ಕರಿಬಸವಯ್ಯನವರ 'ಕತ್ತಲ' ಬದುಕಿಗೆ ಬೆಳಕು ಹಿಡಿಯೋಣ...

ಆತ ಕಲೆಯನ್ನೇ ...ವವಾಗಿಸಿಕೊಂಡಿರುವ ನಟ. ಬದುಕಿನ ಎಲ್ಲ ...ಷ್ಟನಷ್ಟಗಳ ನಡುವೆಯೂ ತನ್ನ ಮಗಳನ್ನು ...ದ್ದಿನಿಂದ ಸಾಕಿ, ಆಕೆಗೆ ಸಕಲವನ್ನೂ ನೀಡಿ ...ಸಿದ್ದ ತಂದೆ. ಕೊನೆಗೊಂದು ದಿನ ಆಕೆ ...ದೆತಾಯಿಯ ವಿರೋಧದ ನಡುವೆಯೂ ...ನು ಇಷ್ಟಪಟ್ಟವನನ್ನೇ ...ದುವೆಯಾಗುತ್ತೇನೆಂದು ಹಠ ಹಿಡಿದಾಗ ...ತನೊಂದಿಗೆ ಆಕೆಯ ಮದುವೆ ಮಾಡಿಸಿ ...ಸಿದ್ದ ತಂದೆ. ಆದರೆ ತಾನೇ ಪ್ರೀತಿಸಿ ...ದ ಗಂಡನ ಕಿರುಕುಳ ತಾಳಲಾರದೆ ಆಕೆ ...ತ್ಮಹತ್ಯೆಗೆ ಶರಣಾದಳು. ಪ್ರೀತಿಯ ಮಗಳ ...ತ್ಯ ಸಂಸ್ಕಾರಗಳನ್ನು ಮುಗಿಸಿ ಮನಗೆ ...ದಿರುಗಿದ ನಟನಾದ ತಂದೆಗೆ ಅಂದಿನ ...ಟಕದ ಪ್ರದರ್ಶನ ಕ್ಯಾನ್ಸಲ್ ಮಾಡಲಾಗುತ್ತಿದೆ' ...ಬ ಸುದ್ದಿ ತಿಳಿಯಿತು. ಉಮ್ಮಳಿಸಿ ಬರುತ್ತಿದ್ದ ...ಲ್ಲಾ ದುಃಖವನ್ನು ಪಕ್ಕಕ್ಕಿಟ್ಟು ಧುತ್ತನೆ ಎದ್ದು ...ತು ನಾಟಕದ ಪ್ರದರ್ಶನ ನೀಡಲು ಆತ ...ೊರಟ.

ತನ್ನ ಒಡಲಲ್ಲಿ ನೋವಿನ ಬೆಂಕಿ ಹೊತ್ತಿ ...ರಿಯುತ್ತಿದ್ದರೂ ಮುದ್ದಿನ ಮಗಳ ...ಗಲಿಕೆಯನ್ನೂ ಮರೆತು ವೇದಿಕೆಯೇರಿ ...ಾರಸಿಕರ ಮನಸ್ಸಿಗೆ ತಂಪೆರೆದ ನಟ ಬೇರೆ ...ಾರೂ ಅಲ್ಲ; ಆತ ಕರಿಬಸವಯ್ಯ. ಇಂಥ ...ಯನಿಗೆ ಈಗ 50ರ ಹರೆಯ. ಮೊನ್ನೆಯಷ್ಟೇ ...ೂಪಾಂತರ'ದ ಸ್ನೇಹಿತರೆಲ್ಲ ಸೇರಿ ನೆಚ್ಚಿನ ...ೆಯನಿಗೆ 'ಕರಿಯ ವಿ ಲವ್ ಯು' ಎಂದು ...ಳಿ 50ರ ಅಭಿನಂದನೆ ಹೇಳಿದ್ದಾರೆ. ಈ ...ೊತ್ತಿನಲ್ಲಿ ಕರಿಬಸವಯ್ಯನವರ 'ಕತ್ತಲ' ಬದುಕಿಗೆ ...ಳಕು ಹಿಡಿಯೋಣ...

ಕರಿಯ ಕಲಾವಿದನಾದ ಕಥೆ!


ಕರಿಬಸವಯ್ಯ ಹುಟ್ಟಿ ಬೆಳೆದದ್ದು ...ಗಳೂರಿಗೆ ಸಮೀಪವೇ ಇರುವ ...ಮಂಗಲದ ಕೊಡಿಗೇಹಳ್ಳಿ ಎಂಬ ...ಮದಲ್ಲಿ. ಓದಿದ್ದು ಸಿದ್ದಗಂಗೆಯಲ್ಲಿ. ...ಾವಿದನಾಗಬೇಕೆಂಬ ಕನಸು ಹೊತ್ತು ...ಗಳೂರು ಸೇರಿದ ಕರಿಬಸವಯ್ಯನವರ ...ದುಕಿಗೆ ಆಸರೆಯಾಗಿದ್ದು ಶೇಷಾದ್ರಿಪುರಂ ...ಲೇಜಿನ ಲ್ಯಾಬ್ ಅಸಿಸ್ಟೆಂಟ್ ಕೆಲಸ.

ಕಲೆಯ ಗೀಳು ಹತ್ತಿಸಿಕೊಂಡವರಿಗೆ ...ದೆಂಥದ್ದೇ ಉದ್ಯೋಗ, ಸಂಪಾದನೆಯಿದ್ದರೂ, ...ುಖಕ್ಕೆ ಬಣ್ಣ ಹಚ್ಚುವ ತನಕ ಅವರ ಹಸಿವು ...ಗುವುದಿಲ್ಲ. ಕರಿಬಸವಯ್ಯ ಕೂಡ ಅದಕ್ಕೆ ...ೂರತಾದವರಲ್ಲ. 1979ರ ವೇಳೆಗೆ ...ಬಸವಯ್ಯ ತಮ್ಮ ಸ್ನೇಹಿತ ಹಾಗೂ ರಂಗ ...ರ್ದೇಶಕ ಕೆ.ಎಸ್.ಡಿ.ಎಲ್. ಚಂದ್ರು ...ುಖಾಂತರ 'ರೂಪಾಂತರ' ಎಂಬ ...ಾಗತಂಡವನ್ನು ಸೇರಿದರು. ಒಮ್ಮೆ ...ಂ.ವೀರಭದ್ರಪ್ಪನವರ ಸಣ್ಣಕಥೆಗಳನ್ನು ಆಧರಿಸಿ ...ಮರ್ ನಿರ್ದೇಶಿಸಿದ್ದ 'ಕತ್ತಲನು ಬೆಳಕಿನ ತ್ರಿಶೂಲ ಹಿಡಿದ ಕಥೆ' ಎಂಬ ರಂಗಪ್ರಯೋಗ ನಡೆದಿತ್ತು. ಆಗ ತಂಡದ ನಟನೊಬ್ಬ ಕತ್ತಲನ ಪಾತ್ರವನ್ನು ಒಲ್ಲೆ ಎಂದಾಗ ಆ ಅವಕಾಶ ಕರಿಬಸವಯ್ಯರ ಪಾಲಾಯಿತು. ತಂಡದ ಬೇರೆ ಸದಸ್ಯರ ವಿರೋಧದ ನಡುವೆಯೂ ಆ ಪಾತ್ರವನ್ನು ಕರಿಬಸವಯ್ಯ ನಿರ್ವಹಿಸಿದರು. ನಾಟಕದ ಮೊದಲ ಪ್ರದರ್ಶನದಲ್ಲೇ ಕರಿಬಸವಯ್ಯನವರ ಖದರ್‌ಗೆ ಇಡೀ ರಂಗಮಂದಿರ ಬೆಚ್ಚಿಬಿದ್ದಿತ್ತು. ಆ ನಾಟಕದ ಮೂಲಕ ಕರಿಬಸವಯ್ಯ ತಾನೊಬ್ಬ ಪರಿಪೂರ್ಣ ನಟ ಎಂಬುದನ್ನು ಇಡೀ ಸಾಂಸ್ಕೃತಿಕ ಲೋಕಕ್ಕೆ ಜಾಹೀರು ಮಾಡಿದರು.

ವ್ಯವಸ್ಥೆಯ ಲೋಪಗಳ ವಿರುದ್ಧ ಸಿಡಿದೆದ್ದು ತ್ರಿಶೂಲ ಹಿಡಿಯುವ 'ಕತ್ತಲ'ನ ಪಾತ್ರ ಕರಿಬಸವಯ್ಯರ ಬದುಕಿನ ಮೊಟ್ಟಮೊದಲ ಟರ್ನಿಂಗ್ ಪಾಯಿಂಟ್. ನಂತರ ಪಿ. ಲಂಕೇಶರ 'ಗುಣಮುಖ'ದ ಅಲಾವಿಖಾನ್, 'ಮುಸ್ಸಂಜೆ ಕಥಾಪ್ರಸಂಗ'ದ ಬೂಸಿ ಬಸ್ಯ, 'ತಲೆದಂಡ'ದ ಬಸವಣ್ಣನ ಪಾತ್ರ ಹಾಗೂ ತೇಜಸ್ವಿಯವರ 'ಕಾರ್ವಾಲೋ'ದ ಬಿರಿಯಾನಿ ಕರಿಯನ ಪಾತ್ರಗಳು ಕರಿಬಸವಯ್ಯನವರಿಗೋಸ್ಕರವೇ ಸೃಷ್ಟಿಸಿದಂತಿದ್ದವು. ಹೀಗೆ ರಂಗಭೂಮಿಯನ್ನು ಬಿಗಿದಪ್ಪಿ ನಿರಂತರವಾಗಿ ನಟಿಸುತ್ತಿದ್ದ ಕರಿಬಸವಯ್ಯ ಮೊಟ್ಟಮೊದಲ ಬಾರಿಗೆ ಕಿರುತೆರೆಯಲ್ಲಿ ನಟಿಸಿದ್ದು 'ದೊಡ್ಡಮನೆ' ಧಾರಾವಾಹಿಯಲ್ಲಿ. ಆದರೆ ಕಿರುತೆರೆಯಲ್ಲಿ ಕರಿಬಸವಯ್ಯನವರಿಗೊಂದು ಶಾಶ್ವತ ಸ್ಥಾನ ಕಲ್ಪಿಸಿದ್ದು 'ಶೋಧ' ಎಂಬ ಸೀರಿಯಲ್ಲು. ಎನ್.ಎಸ್. ಶಂಕರ್ ನಿರ್ದೇಶನದ ಈ ಧಾರಾವಾಹಿಯಲ್ಲಿ ಮಾಸ್ಟರ್ ಮಂಜುನಾಥ್, ಮೈನಾ ಚಂದ್ರು ಮುಂತಾದವರು ನಟಿಸಿದ್ದರು. ಕಾಲೇಜಿನ ಹುಡುಗರು ಒಮ್ಮೆ ಟ್ರೆಕ್ಕಿಂಗ್ ಹೊರಟಾಗ ಅವರೊಂದಿಗೆ ಹೊರಡುವ ಸಹಾಯಕನ ಪಾತ್ರದಲ್ಲಿ ಕರಿಬಸವಯ್ಯ ನಟಿಸಿದ್ದರು. ಅಲ್ಲಿಂದ ಹಲವಾರು ಧಾರಾವಾಹಿಗಳಲ್ಲಿ ನಟಿಸಿದ ಕರಿಬಸವಯ್ಯನವರಿಗೆ ಹಿರಿತೆರೆಯಲ್ಲಿ ಅವಕಾಶ ಕೊಟ್ಟಿದ್ದು ನಾಗತಿಹಳ್ಳಿ ಚಂದ್ರಶೇಖರ್. ತಮ್ಮ ನಿರ್ದೇಶನದ ಮೊದಲ ಚಿತ್ರ 'ಉಂಡೂ ಹೋದ ಕೊಂಡೂ ಹೋದ' ಚಿತ್ರದಲ್ಲಿ ಹಾಲು, ಬೆಣ್ಣೆಗೆ ಆಸೆಪಟ್ಟು ಕೌ ಇನ್ಸ್‌ಪೆಕ್ಟರ್‌ನಿಂದ ಮೋಸಹೋಗುವ ಕರಿಮಳೆ ಪಾತ್ರವನ್ನು ನಾಗತಿಹಳ್ಳಿ ನೀಡಿದ್ದರು. ನಂತರ 'ಕೊಟ್ರೇಶಿ ಕನಸು' ಚಿತ್ರದಲ್ಲಿ ತನ್ನ ಮಗನನ್ನು ವಿದ್ಯಾವಂತನನ್ನಾಗಿ ಮಾಡಲು ಹೆಣಗಾಡುವ ತಂದೆ ದಿಬ್ಬನ ಪಾತ್ರದಲ್ಲಿ ಕೆ.ಬಿ. ಅದೆಷ್ಟು ಸಹಜವಾಗಿ ನಟಿಸಿದ್ದರೆಂದರೆ, ಅವರ ನಟನೆಗೆ ರಾಜ್ಯ ಪ್ರಶಸ್ತಿಯೂ ದೊರಕಿತು. ನಂತರ ಚಿತ್ರರಂಗದಲ್ಲಿ ಭದ್ರವಾಗಿ ಕಾಲೂರಿದ ಕೆ.ಬಿ. ಎಂದೂ ಹಿಂತಿರುಗಿ ನೋಡುವ ಪ್ರಮೇಯವೇ ಒದಗಿಬರಲಿಲ್ಲ. ರೂಪವಂತ ಹುಡುಗಿಯನ್ನು ಮದುವೆಯಾಗಲು ಇಚ್ಛಿಸುವ 'ಜನುಮದ ಜೋಡಿ'ಯ ಕುಡುಕ ಅಂದಾನಿ ಪಾತ್ರದ ಮೂಲಕ ಎಲ್ಲ ಬಗೆಯ ಚಿತ್ರಾಸಕ್ತರನ್ನು ಕರಿಬಸವಯ್ಯ ತನ್ನತ್ತ ಸೆಳೆದರು.



ತಲೆದಂಡದಲ್ಲಿ ಬಸವಣ್ಣನಾಗಿ...



'ಕತ್ತಲ'ನ ಪಾತ್ರದಲ್ಲಿ...

'ಯಾರಿಗೆ ಸಾಲುತ್ತೆ ಸಂಬಳ', 'ಜೇನುಗೂಡು', 'ಭೂಮಿತಾಯಿಯ ಚೊಚ್ಚಲ ಮಗ' ಸೇರಿದಂತೆ ಕರಿಬಸವಯ್ಯ ಈವರೆಗೆ 175 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಕರಿಬಸವಯ್ಯನವರನ್ನು, ರಂಗಭೂಮಿಯಷ್ಟು ಶುದ್ಧವಾಗಿ ಬಳಸಿಕೊಳ್ಳದ ಕನ್ನಡ ಚಿತ್ರರಂಗದವರು ಅವರಿಂದ ಹಲವೊಮ್ಮೆ ಅತಿರೇಕದ ಅಭಿನಯ ಮಾಡಿಸಿರುವ ಉದಾಹರಣೆಗಳಿಗೇನು ಕಡಿಮೆಯಿಲ್ಲ.

ಸದ್ಯ ಕಾಲೇಜಿನ ಕೆಲಸದಿಂದ ಸ್ವಯಂ ನಿವೃತ್ತಿ ಪಡೆದಿರುವ ಕರಿಬಸವಯ್ಯ ರಂಗಭೂಮಿ, ಕಿರುತೆರೆ ಹಾಗೂ ಸಿನಿಮಾ ನಟನೆಯೊಂದಿಗೆ ಹರಿಕಥಾ ವಿದ್ವಾಂಸರಾಗಿಯೂ ಸಾಕಷ್ಟು ಹೆಸರು ಮಾಡಿದ್ದಾರೆ. ತೆರೆಯ ಮೇಲೆ ನೋಡುಗರನ್ನು ನಕ್ಕುನಲಿಸುವ ಕೆ.ಬಿ. ಹರಿಕಥೆ ಮಾಡಲು ನಿಂತರೆಂದರೆ ನೆರೆದಿರುವವರನ್ನು ಭಕ್ತಿಯ ಪರಾಕಾಷ್ಠೆಗೆ ಕೊಂಡೊಯ್ದುಬಿಡುತ್ತಾರೆ. ಅಂಥ ಅಸಾಧಾರಣ ಪಾಂಡಿತ್ಯ ಅವರದ್ದು.

ಸಾಮಾನ್ಯವಾಗಿ ಹಾಸ್ಯನಟರು ಖಾಸಗಿ ಜೀವನದಲ್ಲಿ ಗಂಭೀರ ಸ್ವಭಾವದವರಾಗಿರುತ್ತಾರೆ. ಆದರೆ ಕೆ.ಬಿ. ಜೊತೆಗಿದ್ದರೆಂದರೆ ಎಲ್ಲರೂ ನಗೆಗಡಲಲ್ಲಿ ತೇಲುತ್ತಿರುತ್ತಾರೆ. ಒಮ್ಮೆ ಇಲ್ಲಿನ ರಂಗಭೂಮಿಯನ್ನು ಅಧ್ಯಯನ ಮಾಡಲು ಬಂದಿದ್ದ ವಿದೇಶಿಯೊಬ್ಬರು ಇವರನ್ನು 'ಕ್ಯಾರಿ ಬಸವಯ್ಯ' ಎಂದೇ ಸಂಬೋಧಿಸುತ್ತಿದ್ದರಂತೆ. ಅವರಿಗೆ ಅರ್ಥಮಾಡಿಸಲು ಕರಿಬಸವಯ್ಯ ಕಡೆಗೆ ತನ್ನ ಹೆಸರನ್ನು 'ಬ್ಲಾಕ್ ಬುಲ್ಲಯ್ಯ' ಎಂದು ಹೇಳಿ ಪರಿಚಯಿಸಿಕೊಂಡಿದ್ದರಂತೆ.

ಒಬ್ಬ ನಟನಾಗಿ ದಲಿತ, ಹಿಂದುಳಿದವನ ಪಾತ್ರಗಳಲ್ಲಿ ನಟಿಸುತ್ತಾ ಸಾಂಸ್ಕೃತಿಕ ಲೋಕದಲ್ಲಿ ಶೋಷಿತರ ಪ್ರತಿನಿಧಿಯಾಗಿರುವ, ಕಪ್ಪು ವರ್ಣದವರ ಪಾಲಿಗೆ ನೆಚ್ಚಿನ ಐಕಾನ್ ಆಗಿರುವ ಕರಿಬಸವಯ್ಯನವರ ಪಾಲಿಗೆ ಐವತ್ತರ ನಂತರದ ದಿನಗಳು ಮತ್ತಷ್ಟು ಸ್ಫೂರ್ತಿದಾಯಕವಾಗಲಿ...

● ಅರುಣ್.ಜಿ



ನರಸಿಂಹರಾಜು ಕುಟುಂಬದ ಜುಗಾರಿ

...ಕನ್ನಡ ಚಿತ್ರರಂಗದ ಹಾಸ್ಯ ಚಕ್ರವರ್ತಿ ...ರಸಿಂಹರಾಜುರವರನ್ನು ಯಾರು ತಾನೆ ...ರೆಯಲು ಸಾಧ್ಯ? ಆದರೆ ಕನ್ನಡ ಚಿತ್ರರಂಗ ...ರನ್ನು ಸ್ಮರಿಸುತ್ತಿಲ್ಲ ಎಂಬುದು ಕೂಡಾ ಅಷ್ಟೇ ...ಸತ್ಯ! ಹೀಗೆ ನರಸಿಂಹರಾಜುರವರು ಜನರ ...ನಸಿನಿಂದ ನಿಧಾನವಾಗಿ ದೂರ ...ಸರಿಯುತ್ತಿರುವಾಗ ಅವರನ್ನು ನೆನಪಿಸುವ ...ರ್ಯಕ್ರಮವೊಂದು ಮೊನ್ನೆ ನಡೆಯಿತು.

...ಅದು 'ಜುಗಾರಿ' ಚಿತ್ರ ತಂಡದ ಪತ್ರಿಕಾಗೋಷ್ಠಿ ...ಚಿತ್ರ ತಂಡದವರು ಸದ್ದಿಲ್ಲದೆ ಈ ಚಿತ್ರದ ...ಕರಣವನ್ನು ಮುಗಿಸಿದ್ದಾರೆ. ಅದನ್ನು ತಿಳಿಸುವ ...ದ್ದೇಶದಿಂದಲೇ ಆ ಪತ್ರಿಕಾಗೋಷ್ಠಿ ವ್ಯವಸ್ಥೆಯಾಗಿತ್ತು. ...ರೆ ಅಲ್ಲಿಗೆ ಹೋದಾಗ ಒಂದು ಅಚ್ಚರಿ ಕಾದಿತ್ತು. ...ಅದೇನೆಂದರೆ ನರಸಿಂಹರಾಜುರವರ ಇಬ್ಬರು ...ಮೊಮ್ಮಕ್ಕಳು ಈ ಚಿತ್ರದ ಮುಖಾಂತರ ಬಣ್ಣದ ...ಲೋಕಕ್ಕೆ ಕಾಲಿಟ್ಟಿದ್ದಾರೆ. ಚಿತ್ರದ ಹೀರೋ ಅವಿನಾಶ್ ...ಈ ಚಿತ್ರದ ನಿರ್ದೇಶಕ ಅರವಿಂದ್ ಇಬ್ಬರೂ ಹಾಸ್ಯಚಕ್ರವರ್ತಿಯ ಮೊಮ್ಮಕ್ಕಳು. ಅವಿನಾಶ್ ಈಗಾಗಲೇ ಒಂದೆರಡು ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ನಿರ್ವಹಿಸಿದ್ದರೂ ಫುಲ್‌ಲೆಂತ್ ಹೀರೋ ಆಗಿ ಕಾಣಿಸಿಕೊಳ್ಳುತ್ತಿರುವುದು ಇದೇ ಮೊದಲ ಬಾರಿ. ಹಾಗೆಯೇ ಅರವಿಂದ್ ಕೂಡಾ. ಆತ ರಂಗಭೂಮಿ ಮತ್ತು ಜಾಹೀರಾತು ಪ್ರಪಂಚದಲ್ಲಿ ಸಾಕಷ್ಟು ವರ್ಷಗಳಿಂದ ಕೆಲಸ ಮಾಡಿದ್ದರೂ ಸಿನಿಮಾಕ್ಕೆ ಕಾಲಿಟ್ಟಿದ್ದು ಇದೇ ಮೊದಲ ಬಾರಿಗೆ.

ವಿಶೇಷವೆಂದರೆ 'ಜುಗಾರಿ' ಚಿತ್ರೀಕರಣವೆಲ್ಲ ಮುಗಿಯುವ ತನಕ ಇವರು ನರಸಿಂಹರಾಜು ಅವರ ಮೊಮ್ಮಕ್ಕಳು ಎಂದು ಯಾರಿಗೂ ಗೊತ್ತೇ ಇರಲಿಲ್ಲವಂತೆ! ಅಪ್ಪ-ಅಜ್ಜನ ಹೆಸರನ್ನು, ಜನಪ್ರಿಯತೆಯನ್ನು ಸಿನಿಮಾ ಉದ್ಯಮದಲ್ಲಿ ಅವರ ಮುಂದಿನ ಪೀಳಿಗೆಯವರು ಬಳಸಿಕೊಳ್ಳುವುದು ಸಹಜ. ಆದರೆ ಇವರಿಬ್ಬರೂ ಅದಕ್ಕೆ ಅಪವಾದವೆಂಬಂತೆ ಕಾಣಿಸಿಕೊಂಡರು.

ಇವರಿಬ್ಬರನ್ನು ಚಿತ್ರರಂಗಕ್ಕೆ ಕರೆತರುವಲ್ಲಿ ಪ್ರಮುಖ ಪಾತ್ರವಹಿಸಿದವರೆಂದರೆ ನರಸಿಂಹರಾಜುರವರ ಪುತ್ರಿ ಸುಧಾ ನರಸಿಂಹರಾಜು. "ನನಗೂ ಈಗ ನಟನೆಯ ಅವಕಾಶ ಕಡಿಮೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ನನ್ನ ತಂದೆಯವರ ಹೆಸರನ್ನು ಹೇಗಾದರೂ ಮುಂದುವರೆಸುವಂತಾಗಬೇಕು; ಇದು ಇಲ್ಲಿಗೆ ನಿಲ್ಲಬಾರದು ಎಂದು ನನಗೆ ಅನಿಸಲು ಆರಂಭವಾಯಿತು. ಆಗ ಅವಿನಾಶ್ ಮತ್ತು ಅರವಿಂದ್ ನೆನಪಿಗೆ ಬಂದರು. ನಿರ್ಮಾಪಕರಾದ ರಮೇಶ್ ಹಣ ಹೂಡಲು ಮುಂದಾದ ತಕ್ಷಣ ಚಿತ್ರ ಸೆಟ್ಟೇರಿತು" ಎಂದು ಪತ್ರಿಕಾಗೋಷ್ಠಿಯ ಆರಂಭದಲ್ಲೇ ತುಂಬಾ ಭಾವನಾತ್ಮಕವಾಗಿ ಸುಧಾ ಹೇಳಿದರು.



ಈ ಚಿತ್ರದಲ್ಲಿ ನರಸಿಂಹರಾಜುವರ ಮರಿಮೊಮ್ಮಗನಾದ ಸಮರ್ಥ್ ಎಂಬ ಪುಟಾಣಿ ಕೂಡಾ ನಟಿಸಿರುವುದು ಮತ್ತೊಂದು ವಿಶೇಷ. ಅಲ್ಲಿಗೆ ನಾಲ್ಕು ತಲೆಮಾರಿನತನಕ ನರಸಿಂಹರಾಜು ನೆನಪಿನ ದೋಣಿ ಸಾಗಿದಂತಾಯಿತು. ಈ ಚಿತ್ರದಲ್ಲಿ ಸುಧಾ ನರಸಿಂಹರಾಜು ಯಾಕೆ ಪಾತ್ರ ನಿರ್ವಹಿಸಿಲ್ಲ ಎಂಬ ಪ್ರಶ್ನೆಗೆ ನಿರ್ದೇಶಕ ಅರವಿಂದ್ ತುಂಬಾ ಗಂಭೀರವಾಗಿ ಉತ್ತರಿಸಿದ್ದು ಹೀಗೆ: "ನಾನು ದಾಖಲೆಗಾಗಿ ಚಿತ್ರ ಮಾಡಿಲ್ಲ. ಆಕೆಗೆ ಹೊಂದುವಂತಹ ಪಾತ್ರ ಕೂಡಾ ನನ್ನ ಚಿತ್ರದಲ್ಲಿಲ್ಲ. ಹೀಗಾಗಿ ಆಕೆಗೆ ಈ ಚಿತ್ರದಲ್ಲಿ ನಟಿಸಲು ಅವಕಾಶವಾಗಲಿಲ್ಲ."

ಈ ಪತ್ರಿಕಾಗೋಷ್ಠಿ ನರಸಿಂಹರಾಜು ಅವರ ಧರ್ಮಪತ್ನಿಯ ಸಮ್ಮುಖದಲ್ಲೇ ನಡೆದಿದ್ದರಿಂದ ಇಡೀ ಗೋಷ್ಠಿಗೊಂದು ಭಾವನಾತ್ಮಕ ಟಚ್ ಇತ್ತು. 'ಜುಗಾರಿ' ಚಿತ್ರ ಸಸ್ಪೆನ್ಸ್ ಮತ್ತು ಥ್ರಿಲ್ಲರ್ ಕಥಾವಸ್ತುವಿನ ಚಿತ್ರವಾಗಿದೆ ಎನ್ನುತ್ತಾರೆ ನಿರ್ದೇಶಕ ಅರವಿಂದ್. ಆದರೆ ಹಾಸ್ಯ ಚಕ್ರವರ್ತಿಯ ಮೊಮ್ಮಕ್ಕಳಿರುವ ಈ ಚಿತ್ರದಿಂದ ಪ್ರೇಕ್ಷಕ ಹಾಸ್ಯವನ್ನು ನಿರೀಕ್ಷಿಸುತ್ತಾನೆ; ಅಂತಹ ಪ್ರೇಕ್ಷಕನಿಗೆ ನಿರಾಸೆಯಾಗುವುದಿಲ್ಲವೇ? ಎಂಬ ಪ್ರಶ್ನೆಗೆ ಕೂಡಾ ನಿರ್ದೇಶಕರಲ್ಲಿ ಉತ್ತರವಿತ್ತು. "ಈ ಚಿತ್ರದಲ್ಲಿ ಸಾಂದರ್ಭಿಕ ಹಾಸ್ಯಗಳು ಬೇಕಾದಷ್ಟಿವೆ. ಚಿತ್ರದ ರೀ-ರೆಕಾರ್ಡಿಂಗ್ ಸಂದರ್ಭದಲ್ಲಿ ಸ್ಟುಡಿಯೋದಲ್ಲಿದ್ದವರೆಲ್ಲ ಗೊಳ್ಳನೆ ನಕ್ಕಿದ್ದು ನನಗೆ ಧೈರ್ಯ ನೀಡಿದೆ" ಎಂದು ಹೇಳಿದರು.

ಅದೇನೇ ಇರಲಿ, ಸುಮಾರು ಮೂರು ದಶಕಗಳ ನಂತರ ಕನ್ನಡಿಗರು ಹಾಸ್ಯಚಕ್ರವರ್ತಿಯನ್ನು ಮತ್ತೊಮ್ಮೆ ನೆನೆಯುವಂತೆ ಮಾಡಿದ ಅವರ ಮೊಮ್ಮಕ್ಕಳಿಗೆ ನಮನಗಳು.

● ಶ್ರೇಷ್ಠ

ಮಧ್ಯರಾತ್ರಿಯ ಮೋಜು ಮಸ್ತಿ



ಇತ್ತೀಚೆಗಷ್ಟೇ 'ಲಂಕೇಶ್' ಲೂಸ್ ಮಾದ ಮತ್ತು ಪ್ರಜ್ವಲ್ ಎಂಬ ಇಬ್ಬರು ತುಂಟ ಹುಡುಗರ ರಸಿಕ ಚೇಷ್ಟೆಗಳ ಬಗ್ಗೆ ವರದಿ ಮಾಡಿತ್ತು, ಆ ಸಂದರ್ಭದಲ್ಲಿ ಲೂಸ್ ಮಾದನ ತಂದೆ ಸಿದ್ದರಾಜು ಅವರು "ಪಾಪ, ನಮ್ಮುಡ್ಗ ಅಂತೋನಲ್ಲ, ಇನ್ನೂ ಈಗಷ್ಟೇ ಪ್ರಪಂಚ ನೋಡ್ತಿರೋ ನನ್ಮಗನ ಮೇಲೆ ಹಿಂಗೆಲ್ಲಾ ಬರೆದುಬಿಟ್ಟಿದ್ದಾರೆ'' ಅಂತಾ ಲೊಚ್‌ಲೊಚ್ ಎಂದಿದ್ದರು. ತನ್ನ ಮಗನ ಬಾಯಲ್ಲಿ ಬೆರಳಿಟ್ಟರೆ ಚೀಪೋಕೂ ಬರದ ಹಾಲುಗಲ್ಲದ ಮುಗ್ಧ... ಎಂಬಂತೆ ಮಾತಾಡುವ ಸಿದ್ದರಾಜು ಮೊನ್ನೆ ಆಗಸ್ಟ್ 29ರಂದು ಬೆಂಗಳೂರಿನ ಮಾರತ್‌ಹಳ್ಳಿ ಬಳಿ ನಡೆದ ನಡುರಾತ್ರಿಯ ಪಾರ್ಟಿಯಲ್ಲಿ ತನ್ನ ಮಗನ ದಿವ್ಯ ದರುಶನವನ್ನೊಮ್ಮೆ ನೋಡಬೇಕಿತ್ತು!

ಯವ್ವಿಯವ್ವೀ ಲೂಸು ಇಷ್ಟೊಂದು ಟೈಟಾಗ್ತಾನಾ...? ಎಂದು ಅಲ್ಲಿ ಸೇರಿದ್ದ ಎಲ್ಲ ಹೆಂಡಗುಡುಕರೂ ಬಾಯಿಮೇಲೆ ಬೆರಳಿಡುವಷ್ಟರ ಮಟ್ಟಿಗೆ ಚಿತ್ತಾಗಿದ್ದ ಯೋಗಿ. ಎಂದಿನಂತೆ ತನ್ನ ಪೋರ್ಕಿ ಪಟಾಲಮ್ಮಿನೊಂದಿಗೆ ಆ ಪಾರ್ಟಿಗೆ ಲಗ್ಗೆಯಿಟ್ಟಿದ್ದ ಯೋಗಿ ಹೈಲೆವೆಲ್ ಲಲನೆಯರ ಸೊಂಟ ಗಿಲ್ಲುತ್ತಾ, ಅವರನ್ನು ಅಪ್ಪಿಕೊಳ್ಳುತ್ತಾ, ಪಪ್ಪಿ ಕೊಡುತ್ತಾ ಸಂಪೂರ್ಣ ಮೈಮರೆತುಬಿಟ್ಟಿದ್ದ.

ನಾಗತಿಹಳ್ಳಿಯವರ 'ಮಾತಾಡ್ ಮಾತಾಡು ಮಲ್ಲಿಗೆ', ಕಾಶಿನಾಥ್ ಮಗನ 'ಬಾಜಿ' ಸೇರಿದಂತೆ ಚಿಲ್ಲರೆಯಾಗಿ ಅಲ್ಲಿ ಇಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸುವ ಶ್ರೀಮಂತ ಹುಡುಗ ಸಂತೋಷ್‌ನ ಹುಟ್ಟುಹಬ್ಬದ ಪಾರ್ಟಿಯದು. ರಾತ್ರಿ ಒಂಭತ್ತೂವರೆಗೆ ಆರಂಭವಾಗಿ ಬೆಳಗ್ಗಿನ ಜಾವ ನಾಲ್ಕು ಗಂಟೆಯಾದರೂ ಮುಗಿಯದ ನೈಟ್‌ಔಟ್ ಪಾರ್ಟಿ ಅದು. ಲೂಸ್ ಮಾದ, ದಿಗಂತ್ ಮತ್ತು ಪ್ರಜ್ವಲ್ ಸೇರಿದಂತೆ ಹಲವಾರು ಯುವ ನಟರು, ಕತ್ತಲ ಪಾರ್ಟಿಗಳಲ್ಲಿ ಮಾತ್ರ ಕಾಣಿಸಿಕೊಳ್ಳುವ ಒಂದಷ್ಟು ರಾತ್ರಿರಾಣಿಯರು ಸೇರಿದಂತೆ ಸಂತೋಷನ ಆತ್ಮೀಯ ಸ್ನೇಹಿತರೆಲ್ಲರೂ ಅಲ್ಲಿದ್ದರು.



'ದುಬೈನಲ್ಲಿ ಕನ್ನಡ ಚಿತ್ರದ ಅವಾರ್ಡ್ ಫಂಕ್ಷನ್ ಮಾಡ್ತೀನಿ...' ಅದೂ ಇದೂ ಎಂದು ಹೇಳಿ ಒಂದಿಷ್ಟು ಹೆಸರು ಮಾಡಿದ್ದವನು ಈ ಸಂತೋಷ್. ಇದರ ಜೊತೆಗೆ ಮಾಡಲಿಂಗ್ ಯುವತಿಯರಿಗೆ ಸಿನಿಮಾದಲ್ಲಿ ಅವಕಾಶ ಕೊಡಿಸುತ್ತೇನೆ ಎಂದು ಹುಸಿ ಆಸೆ ಹುಟ್ಟಿಸಿ, ಕಡೆಗೆ ಅವರ ಬೆನ್ನು ಬೀಳುತ್ತಾನೆ ಎಂಬ ಆರೋಪಗಳು ಈತನ ಬಗ್ಗೆ ಆಗಾಗ್ಗೆ ಕೇಳಿಬರುತ್ತಲೇ ಇರುತ್ತವೆ. ಸಣ್ಣಪುಟ್ಟ ಕಾರಣಗಳಿಗೂ ಪಾರ್ಟಿಗಳನ್ನು ಏರ್ಪಡಿಸಿ, ಒಂದಷ್ಟು ಇಂಗ್ಲಿಷ್ ಪತ್ರಿಕೆಯ ಯುವ ಪತ್ರಕರ್ತರನ್ನು, ಮೋಜಿಗಾಗಿ ಹಂಬಲಿಸುವ ಯುವ ನಟಿಯರನ್ನು ಸೇರಿಸಿಕೊಂಡು ಮಜಾ ಮಾಡುವುದು ಈತನ ಹವ್ಯಾಸ.

ಇಂಥವನ ಅಡ್ಡಾದಲ್ಲಿ ಲೂಸ್ ಮಾದ, ದಿಗಂತ್‌ನಂಥ ಪುಂಡ ಹುಡುಗರಿಗೆ ದುರಭ್ಯಾಸಗಳ ಕೋಚಿಂಗ್ ಸಿಗದೇ ಇನ್ನೇನು ಸಿಗಲು ಸಾಧ್ಯ?



ಆ ಹುಡುಗ ಬದಲಾಗಿದ್ದಾನಾ?

ಸಾಮಾನ್ಯವಾಗಿ ಎರಡು ಬಗೆಯ ಪೋಷಕರಿರುತ್ತಾರೆ. ತಮ್ಮ ಮಕ್ಕಳು ಮಾಡಿದ ತಪ್ಪುಗಳನ್ನೆಲ್ಲಾ ಮರೆಮಾಚಿ 'ಅದು ತಪ್ಪೇ ಅಲ್ಲ' ಎಂದು ಸಮರ್ಥಿಸಿಕೊಂಡು ತಮ್ಮ ಮಕ್ಕಳ ಬದುಕು ಹದಗೆಡುವ ಹಾದಿಯನ್ನು ಸುಗಮವಾಗಿಸುವ ತಂದೆತಾಯಿ ಒಂದು ರೀತಿಯವರಾದರೆ, ಮತ್ತೊಂದು ರೀತಿಯ ಪೋಷಕರು ತಮ್ಮ ಮಕ್ಕಳು ಊರು ಮೇಯಲು ಶುರುಮಾಡಿದ್ದಾರೆ ಎಂಬುದು ಅರಿವಾಗುತ್ತಿದ್ದಂತೇ ಅವರನ್ನು ಕರೆದು ಗಿಣಿಗೆ ಹೇಳುವಂತೆ ಬುದ್ಧಿಹೇಳಿ ಅವರನ್ನು ಸರಿ ದಾರಿಗೆ ತರುತ್ತಾರೆ.

ಡೈನಾಮಿಕ್ ಸ್ಟಾರ್ ದೇವರಾಜ್ ಎರಡನೆ ರೀತಿಯ ತಂದೆ. ತನ್ನ ಮಗ ಪ್ರಜ್ವಲ್‌ನ ಪ್ರಲಾಪಗಳು ಹೊರಬೀಳುತ್ತಿದ್ದಂತೇ ಅಲರ್ಟ್ ಆದ ದೇವು ಆತನನ್ನು ಕರೆದು ಬುದ್ಧಿ ಹೇಳಿದರು. "ನಿನ್ನಂಥ ಹುಡುಗನಿಗೆ ಈ ವಯಸ್ಸಿಗೇ ಸ್ಟಾರ್‌ಗಿರಿ ಬಂದರೆ ಇಂಥ ತಪ್ಪುಗಳು ನಡೆಯುವುದು ಸಹಜ. ಇನ್ನು ಮುಂದೆ ಇಂಥ ಚೆಲ್ಲಾಟಗಳನ್ನು ಬಿಟ್ಟುಬಿಡು'' ಎಂದು ನಯವಾಗಿ ಹೇಳಿದರು.



ಸ್ನೇಹಿತ ಸಂತೋಷ್‌ನ ಒತ್ತಾಯಕ್ಕೆ ಮಣಿದು ಮೊನ್ನಿನ ನೈಟ್‌ಔಟ್ ಪಾರ್ಟಿಗೆ ಪ್ರಜ್ವಲ್ ಕೂಡಾ ಬಂದಿದ್ದನಾದರೂ "ಈಗ ಆಗಿರುವ ಅವಮಾನವೇ ಸಾಕು. ಹಿಂದೆ ಆಗಿರುವ ತಪ್ಪುಗಳು ಮತ್ತೆ ಆಗುವುದು ಬೇಡ. ಅಪ್ಪ ಅಮ್ಮ ನೊಂದುಕೊಳ್ತಾರೆ'' ಎಂದು ತನ್ನ ಸ್ನೇಹಿತರೊಂದಿಗೆ ಪ್ರಾಯಶ್ಚಿತ್ತದ ಮಾತಾಡಿದ ಪ್ರಜ್ವಲ್ ಮೋಜು-ಗೋಜುಗಳ ಸಹವಾಸಕ್ಕೆ ಹೋಗದೆ ಸೈಲೆಂಟಾಗಿ ಒಂದೆಡೆ ಕೂತಿದ್ದ. ಇದನ್ನೆಲ್ಲಾ ನೋಡಿದರೆ ಸದ್ಯಕ್ಕಂತೂ ಪ್ರಜ್ವಲ್ ಬಹಳ ಬದಲಾದಂತೆ ಕಾಣುತ್ತಿದೆ.


ಆದರೆ ಲೂಸ್ ಮಾದ ಮಾತ್ರ ಇನ್ನೂ ಲೂಸ್ ಲೂಸ್ ಆಗಿಯೇ ವರ್ತಿಸುತ್ತಿದ್ದಾರೆ. ಸಿದ್ದರಾಜು ತಮ್ಮ ಮಗನ ಮಂಗಾಟವನ್ನು ಮರೆಮಾಚುವುದನ್ನು ಬಿಟ್ಟು ದೇವೂ ದಾರಿಯನ್ನು ಅನುಸರಿಸಿದರೆ ಅವರಿಗೂ, ಅವರ ಮುದ್ದಿನ ಪುತ್ರನಿಗೂ ಲೇಸು!

● ಅರುಣ್

ರಾಜ್ ನಿವಾಸ ನೆಲಸಮ!

ಸದಾಶಿವನಗರದಲ್ಲಿರುವ ಡಾ. ರಾಜ್‌ಕುಮಾರ್ ಅವರ ಮನೆಯನ್ನು ಕೆಡವಲಾಗುತ್ತಿದೆ.

ಪ್ರತಿನಿತ್ಯ ರಾಜ್‌ಕುಮಾರ್ ಅವರ ಈ ಮನೆಮುಂದೆ ಹತ್ತಾರು ಅಭಿಮಾನಿಗಳು ಕಾದು ಕುಳಿತುಕೊಳ್ಳುತ್ತಿದ್ದ ಕಾಲವೊಂದಿತ್ತು, ಅವರೆಲ್ಲರೂ ರಾಜ್ಯದ ನಾನಾ ಭಾಗಗಳಿಂದ ಬರುತ್ತಿದ್ದ ರಾಜ್ ಅಭಿಮಾನಿಗಳಾಗಿರುತ್ತಿದ್ದರು. ರಸ್ತೆಯಲ್ಲಿ ನಿಂತು ಗೇಟಿನ ಹೊರಗಿನಿಂದ ಆ ಮನೆಯನ್ನು ನೋಡಿದ ನಂತರವೇ ಆ ಅಭಿಮಾನಿಗಳು ತಮ್ಮ ಊರುಗಳಿಗೆ ವಾಪಸ್ ಮರಳುತ್ತಿದ್ದರು.



ಗಾಂಧಿನಗರದ ಭಾಷೆಯಲ್ಲಿ ಈ ಮನೆಯನ್ನು 'ಹೆಡ್ ಆಫೀಸ್' ಎಂದು ಕರೆಯುತ್ತಾರೆ. ಆದರೆ ಇಂದು ಈ ಮನೆಯಲ್ಲಿ ಹೆಡ್‌ಮಾಸ್ಟರೂ ಇಲ್ಲ, ಅದು ಕನ್ನಡ ಚಿತ್ರರಂಗದ ಹೆಡ್ ಆಫೀಸ್ ಆಗಿಯೂ ಉಳಿದಿಲ್ಲ.

ಇವತ್ತು ರಾಜ್‌ಕುಮಾರ್ ಅವರ ಕುಟುಂಬದಲ್ಲಿ ಕಡಿಮೆಯೆಂದರೂ ಎಪ್ಪತ್ತು ಜನರಿದ್ದಾರೆ. ರಾಘವೇಂದ್ರ ರಾಜ್‌ಕುಮಾರ್ ಮತ್ತು ಪುನೀತ್ ಅವರ ಸಂಸಾರ ಕೂಡಾ ಇದೇ ಮನೆಯಲ್ಲೇ ವಾಸ್ತವ್ಯವಿದೆ. ಅವರಿಗೆಲ್ಲಾ ಆ ಪುಟ್ಟ ಮನೆಯಲ್ಲಿ ವಾಸ ಮಾಡಲು ಈಗ ಜಾಗ ಸಾಲದಂತಾಗಿದೆ. ಆದರೂ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ಜೊತೆಗೆ ಸಿನಿಮಾ ಲೋಕದ ಒಂದಷ್ಟು ಸದಸ್ಯರು ಎಲ್ಲರೂ ಒಂದೇ ಮನೆಯಲ್ಲಿ ವಾಸಿಸಬೇಕೆಂದೇ ಈಗ ಅದನ್ನು ಕೆಡವಿ ದೊಡ್ಡ ಮನೆಯನ್ನು ಕಟ್ಟುವುದು ರಾಜ್ ಕುಟುಂಬಕ್ಕೆ ಅನಿವಾರ್ಯವಾಗಿದೆ.

ರಾಜ್ ವಾಸವಾಗಿದ್ದ ಈ ಮನೆ ಅನೇಕ ಐತಿಹಾಸಿಕ ಘಟನೆಗಳಿಗೆ ಸಾಕ್ಷೀಭೂತವಾಗಿದ್ದ ಸ್ಥಳ. ಕನ್ನಡ ಚಿತ್ರರಂಗದ ಅನೇಕ ಅಭಿವೃದ್ಧಿ ಕಾರ್ಯಗಳು, ಮಹತ್ತರ ಯೋಜನೆಗಳು ರೂಪುಗೊಂಡದ್ದು ಈ ಮನೆಯಲ್ಲೇ. ಅಷ್ಟೇ ಅಲ್ಲ, ಐತಿಹಾಸಿಕ ಗೋಕಾಕ್ ಚಳವಳಿಯ ಬಹುತೇಕ ಕಾರ್ಯಕ್ರಮಗಳು ಜನ್ಮ ತಾಳಿದ್ದು ಇದೇ ಸದಾಶಿವನಗರದ ಮನೆಯಲ್ಲಿ, ಜೊತೆಗೆ ಈ ಮನೆಯಲ್ಲಿ ಅನೇಕ ಚಿತ್ರಗಳ ಚಿತ್ರೀಕರಣವೂ ನಡೆದಿದೆ. ಬಹುತೇಕ ನಿರ್ಮಾಪಕರು ತಮ್ಮ ಚಿತ್ರದ ಮುಹೂರ್ತವನ್ನು ಯಾವ್ಯಾವುದೋ ದೇವಮಂದಿರಗಳಲ್ಲಿ ಮಾಡಿದರೆ, ರಾಜ್ ಪುತ್ರರ ಬಹುತೇಕ ಎಲ್ಲ ಚಿತ್ರಗಳ ಮುಹೂರ್ತ ನಡೆದದ್ದು ಇದೇ 'ರಾಜ್‌ಮಂದಿರ'ದಲ್ಲಿ, ಕಾಡುಗಳ್ಳ ವೀರಪ್ಪನ್ ರಾಜ್‌ರನ್ನು ಅಪಹರಿಸಿದಾಗ ಅವರ ಬಿಡುಗಡೆಗೆ ತೆರೆಮರೆಯ ಸೂತ್ರಗಳು, ಫಾರ್ಮುಲಾಗಳು ರೂಪಗೊಂಡಿದ್ದೂ ಇಲ್ಲೇ. ಅನಂತರ



ರಾಜ್ ಬಿಡುಗಡೆಗೊಂಡು ಅವರನ್ನು ನೋಡಲು ಲೆಕ್ಕವಿಲ್ಲದಷ್ಟು ಕಲಾವಿದರು, ರಾಜಕಾರಣಿಗಳು ಈ ಮನೆಗೆ ಬಂದು ರಾಜ್‌ರನ್ನು ಭೇಟಿಯಾಗಿದ್ದುಂಟು.

ಸ್ವತಃ ರಾಜ್ ಅವರಿಗೆ ಈ ಮನೆಯ ಬಗ್ಗೆ ಎಲ್ಲಿಲ್ಲದ ವ್ಯಾಮೋಹ ಮತ್ತು ಸೆಳೆತವಿತ್ತು, ಅವರು ಜನಪ್ರಿಯತೆ ತುತ್ತತುದಿಯನ್ನು ತಲುಪಿದಾಗಲೂ, ಕೋಟಿಗಟ್ಟಲೆ ಹರಿದುಬಂದರೂ ಡಾ. ರಾಜ್ ಈ ಮನೆಯನ್ನು ಬಿ ಬೇರೆ ಕಡೆಗೆ ಹೋಗಲು ಮನಸ್ಸು ಮಾಡಲೇ ಇನ್ನೂ ವಿಶೇಷವೆಂದರೆ, 'ಬೇಡರ ಕಣ್ಣಪ್ಪ' ಚಿತ್ರ ನಿರ್ಮಾ ಎ.ವಿ.ಎಂ. ಚೆಟ್ಟಿಯಾರ್ ಅವರಿಂದ ಡಾ. ರಾಜ್ ಮನೆಯನ್ನು ಖರೀದಿಸಿದ್ದರು. 'ಬೇಡರ ಕಣ್ಣಪ್ಪ' ಚಿ ಪಾತ್ರಕ್ಕಾಗಿ ರಾಜ್ ಏಳು ಸಾವಿರ ರೂಪಾಯಿ ಸಂಭಾ ಪಡೆದಿದ್ದರು. ಅದಾದ ಕೆಲವು ವರ್ಷಗಳ ಬಳಿಕ ಸ ಶಿವನಗರದಲ್ಲಿದ್ದ ಚೆಟ್ಟಿಯಾರ್ ಅವರು ತಮ್ಮ ಸಿನಿ ಪರಿಕರಗಳ ದಾಸ್ತಾನುವಾಗಿದ್ದ ಈ ಮನೆಯನ್ನು ಮಾರ ಮಾಡಲು ನಿರ್ಧರಿಸಿದರು. ಆಗ ರಾಜ್ ಮನೆಯನ್ನು ಖರೀದಿಸುವ ಬಗ್ಗೆ ಆಸಕ್ತಿ ತೋರಿದ ತಮ್ಮ ಚಿತ್ರದಲ್ಲಿ ನಟಿಸಿದ ನಾಯಕ ನಟ ಎ ಕಾರಣಕ್ಕಾಗಿ ತುಂಬ ಕಡಿಮೆ ಬೆಲೆಗೆ ಚೆಟ್ಟಿಯ ಅವರು ಈ ಮನೆಯನ್ನು ರಾಜ್‌ಕುಮಾರ್ ನೀಡಿದ್ದರಂತೆ. ಕೊನೆಗೆ ತಮ್ಮ ಮದ್ರಾಸ್ ಮೊಕ ಗುಡ್‌ಬೈ ಹೇಳಿದ ರಾಜ್‌ಕುಮಾರ್ ಬೆಂಗಳೂ ಬಂದು ಈ ಮನೆಯಲ್ಲಿ ಜೀವಿಸಲಾರಂಭಿಸಿದ್ದ

ಹೀಗೆ ಹಲವಾರು ಸಾಂಸ್ಕೃತಿಕ, ಸಾಮಾ ಹಾಗೂ ರಾಜಕೀಯ ಘಟನೆಗಳಿಗೆ ಸಾಕ್ಷಿಯಾ ಈ ಮನೆ ಈಗ ನೆಲಸಮಗೊಂಡಿದೆ. ರಾ ಕುಟುಂಬದವರು ಈ ಜಾಗದಲ್ಲಿ ಮೂರು ಅಂತ ಮನೆ ಕಟ್ಟುತ್ತಿದ್ದಾರೆ.

ಕಾಲ ಚಕ್ರ ಉರುಳಿ ಮುಂದೆ ಸಾಗಿದೆ.. ..

● ಶ್ರೀ

ಸ್ಪರ್ಧಾ ಗೈಡ್
ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ನೇಮಕಾತಿ
ವಿಶೇಷಾಂಕ
ಗ್ರಾಮಪಂಚಾಯತಿ ಅಭಿವೃದ್ಧಿ ಅಧಿಕಾರಿ ಪರೀಕ್ಷೆಗಾಗಿ
ಸೆಪ್ಟೆಂಬರ್ 2009ರ ಹೊಸ ಸಂಚಿಕೆ
ಗೈಡ್ ವಿಶೇಷಾಂಕ
ಬೆಲೆ 20/-
ಗ್ರಾಮಪಂಚಾಯತಿ ಅಭಿವೃದ್ಧಿ ಅಧಿಕಾರಿ
ಪುಸ್ತಕ ಎಲ್ಲೆಡೆ ಲಭ್ಯ
ಬೆಲೆ 350/-
ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44